ಮುತ್ತಿನ ಹಾರ

ರುದ್ರಭಟ್ಟ

ಆರ್. ಲಕ್ಷ್ಮೀನಾರಾಯಣ



ಮುತ್ತಿನಹಾರ ಮಾಲಿಕೆ

ರುದ್ರಭಟ್ಟ

ಆಯ್ಕೆ
ಆರ್. ಲಕ್ಷ್ಮೀನಾರಾಯಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

RUDRABHATTA : *Selected work of Rudrabhatta's Jagannatha Vijaya.* Selected by R. Lakshminarayana, Published by Karnataka Sahitya Academy, Nripatunga Road, Bangalore - 560 001

First Impression : 1998 Pages : x + 82

Price : Rs. 16/-

ಪ್ರಕಾಶಕರು
ಟಿ.ಎಸ್. ದಕ್ಷಿಣಾಮೂರ್ತಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು - ೫೬೦ ೦೦೧

ಮುಖಪುಟ : ರಾ. ಸೂರಿ
ಮುಖಪುಟ ಮುದ್ರಣ : ದಿಕ್ಸೂಚಿ ಮುದ್ರಣ

ಅಕ್ಷರ ಜೋಡಣೆ ಮುದ್ರಣ
ಅಂಕಿತ ಎಂಟರ್‌ಪ್ರೈಸಸ್
ಜಯನಗರ, ಬೆಂಗಳೂರು

ಅಧ್ಯಕ್ಷರ ಮಾತು

''ನುಡಿದರೆ ಮುತ್ತಿನಹಾರದಂತಿರಬೇಕು'

ಕನ್ನಡ ಸಾಹಿತ್ಯ ಪರಂಪರೆಯ ಪರಿಚಯವನ್ನು ಸದಾ ನಮ್ಮ ನೆನಪಿಗೆ ತಂದುಕೊಳ್ಳುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯು 'ಮುತ್ತಿನ ಹಾರ' ಎಂಬ ಹೊಸ ಯೋಜನೆಯೊಂದನ್ನು ರೂಪಿಸಿದ್ದರ ಫಲ ಈ ಹೊತ್ತಗೆ. ಗಾತ್ರದಲ್ಲಿ ದೊಡ್ಡದಾದ ನಮ್ಮ ಸಾಹಿತ್ಯ ಕೃತಿಗಳನ್ನು ಈ ಹೊತ್ತಿನ ಎಲ್ಲ ಬಗೆಯ ಓದುಗರಿಗೆ, ವಾಚನದಿಂದಲೇ ಮನನಕ್ಕೆ ಬರುವಂತೆ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ನಮ್ಮ ಸಾಹಿತ್ಯ ಪರಂಪರೆಯ ಮಹತ್ವದ ಕೃತಿಗಳಿಂದ ಉಜ್ವಲವಾದ ಭಾಗಗಳನ್ನು, ಸೂಕ್ತಿ ಸೂಳ್ನುಡಿಗಳನ್ನು 'ಮುತ್ತಿನ ಹಾರ ಮಾಲಿಕೆ'ಯ ಈ ಕೃತಿಗಳಲ್ಲಿ ಸಂಗ್ರಹಿಸಲಾಗಿದೆ. ಈ ಆಯ್ಕೆಯು ಪರಿಸರ ಪ್ರೀತಿ, ಮಾನವ ಪ್ರೀತಿ, ಮನುಷ್ಯ ಸಂಬಂಧಗಳ ಉತ್ಕಟ ನೆಲೆಗಳು ಹಾಗೂ ಕನ್ನಡ ಸಂವೇದನೆಯ ಎಲ್ಲ ಜಾಗೃತ, ಜಾತ್ಯತೀತ, ಧರ್ಮ ನಿರಪೇಕ್ಷಿ ಮತ್ತು ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಒಳಗೊಂಡಿದೆ.

ಇಲ್ಲಿಯವರೆಗೆ ಈ ಮಾಲಿಕೆಯಲ್ಲಿ ೫೦ ಪುಸ್ತಕಗಳು ಪ್ರಕಟವಾಗಿವೆ. ಈವರೆಗೂ ಉಪೇಕ್ಷೆಗೆ ಒಳಗಾಗಿದ್ದ ತತ್ವಪದಕಾರರು ದೊಡ್ಡ ಪ್ರಮಾಣದಲ್ಲಿ ಬೆಳಕಿಗೆ ಬಂದುದು ಈ ಮಾಲಿಕೆಯ ವೈಶಿಷ್ಟ್ಯವಾಗಿದೆ. ರಾಮಪುರ ಬಕ್ಕಪ್ಪ, ಮೋಟ್ನಳ್ಳಿ ಹಸನಸಾಹೇಬ, ಕೊಳ್ಳೂರ ಹುಸನಾ ಸಾಹೇಬ, ಮಹಾಗಾಂವ ಮೀರಾಸಾಬ, ದ್ಯಾಗಾಯಿ ಗುಂಡಪ್ಪ ಮುಂತಾದವರ ತತ್ವಪದಗಳು ಮೊಟ್ಟಮೊದಲು ಪ್ರಕಟಗೊಂಡಿರುವುದು ಈ ಮಾಲಿಕೆಯಲ್ಲಿಯೇ. ೧೭ ಮತ್ತು ೧೮ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಸೃಜನಶೀಲತೆ ಬತ್ತಿ ಮೌನವಾಗಿರದೆ ಶಕ್ತಿಯುತ ಧ್ವನಿಯಲ್ಲಿ ತನ್ನ ಪ್ರತಿಭೆಯನ್ನು ಪ್ರಕಟಿಸಿದೆ ಎನ್ನುವುದನ್ನು ಈ ತತ್ವ ಪದಕಾರರು ತೋರಿಸಿಕೊಟ್ಟಿರುವುದನ್ನು ಈ ಮಾಲಿಕೆ ದಾಖಲಿಸಿದೆ. ಈ ಮಾಲಿಕೆಗೆ ಓದುಗರು ತುಂಬು ಹೃದಯದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಮತ್ತು ಸಲಹೆಗಳನ್ನೂ ನೀಡಿದ್ದಾರೆ. ೫೧ನೆಯ ಪುಸ್ತಕದಿಂದ ಹೊಸ ಸಂಪಾದಕ ಮಂಡಲಿ ಅಸ್ತಿತ್ವಕ್ಕೆ ಬಂದಿದೆ. ಇನ್ನೂ ೫೦ ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ನಮ್ಮದಾಗಿದೆ.

ಪ್ರಸ್ತುತ 'ರುದ್ರಭಟ್ಟ' ಪುಸ್ತಕವನ್ನು ತುಂಬು ಆಸ್ಥೆಯಿಂದ ಸಿದ್ಧಪಡಿಸಿಕೊಟ್ಟ ಶ್ರೀ ಆರ್. ಲಕ್ಷ್ಮೀನಾರಾಯಣ ಅವರಿಗೆ ಸಂಪಾದಕ ಮಂಡಳಿಯ ಪರವಾಗಿ ನನ್ನ ಧನ್ಯವಾದಗಳು.

ಶಾಂತರಸ
ಅಧ್ಯಕ್ಷ

ಸಂಪಾದಕ ಮಂಡಲಿ

ಅಧ್ಯಕ್ಷರು

ಶ್ರೀ ಶಾಂತರಸ

ಸದಸ್ಯರು

ಡಾ॥ ಎಸ್. ವಿದ್ಯಾಶಂಕರ್

ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್

ಶ್ರೀ ಪ್ರಭು ಖಾನಾಪುರೆ

ಶ್ರೀ ಎಸ್. ನಟರಾಜ ಬೂದಾಳು

ಸಂಚಾಲಕರು

ಶ್ರೀ ಲಿಂಗರಾಜು

ಪರಿವಿಡಿ

ಮುನ್ನುಡಿ

ಕನ್ನಡದ ಪ್ರೌಢ ಚಂಪೂಕಾವ್ಯಗಳ ಸರಣಿಯಲ್ಲಿ ರುದ್ರಭಟ್ಟನ 'ಜಗನ್ನಾಥ ವಿಜಯ'ಕ್ಕೆ ಒಂದು ಗಣ್ಯ ಸ್ಥಾನವಿದೆ. ಹನ್ನೆರಡು ಮತ್ತು ಹದಿಮೂರನೇ ಶತಮಾನಗಳಲ್ಲಿ ಉಕ್ಕಂದವಾಗಿ ಹರಿದ ದೇಸಿ ಸಾಹಿತ್ಯ ವಾಹಿನಿಯ ಭೋರ್ಗರೆತದ ನಡುವೆಯೂ, ಹಿಂದಿನ ಶತಮಾನದ ಚಂಪೂಸಾಹಿತ್ಯ ಪ್ರಕಾರದ ಸೆಲೆ ಬತ್ತದ ಹಾಗೆ ನೋಡಿಕೊಂಡು, ಅದರ ಪುನರುಜ್ಜೀವನಕ್ಕೆ ಕಾರಣರಾದ ಕವಿಗಳಲ್ಲಿ ರುದ್ರಭಟ್ಟ ವಿಶಿಷ್ಟನಾದವನು. ಧಾರ್ಮಿಕ ವಿಷಯವೊಂದನ್ನು ಕನ್ನಡದಲ್ಲಿ ಕಾವ್ಯಕ್ಕೆ ವಸ್ತುವಾಗಿ ಆರಿಸಿಕೊಳ್ಳುವ ವಿಚಾರದಲ್ಲಿ ಬ್ರಾಹ್ಮಣ ಕವಿಗಳು ಇನ್ನೂ ಮೀನ-ಮೇಷ ಎಣಿಸುತ್ತಿದ್ದಾಗ ವಿಷ್ಣು ಭಕ್ತಿ ಪಾರಮ್ಯದ ಈ ಚಂಪೂಕಾವ್ಯವನ್ನು ಮೊದಲು ರಚಿಸಿದ ಕವಿ ರುದ್ರಭಟ್ಟ. ಮುಗಳಿಯವರು ಹೇಳುವಂತೆ - ''ಇದು ಆ ಕಾಲದಲ್ಲಿ ಒಂದು ಕ್ರಾಂತಿಯೇ''.

ಕವಿಯ ಕಾಲದೇಶ ಮತ್ತು ಆಶ್ರಯ ಕುರಿತು

ಕವಿ ತನ್ನ ಬಗ್ಗೆಯಾಗಲಿ, ಕೃತಿರಚನೆಯ ಕಾಲದ ಬಗ್ಗೆಯಾಗಲಿ ಏನನ್ನೂ ಹೇಳಿಕೊಂಡಿಲ್ಲ. ಆದರೆ ಕವಿ ಸ್ಮರಿಸಿರುವ ಪೂರ್ವ ಕವಿಗಳು ಅವನು ಉಲ್ಲೇಖಿಸಿರುವ ಕೆಲವು ಐತಿಹಾಸಿಕ ವ್ಯಕ್ತಿಗಳು ಮತ್ತು ಘಟನೆಗಳು ಹಾಗೂ ಅನಂತರದ ಕವಿಗಳ ಉಲ್ಲೇಖ — ಇವುಗಳಿಂದ ವಿದ್ವಾಂಸರು ಕವಿಯ ಕಾಲ, ಸ್ಥಳ, ಆಶ್ರಯದಾತರ ಬಗ್ಗೆ ಕೆಲವೊಂದು ತೀರ್ಮಾನಗಳಿಗೆ ಬಂದಿದ್ದಾರೆ. ಕವಿಚರಿತಕಾರರಾದ ಶ್ರೀ ಆರ್. ನರಸಿಂಹಾಚಾರ್ಯರು ಕವಿಯ ಕಾಲ ಸುಮಾರು ಕ್ರಿ.ಶ ೧೧೮೫ ಇದ್ದಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಪ್ರಬಲ ಸಮರ್ಥನೆ ಎಂದರೆ, ಕವಿ ತನ್ನ ಗ್ರಂಥವನ್ನು ''ಚಂದ್ರಮೌಳಿ ಪ್ರಮುಖ ನಿಖಿಲ ವಿದ್ವಜ್ಜನಂ ಮೆಚ್ಚೆ ರುದ್ರಾಂಕನೆ ಪೇಳ್ದಂ'' ಎಂದು ಹೇಳಿಕೊಂಡಿರುವುದು. ಈ ಚಂದ್ರಮೌಳಿ ೧೧೭೩ ರಿಂದ ೧೨೨೦ರವರೆಗೆ ಆಳಿದ ಹೊಯ್ಸಳ ವೀರಬಲ್ಲಾಳನಲ್ಲಿ ಮಂತ್ರಿಯಾಗಿದ್ದನೆಂಬುದು ಕ್ರಿ.ಶ. ೧೧೮೧ರ ಶ್ರವಣಬೆಳುಗೊಳದ ३२೭ನೇ ಶಾಸನದಿಂದ ತಿಳಿದು ಬರುತ್ತದೆ. ಅಲ್ಲದೆ ಶಿವನಿಗೂ ತನ್ನ ಸ್ವಾಮಿಯಾದ ವೀರಬಲ್ಲಾಳನಿಗೂ

ಅನ್ವಯವಾಗುವಂತೆ 'ಅರಿಕಾಪುಧ್ವಂಸಿ' 'ಉಮಾಕಾಮಿನಿಜೀವಿತೇಶಂ' ಎಂಬ ವಿಶೇಷಣಗಳನ್ನು ಪ್ರಯೋಗಿಸಿದ್ದಾನೆ. ಉಮಾದೇವಿ ಎಂಬುವಳು ವೀರಬಲ್ಲಾಳನ ಪಟ್ಟ ಮಹಿಷಿಯಾಗಿದ್ದಂತೆ ಅರಸೀಕೆರೆಯ ಕ್ರಿ.ಶ. ೧೧೮೫ರ ಶಾಸನದಿಂದ ತಿಳಿದು ಬರುವುದರಿಂದ 'ಜಗನ್ನಾಥ ವಿಜಯ'ದ ರಚನಾ ಕಾಲ ಸು. ೧೧೮೫ ಆಗಿರಬೇಕೆಂಬುದು ಬಹುಜನ ವಿದ್ವಾಂಸರ ಅಭಿಪ್ರಾಯ. ಕವಿ ಹೊಯ್ಸಳನಾಡಿಗೆ ಸೇರಿದವನಾಗಿದ್ದನೆಂದು ಹೇಳಬಹುದು. ಕನ್ನಡದ ಮತ್ತೊಬ್ಬ ಕವಿ ನೇಮಿಚಂದ್ರನೂ ಇದೇ ರಾಜನ ಆಸ್ಥಾನದಲ್ಲಿದ್ದು ರುದ್ರಭಟ್ಟನ ಸಮಕಾಲೀನನಾಗಿದ್ದನೆಂಬುದನ್ನು ನೆನೆಯಬಹುದು.

ಕವಿಯ ವ್ಯಕ್ತಿತ್ವ : ಹರಿಹರರಲ್ಲಿ ಭೇದವನ್ನೆಣಿಸದ ರುದ್ರಭಟ್ಟ, ಸ್ಮಾರ್ತ ಬ್ರಾಹ್ಮಣ ಕವಿ. 'ಕೃತಿಶಾರದಾಭ್ರ ಚಂದ್ರಾತಪ', 'ಕವಿರಾಜ', ಮತ್ತು 'ವಚಸ್ಸುಂದರೀ ನೃತ್ಯನಿವಾಸ' ಎಂದು ತನ್ನ ಬಗ್ಗೆ ಹೇಳಿಕೊಂಡಿದ್ದಾನೆ. ಇವು ಆತನ ಬಿರುದುಗಳಿರಬೇಕು. ಕವಿಯ ವಿಷ್ಣುಭಕ್ತಿಯಂತೂ ಕಾವ್ಯದ ಉದ್ದಕ್ಕೂ ಅತಿಶಯವಾಗಿ ವ್ಯಕ್ತವಾಗಿದೆ. ತನಗಿಂತ ಹಿಂದಿನ ಸಂಸ್ಕೃತ ಕವಿಗಳಾದ ವಾಲ್ಮೀಕಿ, ವ್ಯಾಸ, ಹರ್ಷ, ಬಾಣ, ಕಾಳಿದಾಸಾದಿಗಳು ಹಾಗೂ ಕನ್ನಡದ ಪಂಪ, ಪೊನ್ನ, ಗುಣವರ್ಮ, ಶಾಂತಿವರ್ಮ ಮೊದಲಾದವರನ್ನು ಸ್ಮರಿಸಿದ್ದಾನೆ. ತನ್ನ ಕಾವ್ಯದ ಬಗ್ಗೆ ಅತ್ಯಂತ ಆತ್ಮವಿಶ್ವಾಸದಿಂದ ''ಇನಿಯುಳ ಸೋಂಕಿನಂತೆ, ಪೊಸ ಮಾವಿನ ಪೂವಿನ ಜೊಂಪದಂತೆ, ಚಂದನರಸದಣ್ಪಿನಂತೆ, ಪೂರ್ಣಚಂದ್ರನ ಸಿರಿಯಂತೆ - ಮನಮನಿರ್ಕುಳಿಗೊಳ್ಪುದು'' ಎಂದು ಹೇಳಿಕೊಂಡಿದ್ದಾನೆ. ಕವಿ ಪ್ರಗಲ್ಭ ಪಂಡಿತ ಕವಿ. 'ರಸಕಳಿಕೆ' ಎಂಬ ರಸಶಾಸ್ತ್ರವನ್ನು ಕುರಿತ ಗ್ರಂಥವನ್ನು ರುದ್ರಭಟ್ಟ ರಚಿಸಿದ್ದಾನೆಂದು ಸಾಳ್ವಕವಿಯ ಹೇಳಿಕೆ. ಆದರೆ ಅದು ದೊರೆತಿಲ್ಲ; ಈಗ ದೊರೆತಿರುವ ಆ ಹೆಸರಿನ ಗ್ರಂಥ ಸಂಸ್ಕೃತದ್ದು.

ಕಾವ್ಯ ಕುರಿತು : ಜಗನ್ನಾಥ ವಿಜಯ' ಕನ್ನಡದ ಮೊದಲ ಕೃಷ್ಣಭಕ್ತಿ ಕಾವ್ಯ. ರುದ್ರಭಟ್ಟನಿಗಿಂತ ಹಿಂದೆ ಚಾವುಂಡರಾಯ, ನೇಮಿಚಂದ್ರ ಮತ್ತು ಕರ್ಣಪಾರ್ಯರು ಜೈನ ಸಂಪ್ರದಾಯಾನುಸಾರಿಯಾಗಿ ಕೃಷ್ಣ ಕಥೆಯನ್ನು ಕನ್ನಡದಲ್ಲಿ ಹೇಳಿದ್ದರೂ, ಹರಿಹರರಲ್ಲಿ ಅಭೇದವನ್ನು ಕಲ್ಪಿಸಿ, ಕೃಷ್ಣಪಾರಮ್ಯವನ್ನು ಪ್ರತಿಪಾದಿಸುವ ಮೂಲಕ ವೈಷ್ಣವ ಸಂಪ್ರದಾಯದ ಕಾವ್ಯ ಬರೆದವರಲ್ಲಿ ರುದ್ರಭಟ್ಟನೇ ಮೊದಲಿಗ. ಆ ಅರ್ಥದಲ್ಲಿ ಇದು ಮೊದಲ ಕೃಷ್ಣ ಚರಿತೆ. ವಿಷ್ಣು ಪುರಾಣದ ೫-೬ನೇ ಸ್ಕಂಧಗಳಲ್ಲಿರುವ ಕಥೆಯನ್ನು ಆಧರಿಸಿ ೧೮ ಆಶ್ವಾಸಗಳ ಬೃಹತ್ ಚಂಪೂ ಕಾವ್ಯವಾಗಿ ರಚಿಸಿದ್ದಾನೆ. ಇದನ್ನು

ಬರೆಯುವಲ್ಲಿ ಕವಿಯ ಉದ್ದೇಶ - "ಕಾವ್ಯಸಮಾಧಿಯಿಂ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳತತ್ತ್ವಬೋಧಮುದ್ಯೋತಿಪುದು." ಕಾವ್ಯಯೋಗದ ಮೂಲಕ ಭಕ್ತಿ - ಜ್ಞಾನಯೋಗ ಸಾಧಿಸುವುದು ಕವಿಯ ಅಭೀಷ್ಟ.

ರುದ್ರಭಟ್ಟನ ಅಗ್ಗಳಿಕೆಯಿರುವುದು ಸರಳ ಕಥಾನಕದ ವೈದಿಕ ಪುರಾಣವೊಂದನ್ನು ವರ್ಣನೆಗಳಿಂದ ಪರಿಪುಷ್ಟವಾದ ಪ್ರೌಢ ಚಂಪೂ ಕಾವ್ಯವಾಗಿ ಪರಿವರ್ತಿಸಿರುವುದರಲ್ಲಿ. ಶ್ರೀಕೃಷ್ಣ ಜನನದಿಂದ ಸಾಲ್ವವಧೆಯವರೆಗಿನ ಕಥೆಯನ್ನು ಹದಿನೆಂಟು ಆಶ್ವಾಸಗಳಲ್ಲಿ ೨೦೩೯ ಪದ್ಯಗಳಲ್ಲಿ ಹೇಳಿದ್ದಾನೆ. ಶ್ರೀಕೃಷ್ಣನ ಏಕೋತ್ತರಶತಕೃತ್ಯಗಳು ಇದರಲ್ಲಿ ವರ್ಣಿತವಾಗಿವೆ.

ಮುಗಳಿಯವರು ಹೇಳುವಂತೆ -" ಈ ಕೃತಿಗೆ ವಿಷ್ಣು ಭಕ್ತಿಯೆ ಸ್ಥಾಯಿ, ಇದಕ್ಕೆ ಸತತ ಪೋಷಕವಾಗಿರುವುದು ಅದ್ಭುತ ರಸ." ಶೃಂಗಾರ, ವಾತ್ಸಲ್ಯ, ವೀರ ರಸಗಳಿಗೂ ವಿಸ್ತಾರವಾಗಿ ಇಂಬು ದೊರೆತಿದೆ. ಕಾವ್ಯಯೋಗದಿಂದ ಭಕ್ತಿ-ಜ್ಞಾನಯೋಗ ಸಾಕ್ಷಾತ್ಕಾರ ಸಾಧ್ಯವಾಗಿದೆ ಎಂಬುದಕ್ಕೆ ನಿದರ್ಶನವಾಗಿ ಅಕ್ರೂರನ ಶ್ರೀಕೃಷ್ಣ ಸಾಕ್ಷಾತ್ಕಾರ, ರಾಸಲೀಲೆಯ ಸಂದರ್ಭಗಳು ಸಾಕ್ಷಿಯಾಗಿವೆ. ರುದ್ರಭಟ್ಟ ಪ್ರಧಾನವಾಗಿ ಪಂಡಿತ ಕವಿ. ಹೀಗಾಗಿ ಕವಿ ಹದಿನೆಂಟು ವರ್ಣನೆಗಳವ್ಯಾಮೋಹಕ್ಕೆ ಒಳಗಾಗಿ ಅವನ ಕಾವ್ಯವೆಂಬುದು ಅನೇಕ ಸಂದರ್ಭಗಳಲ್ಲಿ ಪಾಂಡಿತ್ಯದ ಪಟ್ಟುಗಳನ್ನು ಪ್ರದರ್ಶಿಸುವ ಮಲ್ಲಶಾಲೆಯಾಗಿದೆ. ಇಷ್ಟೆಲ್ಲ ವರ್ಣನಾ ವೈವಿಧ್ಯಕ್ಕೆ ವಿಸ್ತಾರವಾದ ಕಥಾವಸ್ತುವೂ ಪೋಷಕವಾಗಿದೆ ಎಂದರೂ, ಕವಿ ಅನೇಕ ವೇಳೆ ಸಂಪ್ರದಾಯ ಶರಣನಾಗಿ ಕವಿ ಸಮಯಬದ್ಧನಾಗಿ ವರ್ಣಿಸುವುದರಿಂದ ಓದುಗರ ಸಹನೆಯನ್ನು ಬೇಡುತ್ತವೆ.

ಆದರೆ ಈ ಎಲ್ಲ ವರ್ಣನೆಗಳ ಮಧ್ಯದಲ್ಲೂ ಕಾವ್ಯದಲ್ಲಿ ಹೃದ್ಯವಾದ ಸನ್ನಿವೇಶಗಳಿವೆ, ಮನಸ್ಸಿಗೆ ಮುದಕೊಡುವ ಆರ್ದ್ರ ಪ್ರಸಂಗಗಳಿವೆ ಎಂಬುದನ್ನು ಮರೆತರೆ ಕವಿಗೆ ಅನ್ಯಾಯ ಮಾಡಿದಂತಾಗುತ್ತದೆ. ಮಾನವೀಯ ಭಾವನೆಗಳನ್ನು, ಗುಣಸ್ವಭಾವಗಳನ್ನು ಚಿತ್ರಿಸುವ ಇಂಥ ಭಾಗಗಳೆಲ್ಲವೂ ಮನೋಜ್ಞ ಕಾವ್ಯ ಭಾಗಗಳಾಗಿವೆ. ಅವುಗಳೆಂದರೆ ಕಂಸನ ಸೆರೆಮನೆಯಲ್ಲಿ ಮಕ್ಕಳಿಗಾಗಿ ದೇವಕಿ ಹಂಬಲಿಸುವುದು, ಕೃಷ್ಣನನ್ನು ಯಶೋದೆ ಮುದ್ದಾಡುವ ಸನ್ನಿವೇಶ, ಶ್ರೀಕೃಷ್ಣನ ಬಾಲಲೀಲೆಯ ವರ್ಣನೆಗಳು, ಅಕ್ರೂರನ ಕೃಷ್ಣಸಾಕ್ಷಾತ್ಕಾರದ ಪ್ರಸಂಗ, ಗೋಪಿಕೆಯರ ರಾಸಲೀಲೆ, ಕುವಲಯಾಪೀಡಮರ್ದನ, ಪಾರಿಜಾತಾಪಹರಣ ಪ್ರಸಂಗ, ಶಿಶುಪಾಲವಧೆ — ಇವೆಲ್ಲ ಅಂಥ ಭಾಗಗಳಾಗಿವೆ. ಸಾಂಪ್ರದಾಯಿಕ ವರ್ಣನೆಗಳಲ್ಲೂ ಹಲವೆಡೆ

ಕವಿಯ ಪ್ರತಿಭಾವಿಲಾಸ ಕಾವ್ಯಸೌಂದರ್ಯಕ್ಕೆ ಕಳೆಗಟ್ಟಿದೆ. ಕವಿ ಹೇಳುವಂತೆ ಇದು ''ವೈಷ್ಣವ ಕಾವ್ಯರಸಾರ್ಣವ'' ಎಂಬುದು ನಿಜ. ಕವಿಗಿರುವ ಪಾಂಡಿತ್ಯ ಪ್ರದರ್ಶನದ ವ್ಯಾಮೋಹಕ್ಕೆ ಸಂಯಮದ ಕಡಿವಾಣವಿದ್ದು, ಇನ್ನಷ್ಟು ಔಚಿತ್ಯ ಸಿದ್ಧಿಸಿದ್ದರೆ 'ಜಗನ್ನಾಥ ವಿಜಯ' ಮಹಾಕೃತಿ ಎನಿಸುತ್ತಿತ್ತು. ಈಗಿರುವಂತೆ ಅದೊಂದು ಶ್ರೇಷ್ಠ ಸತ್ಕಾವ್ಯ.

ಕೃತಜ್ಞತೆಯ ಮಾತು :

ಇಷ್ಟು ವಿಸ್ತಾರವಾದ ಕಾವ್ಯವನ್ನು, ''ಕತೆಯ ಮೆಯ್ಗಿಡದಲೀಯದಂತೆ'' ಶ್ರೇಷ್ಠ ಕಾವ್ಯ ಭಾಗಗಳನ್ನು ಹಾಗೂ ನಿದರ್ಶನಾರ್ಥವಾಗಿ ಚಂಪೂಗದ್ಯದ ಕೆಲವು ತುಣುಕುಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಕಥಾ ಸಂದರ್ಭದ ಗ್ರಹಿಕೆಗೆ ಅನುಕೂಲವಾಗುವಂತೆ ಅವುಗಳ ಹಿಂದುಮುಂದುಗಳನ್ನು ಗದ್ಯದಲ್ಲಿ ನೀಡಿ ಕಥಾ ಪ್ರಸಂಗಗಳಿಗೆ ಶೀರ್ಷಿಕೆಯನ್ನು ಅಳವಡಿಸಲಾಗಿದೆ. ಸಂಸ್ಕೃತ ಭೂಯಿಷ್ಠ ಸಮಾಸ ಪದಗಳು ಕಾವ್ಯದ ತುಂಬ ಇಡಿಕಿರಿದಿರುವುದರಿಂದ ಪದ್ಯಗಳನ್ನು ಅರ್ಥೈಸಲು ಅನುಕೂಲವಾಗುವಂತೆ ವಿವರವಾದ ಅನುಬಂಧವನ್ನು ಸೇರಿಸಿದೆ. ಪ್ರಾರಂಭದ ಐದು ಪದ್ಯಗಳಿಗೆ ಮಾತ್ರ ವಿವರವಾದ ವ್ಯಾಖ್ಯಾನ ಅಗತ್ಯವೆಂದು ಕಂಡಿದ್ದರಿಂದ ಅದನ್ನು ನೀಡಲಾಗಿದೆ. ಒಟ್ಟಾರೆಯಾಗಿ ಇವರಿಂದ ಓದುಗರಿಗೆ 'ಜಗನ್ನಾಥ ವಿಜಯ' ಕಾವ್ಯದ ಸ್ವಾರಸ್ಯ ಹಾಗೂ ರುದ್ರಭಟ್ಟ ಕವಿಯ ಪ್ರತಿಭೆ ಈ ಎರಡರ ಪರಿಚಯವೂ ತಕ್ಕಮಟ್ಟಿಗೆ ಆಗುವಂತಾದರೆ ನನ್ನ ಶ್ರಮ ಸಾರ್ಥಕ.

ಈ ಕಾವ್ಯವನ್ನು ಮುತ್ತಿನ ಹಾರ ಮಾಲಿಕೆ'ಗೆ ಸಿದ್ಧಪಡಿಸಿಕೊಡುವ ಸಂತೋಷದ ಕೆಲಸವನ್ನು ನನಗೆ ವಹಿಸಿಕೊಟ್ಟ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶಾಂತರಸರಿಗೆ, ಸಂಪಾದಕ ಮಂಡಳಿಯವರಿಗೆ ಹಾಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಟಿ.ಎಸ್. ದಕ್ಷಿಣಾಮೂರ್ತಿಯವರಿಗೆ ನನ್ನ ಅನನ್ಯ ಕೃತಜ್ಞತೆಗಳು.

ಆರ್. ಲಕ್ಷ್ಮೀನಾರಾಯಣ

೧. ಪೀಠಿಕೆ

ಕವಿಯು ತನ್ನ ಕಾವ್ಯದ ಪ್ರಾರಂಭದಲ್ಲಿ ಐದು ಪದ್ಯಗಳಲ್ಲಿ ಕ್ರಮವಾಗಿ ಶ್ರೀಕೃಷ್ಣ (ವಿಷ್ಣು), ಬ್ರಹ್ಮ ಶಿವ, ಸೂರ್ಯ ಹಾಗೂ ಗಣಪತಿಯನ್ನು ಸ್ತುತಿಸಿದ್ದಾನೆ. ಈ ಪದ್ಯಗಳು ನಾನಾರ್ಥ ಗರ್ಭಿತವಾಗಿದ್ದು ಪಂಚಪಾಷಾಣ ಪದ್ಯಗಳೆಂದೇ ಹೆಸರಾಗಿವೆ. * ಶ್ಲೇಷೆಯಿಂದ ಇವುಗಳು ತನ್ನ ಆಶ್ರಯದಾತ ರಾಜನಾದ ವೀರಬಲ್ಲಾಳನಿಗೂ ಅನ್ವಯವಾಗುವಂತೆ ರಚಿಸಿರುವುದು ಕವಿಯ ಚಮತ್ಕಾರ.

ವಿಷ್ಣು ಸ್ತುತಿ :

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರುತ್ಪುಷ್ಪಾಂಜಲಿ ಕ್ಷೇಪವ
ಕ್ಷೋೕರಂಗಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶ ಕೋ
ಟೀರ ವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯ ಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗೆ ಆನಂದಥು ಸಂದೋಹಮಂ ೧.

ಬ್ರಹ್ಮಸ್ತುತಿ :

ಜನನುತ ರಾಜಹಂಸನಯನಂ ಕಮಳಾವಸಥಂ ಕಳಾನಿಕೇ
ತನನೆನಿಸಿರ್ದ ಪೆಂಪುಪಮೆವೆತ್ತೊಡಮೇನೋ ಹಿರಣ್ಯಗರ್ಭನೆಂ
ದೆನಿಸಿಯುದಾರನೆಂಬ ರಜಮೊಂದಿಯೆ ಸತ್ವನಿಧಾನನೆಂಬ ಪೆಂ
ಪನುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ ೨.

ಶಿವಸ್ತುತಿ :

ಅರಿಕಾಮಧ್ವಂಸಿ ನಾಗವ್ರಜ ಮಯಕಟಕಂ ರಾಜರಾಜ ಪ್ರತಿಷ್ಠಾ
ನಿರತಂ ಲೀಲಾಕ್ರಮೋದಂಚಿತನಿರವಧಿ ಗಾಂಗೇಯಕಂ ದ್ವಿಟ್ಪುರಧ್ವಂ

---

* ಈ ಐದು ಮಂಗಳಪದ್ಯಗಳಿಗೆ ಅಜ್ಞಾತ ಪಂಡಿತನೊಬ್ಬ ಸಂಸ್ಕೃತದಲ್ಲಿ 'ಪಂಚಪಾಷಾಣ ವ್ಯಾಖ್ಯೆ' ಎಂಬ ಹೆಸರಿನಲ್ಲಿ ವ್ಯಾಖ್ಯಾನ ಬರೆದಿದ್ದಾನೆ.

ಸರತಕ್ರೋಧಂ ವೃಷಾಂಕಂ ವಿಬುಧನುತನುಮಾಕಾಮಿನೀಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗ ತ್ರಿಣೇತ್ರಂ ೩.

ಸೂರ್ಯ ಸ್ತುತಿ :

ಜನಚಿತ್ತಾಹ್ಲಾದಪಾದಂ ಸಕಲ ಧರಣಿ ಭೃನ್ಮಸ್ತಕನ್ಯಸ್ತಮಾಗಿ
ರ್ಜಿನಮುಚ್ಚಂಡ ಪ್ರತಾಪೋದಯಮರಿಕುಮುದಾ ಭೋಗವಿಧ್ವಂಸಿಯಾಗಿ
ರ್ಜಿನ ಮುದ್ಯನ್ಮಂಡಲಾಗ್ರಂ ಸಲೆ ಘನ ಪದವೀ ಶೋಭೆಯಂಪೆರ್ಚಿಸುತ್ತಿ
ರ್ಜಿನವೊಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂಗೋಪಮಾರ್ತಾಂಡ ದೇವಂ
೪.

ಗಣಪತಿಯ ಸ್ತುತಿ :

ಅರಿರೌದ್ರಂ ಕರದೈರ್ಘ್ಯಮುಲ್ಲಸದ ಹೀನಾಲಂಕೃತಂ ಮೂರ್ತಿ ಸಾ
ಕ್ಷರ ಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದ ಸದಾಳಿಪ್ರಿಯಂ
ವರದಾನಂ ನತಭದ್ರಲಕ್ಷಣಪದಂ ಪದ್ಮಾನುಷಂಗಿತ್ವಮಾ
ಗಿರೆ ಪೆಂಪಚ್ಚರಿಯಾದ ದೇವ ಗಣಪಂ ರಕ್ಷಿಕ್ಕೆ ಭೂಚಕ್ರಮಂ ೫.

ಪೂರ್ವ ಕನ್ನಡ ಕವಿಗಳ ಸ್ಮರಣೆ :

ಇನಿತುಮವಿರ್ಕೆ ಮತ್ಕೃತಿಯೊಳೀಧರೆ ಬಣ್ಣಿಸೆ ಸಂದ ಶಂಖವ
ರ್ಮನ ಬಗೆ ಶಾಂತಿವರ್ಮನ ನಯಂ ಗುಣವರ್ಮನ ಬಂಧಗೌರವಂ
ಮನಸಿಜಸೋಜೆ ಕಣ್ಣಮನ ಜಾಣ್ನುಡಿ ಪಂಪನ ರೀತಿ ಚಂದ್ರಭ
ಟ್ಟನ ಜತಿ ಪೊನ್ನಮಯ್ಯನ ಬೆಡಂಗು ಗಜಾಂಕುಶನುಳ್ಳ ಬಿನ್ನಣಂ ೬.

ಕಾವ್ಯದ ರೀತಿಯನ್ನು ಕುರಿತು :

ಇನಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಣ್ಪಿನಂತೆ ನನೆಯೇಱಿದ ಮಲ್ಲಿಗೆಯಂತೆ ಪೂರ್ಣ ಚಂ
ದ್ರನ ಸಿರಿಯಂತೆ ಬಂದೆಸೆವ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿರ್ಕುಳಿಗೊಳ್ವುದು ಸಜ್ಜನರ್ಕಳಾ ೭.

ಕಾವ್ಯದ ವಸ್ತುವನ್ನು ಕುರಿತು

ಕತೆ ವಿಷ್ಣು ಪುರಾಣಂ ಸ
ತ್ಕೃತಿ ವೇಳ್ಪಿಂ ಸುಕವಿ ರುದ್ರನೀ ಕೃತಿಗೆ ಕಥಾ
ಪತಿ ಕೃಷ್ಣಂ ಕೃತಿಯುಂಭೂ
ಸುತಮೆಜಗನ್ನಾಥವಿಜಯಮೆನೆ ಮೆಚ್ಚದರಾರ್ ೮

೨. ಕಂಸಾದ್ಯರನತಿಬಲರಂ ಕೊಲ್ವೆನ್

ಭೂದೇವಿಯು ಬ್ರಹ್ಮ ಸಭೆಗೆ ಬರುವಳು. ಬಹಳ ಹೆಚ್ಚಾಗಿರುವ ಸೃಷ್ಟಿಯ ಭಾರವನ್ನು ತಾನು ತಾಳಲಾರೆನೆಂದು ಹೇಳುವಳು. ಬ್ರಹ್ಮನು ಆ ಮಾತನ್ನು ಒಪ್ಪಿ ಭೂದೇವಿಗೆ ಸಮಾಧಾನ ಮಾಡುವನು. ಆಮೇಲೆ ಬ್ರಹ್ಮನು, ದೇವತೆಗಳನ್ನೆಲ್ಲ ಕೂಡಿಕೊಂಡು, ವಿಷ್ಣುವಿನಲ್ಲಿಗೆ ಹೋಗುವನು. ಆಗ ವಿಷ್ಣು ಕಾಣಿಸಿದ ರೀತಿ:

ನವನೀಲೋತ್ಪಲ ಸನ್ನಿಭಾಂಗ ರುಚಿಯಿಂ ಸತ್ಕಿಂಕಿರಾತೋದ್ಗಮ
ಚ್ಛವಿ ಪೀತಾಂಬರ ಕಾಂತಿಯಿಂ ಸಮುದಿತಾರ್ಕಾಕಾರ ಚಕ್ರಾಂಶುವಿಂ
ಧವಳಾಂಶೂಜ್ವಳ ಶಂಖ ದೀಧಿತಿಯಿನಾ ರತ್ನಾಕರಂ ಕೂಡೆ ಬ
ಣ್ಣವುರಂ ತೀವಿದ ಮಾಟ್ಕೆಯಿಂದೆಸೆವಿನಂ ಚೆಲ್ವಾದನಬ್ಜೋದರಂ ೯.

ಬ್ರಹ್ಮಾದಿದೇವತೆಗಳು ವಿಷ್ಣುವಿಗೆ ಅರ್ಘ್ಯವನ್ನಿತ್ತರು. ಬ್ರಹ್ಮನು ವಿಷ್ಣುವಿನ ಅವತಾರಗಳನ್ನು ಬಣ್ಣಿಸಿ ಬಗೆ ಬಗೆಯಾಗಿ ಸ್ತುತಿಸಿದ:

ಘನ ಮಾರ್ಗ್ಗಂ ನಖಟಂಕ ಭಿನ್ನದಿತಿಜಾಸೃಕ್ಪಂಕದಿಂ ಕೆಂಕಮಾ
ಗಿ ನಿಲಲ್ ಸಂಜೆಯೊಳಂದಿನಿಂ ಬಟಿಕೆ ನಿಚ್ಚಂ ಸಂಜೆಗೆಂಪೆಂಬುದಾ
ಯ್ತೆನೆ ದೈತ್ಯಾಂತಕ ನೀಂ ನಿರಸ್ತಜಗದಂಹಂ ರೌದ್ರರಂಹಂ ನೃಸಿಂ
ಹನೆನಿಪ್ಪಾಕೃತಿಯಿಂ ಹಿರಣ್ಯಕಶಿಪು ಪ್ರಧ್ವಂಸಮಂ ಮಾಡಿದೈ ೧೦.

ದೇವ ನಿಜೋಗ್ರ ಬಾಣಪತಿಯಿಂ ತಲೆಗಳ್ ಗಗನಕ್ಕೆ ಪೀರ ಲ
ಕ್ಷ್ಮೀವಧುವಾಡುತಿರ್ಪ ತಿಜಿಕಲ್ಲೆನೆ ಸೂಟಿಯೊಳಿ ಪಾಱುತಿರ್ಪಿನಂ
ರಾವಣನಂ ಜಗತ್ರಿತಯ ರಾವಣನಂ ವಿಜಿತೋರು ಪೀಡಿತೈ
ರಾವಣನಂ ರಘುಪ್ರಭವ ರೂಪದೆ ಮರ್ದಿಸಿದೈ ಜನಾರ್ದನಾ ೧೧

ಅವನ ಹೃದಯದ ಅಭಿಪ್ರಾಯವನ್ನು ತಿಳಿದ ವಿಷ್ಣು ಈಗ ಕಂಸ, ನರಕಾಸುರ, ದಂತವಕ್ತ್ರ, ಬಾಣ, ಶಿಶುಪಾಲ ಎಂಬ ಹೆಸರಿನಿಂದ ಹುಟ್ಟಿರುವವರೆಲ್ಲರೂ ಹಿಂದೆ ಬೇರೆ ಬೇರೆ ಯುಗಗಳಲ್ಲಿ ದೈತ್ಯರಾಗಿದ್ದವರೇ ಎಂದು ಹೇಳುತ್ತಾನೆ.

ಭಯಮಂದೇವಗಣಕ್ಕೆ ಮಾಡಿ ಪದಿನಾಲ್ಕುಂ ಲೋಕಮಂದೈತ್ಯನಾ
ಜ್ಞೆಯೊಳಿಟ್ಕೊಂಡಿರೆ ನಾಕಿಗಳ್ಗಭಯಮಂ ಕೊಟ್ಟೇಱಿ ತೇರಂ ಜಗ
ತ್ರಯಮಂ ಕಾದು ಸುರಾಸುರಾಹವದೊಳಾಂ ಕೊಂದಂದಿನಾಕಾಲನೇ
ಮಿಯೆ ಕಂಸಾಸುರನಾಗಿ ಪುಟ್ಟಿದುದನಾಂ ಬಲ್ಲೆಂ ವಚೋವಲ್ಲಭಾ ೧೨.

ಹರಸಖನಲ್ಲಿ ಪುಷ್ಪಕಮನಿಟ್ಟುಕಳಿಗೊಂಡು ಹರಾದ್ರಿಯಂ ಹರಂ
ಬೆರಸು ಭುಜಂಗಳಿಂ ನೆಗಪಿ ಶಕ್ರನುಮಂ ಸೆಱೆಗೆಯ್ದುಜಯ್ಯನಾ
ಗಿರೆ ಬಹುಯತ್ನ ಗೌರವದಿನಾಂ ಪೊಣರ್ದಿಕ್ಕಿದ ರಾವಣಂ ವಚೋ
ಧರ ಶಿಶುಪಾಲನೆಂಬಸುರನಾದುದನಾಂ ತಿಳಿದೆಂ ನಿರಾಕುಳಂ ೧೩.

ಕ್ರಮದೆ ವಿಜೃಂಭಣಕ್ರಮದೆ ಕೊಂಡು ಧರಾತಳಮಂ ರಸಾತಳ
ಕ್ಕಮರ ವಿರೋಧಿಯಂ ಕಲುಪಿದೆಂ ಬಳಿಯಂ ಬಳಿಯಂ ತದಾತ್ಮಜಂ
ಯಮಸಮಭೀಕರಂ ಯಮಸಮಾಧಿಯಿನೀಶ್ವರನಿಂ ವರಂ ವರಂ
ಸಮನಿಪ ಬಾಣನೀ ಸುರರ್ಗೆ ಹೃದ್ಗತ ಬಾಣನೆ ಬಲ್ಲೆನಬ್ಜಜಾ ೧೪.

ಈ ದೈತ್ಯರನ್ನು ಕೊಂದು ಭೂಭಾರ ನಿವಾರಣೆ ಮಾಡುವುದಾಗಿ ಹೇಳುತ್ತ ತನ್ನ ಮುಂದಿನ ಅವತಾರದ ವಿವರವನ್ನು ಬ್ರಹ್ಮಾದಿಗಳಿಗೆ ತಿಳಿಸುತ್ತಾನೆ.

ಬ್ರಹ್ಮಾದಿ ದೇವತೆಗಳಿಗೆ ವಿಷ್ಣುವಿನ ಆಶ್ವಾಸನೆ :

ಇವರಂ ಕೊಲ್ವ ಸಮೀಪದೊಳ್ ಮಗಧ ಭೂಭೃದ್ಯುದ್ಧದೊಳ್ಪಟ್ಟುರಾ
ಹವದೊಳ್ ಪಾಂಡವ ಕೌರವಾಜಿಯೊಳನೇಕಾಕ್ಷೋಹಿಣೀ ಸೈನ್ಯಸಂ
ಘವನುನ್ಮೂಲಿಸಿ ಭೂಮಿ ಭಾರವನಮೋಘಂ ಪಿಂಗಿಸಲ್ವೇೞ್ಪುದೀ
ಭುವನವ್ಯಾಪ್ತಿಯನೆಲ್ಲಮಂ ತಿಳಿದೆನಾಂ ವಾಣೀ ವಧೂವಲ್ಲಭಾ ೧೫.

ಆದಿತ್ಯನ ಪಿತೃಮಾತೃಗ
ಳಾದಾ ಕಶ್ಯಪನು ಮದಿತಿಯುಂ ವರುಣನ ಶಾ
ಪಾದೇಶದೆ ಯದುವಂಶಜ
ರಾದರ್ ವಸುದೇವದೇವರೇ ಸಂಜ್ಞೆಗಳಿಂ ೧೬.

ಸುತನಪ್ಪೆಂ ದೇವಕಿಗಾಂ
ಕತಿಪಯದಿನ ಮೊಲ್ದುರಮಿಯಿಪೆಂ ಗೋಕುಲದೊಳ್

ದಿತಿಸುತರಂ ಕಂಸಾದ್ಯರ
ನತಿಬಲರಂ ಕೊಲ್ವೆಸಿಟಿಪುವೆಂ ಭೂ ಭರಮಂ ೧೭.

೩. ಶಾಶ್ವತನವತರಿಸಿರ್ದಂ

ಮೇರು ಪರ್ವತದ ದಕ್ಷಿಣ ದಿಗ್ಭಾಗದಲ್ಲಿರುವ ಮನೋಹರವಾದ ಭರತಕ್ಷೇತ್ರದ ಮಧ್ಯದಲ್ಲಿ ಮಧ್ಯದೇಶವಿದೆ. ಅದರ ಸೊಬಗು ಹೇಳತೀರದು. ಮುಕ್ತಪದ ಗ್ರಹಣ ಅಲಂಕಾರದ ಮೂಲಕ ಅದರ ಬಣ್ಣನೆ :

ದಾರಿಯ ನಂದನಂಬಿಡಿದು ಪೂತಕೊಳಂ, ಕೊಳದೊಳ್ ಬಟಲ್ಕೆಯಂ
ಬಾರಿಸಲೆಂದು ಬಂದ ಪಥಿಕರ್ ಪಥಿಕಾನಯನ ಪ್ರಭಾಮೃತಾ
ಸಾರದೆ ತೀವಿ ಬರ್ಪ ಪರಿಕಾಲ್ ಪರಿಕಾಲ್ಗಳ ನೀರನುಣ್ಬಕೇ
ದಾರವನಂ ಮನಂಗೊಳಿಸುತಿರ್ಪುದು ಭೂವನಿತಾವಿಭೂತಿವೋಲ್ ೧೮.

ಸಲೆ ಕಾಲಂ ಪಿಡಿದೆಟ್ಟಿರಲ್ ಭುವನಮೆನ್ನಿರ್ದಲ್ಲಿಗಾಂಮುನ್ನವಾ
ದೊಲವಿಂದಂ ತಲೆಗೊಯ್ಸಿ ಕೊಂಡೆನೆನುತುಂ ಲಜ್ಜಾಮಹಾಭಾರದಿಂ
ತಲೆವಾಗಿತ್ತೆನೆ ಪಕ್ವಶಾಳೀ ನಮ್ರವೊಪ್ಪಿರ್ದದೇಂ
ಗೆಲೆವಂದತ್ತೊ ಸುವರ್ಣವರ್ಣದಿನಿಳಾ ಶ್ರೀಯುಟ್ಟಪೊಂಬಟ್ಟೆವೋಲ್ ೧೯.

ಅಲರ್ದಲರ್ವಂಡಸುಂಡು ಕಲನಾದದಿನಾಣತಿಗೆಯ್ಯೆ ತುಂಬಿಕೋ
ಮಲಕಳಿಕಾರಸಾಸವಮನೀಂಟಿ ಮದೋತ್ಸವದಿಂ ಕುಕಿಲ್ವಕೋ
ಗಿಲೆ ಮಿಡಿಯಂ ಕರ್ದುಂಕಿ ನಲಿದಾಡುವ ರಾಜಶುಕಂ ಸರೋಜಕಂ
ದಲಮನೊರಲ್ವು ಕರ್ಚಿ ಸುಟಿವಂಚೆಗಳಿಲ್ಲದುದಿಲ್ಲನಂದನಂ ೨೦.

ಇಂಥ ಮಧ್ಯದೇಶದಲ್ಲಿ ಯಮುನಾ ತೀರದಲ್ಲಿ ಮಧುರಾಪುರ ರಾರಾಜಿಸುತ್ತಿದೆ. ಆ ಮಧುರಾಪುರದ ಉದ್ಯಾನಗಳಲ್ಲಿ :

ಫಳಮೆಂದುಂ ಕಟಿವಣ್ಗಳಾಗವಲರೆಂದುಂಬೀಯುವಬ್ಜಾಕರಂ
ತಿಳಿದೆಂದುಂ ಬಗೆಗೊಳ್ಪುದುರ್ಕುಡುಗದೆಂದುಂ ತುಂಬಿಗಂ ಹಂಸೆಗಂ
ಗಿಳಿಗಂ ಕೋಗಿಲೆಗಂ ವಿಯೋಗಿ ಮಥನಕ್ಕೆಂದುಂ ವಸಂತ ಪ್ರಿಯಂ
ಮುಳಿಸಿಂದಾರ್ದಲರಂಬುವೊಯ್ಯು ತೆಗೆದಿರ್ಪಂ ಬಿಲ್ಲನುದ್ಯಾನದೊಳ್ ೨೧.

ಹಾಗೆ ಮನೋಹರತೆಯನ್ನು ಒಳಗೊಂಡು ಅಖಿಲ ಜನ ಮನೋರಂಜಕವಾದ ಆ ಊರಿನ ಬೀದಿಗಳಲ್ಲಿ ಹೂವಾಡಗಿತ್ತಿಯರು ಹೂವು ಮಾರುತ್ತಿದ್ದ ರೀತಿ:

ಎತ್ತಿದ ಪುಷ್ಪಮಾಲೆ ಲಲಿತೇಕ್ಷಣ ತೀಕ್ಷ್ಣ ಮರೀಚಿ ಗಾಡಿಯಂ
ಬಿತ್ತುವ ಪುರ್ವುಗಳ್ ಪೊಸತಿದೆಂದು ನಿರೀಕ್ಷಿಸಲೊಂದು ದೇಸೆಯಂ
ಪೆತ್ತು ಮದಾಳಿಶಿಂಜಿನಿಯನಾ ಕುಸುಮಾಸ್ತ್ರಮನಿಕ್ಷು ಚಾಪಮಂ
ಚಿತ್ತಜನಾಂತು ನಿಂದನೆನೆ ವಿಕ್ರಯಿಪರ್ ಸತಿಯರ್ ಲತಾಂತಮಂ ೨೨.

ಹೀಗೆ ಯಾವಾಗಲೂ ಇರುವ ಆ ನಗರದ ಮಧ್ಯದಲ್ಲಿ ಉಗ್ರಸೇನನ ಅರಮನೆಯಿದೆ. ಆ ಅರಮನೆಯಲ್ಲಿ ಉಗ್ರಸೇನನ ಮಗ ಕಂಸನಿದ್ದಾನೆ. ಅವನು ಆಕಾಶಕ್ಕೆ ಸಿಡಿಲಂತೆಯೂ ಸುಧಾಬ್ಧಿಗೆ ಮಹಾ ಹಾಲಾಹಲದಂತೆಯೂ ಅರಣ್ಯಕ್ಕೆ ದಾವಾಗ್ನಿಯಂತೆಯೂ ಆಗಿ ಹುಟ್ಟಿ ತಂದೆಯನ್ನೇ ಸೆರೆಯಲ್ಲಿಟ್ಟು ಸಾಮ್ರಾಜ್ಯ ಸಂಪತ್ತಿನಿಂದ ಓಲಾಡುತ್ತಿದ್ದನು ಅಲ್ಲದೆ :

ಮಸಕದ ಹಾಳಾಹಳದೊಡ
ನೆಸೆವಿಂದುವ ಲೇಖೆ ಪುಟ್ಟುವಂದದಿನಾರಾ
ಕ್ಷಸನೊಡನೆ ಪುಟ್ಟಿ ದೇವಕಿ
ವಸುದೇವಂಗರಸಿಯಾಗಿ ಸುಖದಿಂದಿರ್ಪಳ್ ೨೩.

ಒಂದು ದಿನ ನಾರದನು ಬಂದು ವಿಷ್ಣು ದೇವರೇ ಗರ್ಭದಲ್ಲಿ ಜನಿಸಲಿರುವ ವಿಚಾರ ತಿಳಿಸಿದನು. ಈ ವೃತ್ತಾಂತವನ್ನು ಕಂಸನ ಬಾಯಿಂದ ಕೇಳಿದ ಅಕ್ರೂರನೇ ಮೊದಲಾದ ಯಾದವ ಮುಖಂಡರು ನಾರದನನ್ನು ಚಾಡಿಕೋರನೆಂದು ಜರೆದರು. ಆಗ ಕಂಸನು ನಾರದನ ಮಾತು ಸುಳ್ಳಲ್ಲ ಎಂದು ಹೇಳಿ ತಾನು ವಸುದೇವ-ದೇವಕಿಯರ ಮದುವೆಯನ್ನು ವೈಭವದಿಂದ ಮಾಡಿ ರಥದ ಮೇಲೆ ಕೂರಿಸಿಕೊಂಡು ಕಳುಹಿಸಿ ಕೊಡಲು ಹೊರಟಿದ್ದಾಗ :

ಅಮರಾಧ್ವದೊಳಂದಶರೀ
ರ ಮಹಾಧ್ವನಿ ಕಂಸ ಕಂಸ ಕೇಳ್‌ದೇವಕಿಯ
ಷ್ಟಮಗರ್ಭದಾತನಿಂದ
ಷ್ಟಮ ಚಂದ್ರಂ ನಿನಗೆ ನೆರೆಗುಮೆಂದುದವೋಘಂ ೨೪.

ವ ॥ ಅದಂ ಕೇಳ್ದಾಂ ಮದೀಯ ಜೀವಾಪಹರಣಕಾರಿ ವಿರೋಧಿ ವಿಷಸಸ್ಯಮವಶ್ಯ ಮುದಯಿಸುವೀದೇವಕೀಗಾತ್ರ ಕ್ಷೇತ್ರ ಮನೀಗಳೆ ವಿನಾಶಮನೆಯ್ದಿಸುವೆನೆಂದು ಬಗೆದಂದು - ಕಿಳ್ವಾಳಿನ ಕೈಯೊಳಿರ್ದ "ಬಾಳಂ ಕೊಂಡು" ಎದ್ದಾಗ, ಪಕ್ಕದಲ್ಲಿದ್ದ ವಸುದೇವ,

ನೆಟ್ಟನೆ ಮೃತ್ಯುವೀಕೆಯ ಸುತರ್ ನಿನಗೆಂದೊಡೆಕೊಲ್ವುದೀಕೆಗಂ
ಪುಟ್ಟಿದ ಮಕ್ಕಳಂ, ಪರಸಿ ಸೇಸೆಯನಿಕ್ಕಿದ ಕೈಯೊಳೆಂತು ಕೈ

ಮುಟ್ಟಿಱಿದಪ್ಪೆ ಪೂಮುಡಿಯ ಬಾಲೆಯ ನೀಕೆಯನೆಂದು ಬಾಸಿಗಂ
ಗಟ್ಟಿದ ಶೀರ್ಷದಿಂದೆಱಗಿದಂ ವಸುದೇವನತೀವ ಭೀತಿಯಿಂ ೨೫.

ಕಂಸ ಅದಕ್ಕೆ ಒಪ್ಪಿ, ವಸುದೇವ ದೇವಕಿಯರನ್ನು ತನ್ನ ಅರಮನೆಯ ಕೇಳೀಗೃಹದಲ್ಲಿ ಸೆರೆಯಲ್ಲಿಟ್ಟ. ಅಲ್ಲಿಯೇ ದಂಪತಿಗಳು ಕಾಯ ಸುಖವನ್ನನುಭವಿಸುತ್ತ, ನಂದನವನ ಮಧ್ಯದ ಕೊಳದಿಂದ ಅಗಲದ ಹಂಸ ಮಿಥುನದಂತೆ ನಲಿಯುತ್ತಿದ್ದರು. ದೇವಕಿ ಫಲವತಿಯಾದರೂ ವಸುದೇವ ಇದೆಲ್ಲ ವಿಫಲವೆಂದು ನಿರುತ್ಸಾಹದಿಂದ ನಿಟ್ಟುಸಿರಿಡುತ್ತಿದ್ದ.

ವ ॥ ಅನ್ನೆಗಂ ನವಮಾಸಂತೀವಿ ಬೆಸಲೆಯಪ್ಪುದುಮದಂ ಗೃಹಾಧ್ಯಕ್ಷನಿಂದಾಕ್ಷಣದೊಳ್ ಕೇಳ್ದು ಕಂಸಂ ತದೀಯ ಬಾಲಹಿಂಸಾಪರನಾಗಿ, ಸೂತಿಕಾಸದನಮಂ ಪೊಕ್ಕು, ವಿಕ್ರಾಂತಮಂತರಿಸೆ, ಪೆಂಪು ಸೊಂಪಱಿಯೆ, ಭುಜಬಲ ಪೊಳಸರಿಯೆ, ಮಾನಂ ಮ್ಲಾನತೆಯನೆಯ್ದೆ, ಜಸಂಮಸುಳೆ, ಧೃತಿಗತಿಗಿಡೆ, ಪೊಡರ್ಪೆಡೆಯುಡುಗೆ, ಕರುಣಮಪಸರಣಂ ಗೆಯ್ಯೆ, ರೂಢಿಗೊಡ್ಡುಗೊಳೆ, ಧರ್ಮಂ ನಿರ್ಮದಮಾಗೆ ಮೈಮೆ ಮೆಯ್ಮಱಿಯೆ, ಪಾಟಿಹೂಟೆ, ಪೇಸುಗೆ ಪಸರಱಿಯೆ, ಹೇಯಂ ಮಾಯಮಾಗೆ, ಸತ್ವಂ ಸತ್ವಂಗಿಡೆ, ಕಣ್ಬರಿ ಬೆಂಬರಿಯೆ, ಕುಲಂಮಲಿನಮೆನಿಸೆ, ವಿಳಾಸಮೋಸ ರಿಸೆ, ಬೆಡಂಗಡಗೆ, ಮೆಯ್ಯಮಾಸಾಱದ ಕೂಸಂ ತಲೆಕೆಳಗಾಗೆ ಪಿಡಿದು ಕೊಂಡು ನಡೆವನ್ನಂ, ಧರ್ಮಜ್ಞರಧರ್ಮಮೆನೆ, ಘೂರ್ಣಿಸುವ ಜನಕ್ಷೋಭಮಂ ಕೈಕೊಳ್ಳದೆ – ೨೬.

ದಿವಿಜವಧಪಟುಗೆ ನಿನಗಭಿ
ಭವಮೀಶಿಶು ವಧಮೆನಲ್ಕೆ ಮಾಣ್ಬೆನೆ ಮತ್ತೇ
ಭವಧ ಪ್ರಚಂಡ ಯಮದಂ
ಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ ೨೭.

ಎಂದು ಒದರಿ ಕೂಸನ್ನು ಅಪ್ಪಳಿಸಿದ. ಹೀಗೆ ಆರು ಮಕ್ಕಳನ್ನು ಕಾಲ ಕಾಲಾಕೃತಿಯಾದ ಕಂಸ ಕೊಂದ. ಆಗ ದೇವಕಿಯ ಸ್ಥಿತಿ :

ಶೋಕಮಟಲ್ವಿನಂ ಶಿಶುಗಳಾಱುಮವಿಕ್ರಮದಿಂದೆ ಕಾಲಕಾ
ಲಾಕೃತಿ ಕಂಸನಿಂ ಲಯಮನೆಯ್ದಿರೆ, ದೇವಕಿ ಪೊತ್ತಳಂತತಿ
ವ್ಯಾಕುಳವೃತ್ತಿಯಂ ನಿಜಫಲಸ್ತಬಕಂ ವನಮತ್ತ ಹಸ್ತಿಹೇ
ಳಾಕರ ಭಗ್ನವಾಗೆ ಕಡು ಪಾಡಱಿದದೊಂದು ನವಾಮ್ರವಲ್ಲಿವೋಲ್ ೨೮.

ಭೂಲೋಕದಲ್ಲಿ ಅವತರಿಸುವ ಲಕ್ಷ್ಮೀವರನ ಅವತಾರಕ್ಕೆ ಪೀಠಿಕಾ ಪ್ರಕರಣದಂತೆ ಆದಿಶೇಷನು

ದೇವಕಿಯ ಗರ್ಭದಲ್ಲಿ ಹುಟ್ಟಿದನು. ಪದ್ಮಾಕ್ಷನ ಆಜ್ಞೆಯಂತೆ ಮಾಯಾದೇವಿ, ದೇವಕಿಯ ಗರ್ಭದ ಆ ಶಿಶುವನ್ನು ಗೋಕುಲಕ್ಕೆ ಒಯ್ದು ಮೋಹನ ಸಾಮರ್ಥ್ಯದಿಂದ ನಿಂದು ರೋಹಿಣಿಯ ಗರ್ಭದಲ್ಲಿ ಜೋಡಿಸಿದಳು.

ವ ॥ ಆಗಳಾದೇವಕಿ ಪುಷ್ಪವತಿಯಾದಂತೆ ಮಣಿಭೂಷಣಂಗಳಂ ತೊಲಗಿಸಿ, ಕಂಸ ಕೃತಾಪಚಾರದಿಂ, ನಿರ್ವಿಚಾರಮೆ ಪೊಲ್ಲಮೆ ಯಾದುದೆಂದು ಖೇದಿಸುತ್ತಿರಲದಂ ಕಂಡು

ಉಗಟ್ಟಿಪುದಿಲ್ಲ ಚಂದ್ರಿಕೆಯನುಜ್ವಳ ಲೋಚನೆ ಲೋಚನಂಮನಂ
ಬುಗೆ ನಯಮಂ ಪುದುಂಗೊಳಿಸಿತಿಲ್ಲ ಲತಾಂಗಿ ಲತಾಂಗ ಲೇಖೆಮ
ಲ್ಮಗೆ ವೆಳಗಂ ತುಳುಂಕಿದಪುದಿಲ್ಲೆ ಸಿವಿಂದುಮುಖೀಮುಖೇಂದುವೇ
ಕೆಗ ನಿಸಗಾವಕಾರಣದಿನಾದುದು ಪೇಳ್ನಿತೊಂದು ಜೇವನಂ ೨೯.

ವ ॥ ಎಂದು ಬೆಸಗೊಳ್ವುದುಂ ಆಗಳ್ ದೇವಕಿ ಮನವನೆಂತಾನುಂ ಸಂತೈಸಿ ಕೆಳದಿಗಿಂತೆಂದಳ್

ಪ್ರಸವಸಮಯಮನೆಪಾರ್ದಿ
ರ್ದಸುರಂ ಬಂದೆನ್ನ ಶಿಶುವನುಯ್ವುದುಗೆಟ್ಟೇ
ಬಸಿಱೊಳ್ ಕರಗಿಸೆಪಡೆದೆಂ
ಪೊಸತಪ್ಪವಚಿಲನೆನ್ನೊಳಿಂದಿಂದುಮುಖೀ ೩೦.

ಮೊಗಮಂ ನೋಡುವ, ಅಲ್ಲೆಗೆಯ್ವ ಮೊಲೆಯುಂಬಬ್ಬಬ್ಬ ಬಾಪೆಂಬಕೆ
ಮ್ಮಗೆ ಕಾಲ್ವೆತ್ತುವ ದೂರದಿಂದೆ ಪರಿತಂದಪ್ಪಪ್ಪೆನ್ನುತ್ತಪ್ಪುವೂ
ಯ್ಯಗ ಚೆಯ್ಮಾಡುವ ಮೇಲುದಂ ಮುಸುಕಿದುತ್ತ್ರೋಯೆಂಬ ದಾಯೆಂಬ ಮು
ದ್ದುಗಳಂ ಬೀಱುವ ಕಂದನೊಳ್ ನಲಿವ ಪೆಣ್ಣೇಂ ನೋಂಪಿಯಂನೋಂತಳೋ ೩೧.

ಎಂದು ನಿರಾಶಳಾದಾಗ ಪ್ರೌಢೆಯಾದ ಸಖಿಯೊಬ್ಬಳು ಮಹಾವಿಷ್ಣುವೇ ಪೂರ್ವ ಜನ್ಮದಲ್ಲಿ ನಿನ್ನ ತಪಸ್ಸಿಗೆ ಮೆಚ್ಚಿ ಮಗನಾಗುತ್ತೇನೆಂದು ವರ ಕೊಟ್ಟಿರುವ ವಿಚಾರವನ್ನು ಹಿರಿಯರಿಂದ ಕೇಳಿರುವುದಾಗಿ ಹೇಳಿ ಸಮಾಧಾನ ಮಾಡುವಳು.

ವಸುದೇವ ದೇವಕಿಯರು ಒಂದು ದಿನ ರತಿಸುಖದಲ್ಲಿ ಓಲಾಡಿ ನಿದ್ರಿಸುತ್ತಿದ್ದಾಗ, ಬೆಳಗಿನ ಜಾವದ ಸಮಯದಲ್ಲಿ ಶುಭಸ್ವಪ್ನವನ್ನು ಕಂಡಳು.

ದ್ಯುತಿಧೌತವ್ಯೋಮ ಚಂಡಾಂಶುವನಮಲ ಸುಧಾಸೂತಿಯಂದರ್ಪದ್ವೈರಾ
ವತಮಂಪ್ರೋದ್ದಾಮ ಹೇಮಾಚಲಮನಭಿನುತಾಂಭೋಜಮಂ ತ್ವಂಗದುತ್ತುಂ
ಗತಾಂಭೋರಾಶಿಯಂ ಸತ್ಫಲಲಳಿತ ಸುರೋರ್ವೀಜಮಂ ಶೈಲಶೃಂಗ
ಸ್ಥಿತಗರ್ಜತ್ಸಿಂಹಮಂ ಸ್ವಪ್ನದೊಳತಿಮುದದಿಂ ದೇವಕೀದೇವಿ ಕಂಡಳ್ ೩೨.

ವ॥ ಅಲ್ಲದೆ

ಮಿಗುಮಂಗದ್ಯುತಿ ಲೋಕಮಂ ಬೆಳಗೆ ಚಂಚತ್ಕುಂಡಲಂ ಗಂಧಭಿ
ತ್ತಿಗಳಂ ಚಿತ್ರಿಸೆ ಕೌಸ್ತುಭಂ ಪೊಳೆಯೆ ವಕ್ಷೋದೇಶದೊಳ್ ಶಂಖ ಚ
ಕ್ರಗದಾಪದ್ಮಧರಂ ಸುಪೀತ ವಸನಂ ಬಂದಾಸ್ಯದೊಳ್ ಪೊಕ್ಕುದಂ
ಮೃಗಲಕ್ಷ್ಮಾನನೆ ಕಂಡಳುಗ್ರೆ ನಭದೊಳ್ ದೇವೇಂದ್ರತೂರ್ಯಸ್ವನಂ ೩೩.

ಆ ಕನಸಿನ ವೃತ್ತಾಂತವನ್ನು ಕೇಳಿದ ವಸುದೇವನು ಆಕೆಗೆ ಹೊಳೆಯುವ ದೇಹವುಳ್ಳವನೂ, ಸದ್ವೃತ್ತನೂ, ಭೂಪತಿಯೂ, ಸ್ಥಿರತರನೂ, ಶ್ರೀಕಾಂತನೂ, ಅಪಾರ ಮಹಿಮನೂ, ಗೌರವಯುತನೂ ಪುರುಷೋತ್ತಮನೂ ಆದ ಮಗನು ಹುಟ್ಟುವನೆಂದೂ. ಅಲ್ಲದೆ ಆ ಚತುರ್ಭುಜನೇ ಹುಟ್ಟುವನೆಂದು ಸಮಾಧಾನ ಹೇಳಿದನು.

ಪೋದ ಭವದೊಳ್ ನೆರಪಿದೊಂದು ತಪಂ ಫಲವಾಯ್ತು ನಿನ್ನೊಳೆಂ
ದಾವನು ಬಾರಿ ಬಂದು ಭವದಾನನದೊಳ್ ಮೃಗ ಕಂಡುದೊಂದು ಪು
ಣ್ಯೋದಯದಿಂ ಚತುರ್ಭುಜನೆ ಪುಟ್ಟುವನಂ ಯದುವಂಶರಾಜಸಂ
ಪಾದನನುಗ್ರಸೇನ ಭಯಭೇದನನುದ್ಧತು ಕಂಸಸೂದನಂ ೩೪.

ಇತ್ತ ದೇವಕಿಯು ವಿಷ್ಣುವನ್ನು ಗರ್ಭದಲ್ಲಿ ಧರಿಸಿಲು ಅತ್ತ ನಂದಗೋಪನ ಮನೋವಲ್ಲಭೆಯಾದ ಯಶೋದೆಯ ಗರ್ಭದಲ್ಲಿ ವೈಷ್ಣವ ಮಾಯೆ ನೆಲೆನಿಂತಳು. ಆ ಕಡೆ ಗೋಕುಲದಲ್ಲಿದ್ದ ವಸುದೇವನ ಪತ್ನಿ ರೋಹಿಣಿಯು ಶುಭ ಮುಹೂರ್ತದಲ್ಲಿ ಆದಿಶೇಷನ ಅವತಾರವಾದ ಬಲರಾಮನನ್ನು ಹಡೆದಳು.

ಪೂರ್ಣ ಗರ್ಭಿಣಿಯಾಗಿದ್ದ ದೇವಕಿಯ ಸಮೀಪದಲ್ಲಿ ಸಮಸ್ತ ದೇವತೆಗಳ ಗುಂಪೂ ಬಂದು ಅದೃಶ್ಯರೂಪದಿಂದ ಕೂಡಿ ನಿನಗಿಂತ ಹಿರಿಯರಿಲ್ಲ ಎಂದು ಸ್ತುತಿಗೈದು ಹೋದರು. ಅವಳು ಪರಿಪೂರ್ಣ ಗರ್ಭಿಣಿಯಾಗುತ್ತಲು

ವ॥ ಶ್ರಾವಣ ಕೃಷ್ಣಪಕ್ಷಾಷ್ಟಮೀ ರೋಹಿಣೀ ನಕ್ಷತ್ರದೊಳ್ ಮಹೋತ್ಕೃಷ್ಟಮಪ್ಪ ಮುಹೂರ್ತದಿಂ ಸನಾಥವಾದ ನಿಶಾಮಧ್ಯ ಸಮಯದೊಳ್ ಅತಸೀಪುಷ್ಪಾವಭಾಸಂ ತನುವೆಸೆವಿನೆಗಂ ಕಿಂಕಿರಾತ ಪ್ರಸೂನ ಪ್ರತಿಮಂ ಪೀತಾಂಬರಂ ರಂಜಿಸುವಿನಮುದಿತಾರ್ಕ ಪ್ರಭಂಕೌಸ್ತುಭ ಪ್ರದ್ಯುತಿ ಬೀಜುತ್ತಿರ್ಪಿನಂ ಶಾಶ್ವತನವತರಿಸಿದಂ ಗದಾಶಂಖಚಕ್ರಾಂಕಿತ ಹಸ್ತಂ ವಾಸುದೇವಂ ದನುಜವಿಪಿನದಾವಂ ಸಮಸ್ತ ಪ್ರಭಾವಂ ೩೫.

೪. ಹರಿಗೋಪಿಗೆ ವಿಸ್ಮಯಮಂ ನೆಗಟ್ಟಿದಂ

ವಿಷ್ಣುವು ಭೂಲೋಕದಲ್ಲಿ ಅವತಾರ ತಾಳಿದುದಕ್ಕೆ ಸಕಲ ಲೋಕವೂ ಉತ್ಸವವನ್ನು ತಾಳಿತು. ಹಾಗೆ ಅವತರಿಸಿ ತಮ್ಮ ಮುಂದೆ ನಿಂತಿದ್ದ ಜನಾರ್ಧನನಿಗೆ ವಸುದೇವ ದೇವಕಿಯರು ಕೈ

ಮುಗಿದು, ನಮ್ಮ ಹಾಗೆ ಇನ್ನಾರು ಧನ್ಯರಿದ್ದಾರೆ ಎಂದು ಹೇಳಿ ಕಂಸನು ಮಾಡಿದ ಶಿಶು ಹತ್ಯೆಯ ವಿಚಾರವನ್ನು ತಿಳಿಸಿದರು. ಅದಕ್ಕೆ :

ವ ॥ ಕಮಲನಾಭಂ ಕರುಣಾರಸಾರ್ದ್ರ ಹೃದಯನಾಗಿ ನಿಮಗೆ ಪುಟ್ಟಿದು ವಾಱುಂ ಮಕ್ಕಳೆಂಬಿವು ಪಾತಾಳದೊಳಿರ್ದ ಹಿರಣ್ಯ ಕಶಿಪುವಿನ ಮಕ್ಕಳ್. ಮದೀಯ ಸಂದೇಶದಿಂ ಪುಟ್ಟಿಪೋದುವು ಮತ್ತೊಂದು ಶಿಶುವೆಂಬುದಂ ಬಸಿಱಿಳಿದುದೆಂಬಂತೆ ಗರ್ಭದಿಂ ತೆಗೆದುಯ್ದು ರೋಹಿಣಿಯ ಗರ್ಭದೊಳ್ ನಿಲಿಸಿದೆಂ. ಅತ್ತ ಗೋಕುಲದೊಳಾಮಹಾತ್ಮ ನುದಯಿಸಿರ್ದಂ. ೩೬.

ಎಂದು ಹೇಳಿ ನನ್ನ ಸಹಜಾತರನ್ನು ಕೊಂದು ಉಗ್ರಸೇನನನ್ನು ಬಂಧನದಲ್ಲಿರಿಸಿರುವ ನೃಶಂಸ ಕಂಸನನ್ನು ಕೊಲ್ಲುವೆ ಎಂದು ತನ್ನ ಜನ್ಮೋದ್ದೇಶವನ್ನು ತಾಯ್ತಂದೆಯರಿಗೆ ತಿಳಿಸಿ, ತನ್ನ ದಿವ್ಯ ರೂಪವನ್ನಡಗಿಸಿಕೊಂಡು ಸಾಮಾನ್ಯ ಶಿಶುರೂಪವನ್ನು ಕೈಕೊಂಡನು.

ಆ ದಿನ ಏರಿದ ಮಳೆಗಾಲದ ಮೋಡದಿಂದ ಬ್ರಹ್ಮಾಂಡವೇ ಕಪ್ಪಿನ ಭರಣಿಯಂತಾಗಿ ಭಯಂಕರವಾಗಿತ್ತು. ಆ ಭಯಂಕರ ಕಗ್ಗತ್ತಲೆಯಲ್ಲಿ; ಧಾರಾಕಾರವಾಗಿ ಸುರಿಯುತ್ತಿದ್ದ ಹೆಮ್ಮಳೆಯಲ್ಲಿ ಹೆದರದೆ ಮಗನನ್ನು ಎತ್ತಿಕೊಂಡು ಹೇಗೋ ಆ ಪ್ರಸೂತಿಕಾ ಗೃಹದಿಂದ ಹೊರ ಹೊರಟನು. ಆ ಭಯಂಕರ ಮಳೆಯಿಂದ ರಕ್ಷಿಸಲು ಹೆಡೆಯನ್ನು ಕೊಡೆಯಾಗಿ ಹಿಡಿದು ನಾಗೇಂದ್ರನು ಬಂದನು. ಕಂಸನ ಭೀತಿಯಿಂದ ವಸುದೇವ ಮುಂದುಗೆಟ್ಟ. ಆಗ :

ಪಿರಿದುಂ ಕಂಸನ ಭೀತಿಯಿಂದೆ ವಸುದೇವಂ ಮುಂದುಗೆಟ್ಟಲ್ಲಿ ಕ
ಮ್ಮರಿವಾಯ್ದಂತಿರೆ ಪೊಕ್ಕಡಂಗೆ ತನಗಾ ತೀವಿರ್ದ ಕಾಳಿಂದಿಬೆ
ಚ್ಚರಮಾಗಳ್‌ನೆಲೆಯಾಗೆ ದಾಂಟಿನಡೆದಂ ದುರ್ವಾರ ಸಂಸಾರ ಸಾ
ಗರಮಂದಾಂಟಿಸುವಾ ಮಹಾಮಹಿಮನಂ ಪೆತ್ತಂಗಿದೇಂ ಚಿತ್ರಮೇ ೩೭.

ನದೀ ತೀರದಲ್ಲಿದ್ದ ಗೋಕುಲವನ್ನು ಹೊಕ್ಕು ಸೂತಿಕಾಗೃಹದಲ್ಲಿ ಆಗಲೇ ಯಶೋದೆಗೆ ಹುಟ್ಟಿದ್ದ ಹೆಣ್ಣು ಮಗುವಿನ ಜಾಗದಲ್ಲಿ ಶೌರಿಯನ್ನು ಬದಲಿಸಿ, ಕಂಸನಿಗೆ ಮಾರಿಯನ್ನು ತರುವಂತೆ ಆ ಮಗುವನ್ನು ಎತ್ತಿಕೊಂಡು ಮನೆಯನ್ನು ಸೇರಿದ.

ತನ್ನ ವೈರಿಯನ್ನು ಉಗುರಿನಲ್ಲೇ ಚಿವುಟಿ ಹಾಕಲು ಶಕಟ, ಧೇನುಕ, ಅರಿಷ್ಟ, ಕೇಶೀ, ಪ್ರಲಂಬ, ಪೂತನಿ ಮೊದಲಾದವರಿಗೆ ಕಂಸ ಆಜ್ಞಾಪಿಸುತ್ತಾನೆ. ಪೂತನಿ ಯಶೋದೆ ಇಲ್ಲದ ಸಮಯ ನೋಡಿ ಪ್ರಸೂತಿಗೃಹವನ್ನು ಹೊಕ್ಕು ವಿಷ ತುಂಬಿದ ಮೊಲೆವೂಡಿಸುತ್ತಾಳೆ

ಪ್ರಣಯಾಲಂಬಿಸಿನಿಯಂತೆ ಪೂತನೆ ಯಶೋದಾಕಾರದಿಂ ಬಂದು ನಿ
ರ್ಘೃಣೆ ನಂಜೂಡಿದ ತನ್ನ ಪೆರ್ಮೊಲೆಯನೂಡಲ್ ಬಾಲಕಂ ನೆತ್ತಱಂ

ನೆಣನಂ ಖಂಡಮನೆಯ್ದೆ ಪಿಂಡಿ ಪಿಟಿದುಂಡೋಹೋಹೋ ಹಾ ಮಾಣ ದಾ
ರುಣ ಮಾಣೆಂದೊಱಲುತ್ತೆ ಬೀಟೆ ತವೆ ಪೀರ್ದಂ ಪೂತನಾ ಜೀವಮಂ ೩೮.

ವ ॥ ಆಗಳಟ್ಟಾಸುರಮಾಗಿ ಬೆಟ್ಟು ಕೆಡೆವಂತ ಭೂತಲದೊಳ್ ಕೆಡೆದ ಪೂತನೆಯ ಮೇಲೆ ಮೊಲೆಯಂ ಕಡೆವಾಯೊಳಿಟ್ಟು ಪಟ್ಟಿರ್ದ ಶಿಶುವಂ ಯಶೋದೆ ಬಂದು ಕಂಡು ೩೯.

ಪೂತನೆಯ ಕೆಡೆದ ವಿಕೃತಿಗೆ
ಭೀತಿಯನೊಳಕೊಳ್ಳದೆತ್ತಿಕೊಂಡಳ್ ಮಗನಂ
ಕೌತುಕಮೇಂ ಪೆಂಡಿರೊಳಂ
ಭೀತಿರಸಂ ಮೋಹರಸಮನೊತ್ತರಿಸುಗು ಮೇ ೪೦.

ನಂದಗೋಕುಲದ ಲತಾಂಗಿಯರು ಕೃಷ್ಣನನ್ನು ತೂಗಿದ್ದು

ಉದರಮೆ ತೊಟ್ಟಿಲಾಗೆ ಭುವನ ತ್ರಯಮಂ ನೆಱೆತಾಳ್ದಿ ದೇಹಿವ
ರ್ಗದ ಕೃತ ಪಾಪ ಪುಣ್ಯಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ
ಪದುಳದೆ ತೊಟ್ಟಿಲೊಳ್ ಪಡಿಸಿ ತೂಗಿದರಚ್ಯುತ ಜೋ ಮಹಾತ್ಮಜೋ
ಸದಮಲಬೋಧ ಜೋ ಪರಮ ಜೋ ಹರಿ ಜೋಯೆನುತುಂ ಲತಾಂಗಿಯರ್ ೪೧.

ಬಾಲಕೃಷ್ಣನು ಸಿಂಹದ ಮರಿಯಂತೆ ಕಾಣಿಸುತ್ತಿದ್ದನಂತೆ

ವಿವಿಧ ಸಟಾವಳಿ ಕಿರುಜಡೆ
ನವಕೇಸರ ಕಾಂತಿ ಕೊರಲ ರಕ್ಕೆಯ ರತ್ನ
ಚ್ಛವಿಯಾಗಲಂಬೆಗಾಲಿ
ಕ್ಕುವ ಪದದೊಳ್ ಸಿಂಹ ಶಿಶುವೊಲೆಸದಂ ಕೃಷ್ಣಂ ೪೨.

ಜಗನ್ನಾಥವಿಜಯದಲ್ಲಿ ಶ್ರೀಕೃಷ್ಣನ ಬಾಲಲೀಲೆಗಳ ವರ್ಣನೆ ಅತ್ಯದ್ಭುತವಾಗಿ ಮೂಡಿ ಬಂದಿದೆ. ಇದು ಈ ಕಾವ್ಯದ ಒಂದು ರಸಘಟ್ಟ :

ತನ್ನದಟಿಂದೆ ಮಾಣದೆ ಗೃಹಾಂಗಣಮಂ ಪೊಱಮಟ್ಟು ಪೋಪನಂ
ಬೆನ್ನನೆ ಪೋಗಿ ಪೋಗಿ ಪಿಡಿತಂದೆನಸುಂ ಜಡಿದೊರ್ಮೆ ಗೋಪಿದಾ
ವಿನ್ನಡುವಂ ತೊಡರ್ಚೆ ದೃಢವಾಗಲುಲೂಖಲದಲ್ಲಿ ಕಟ್ಟಿ ಪೋ
ಗಿನ್ನೆಲೆ ಪೋಗಲಾರ್ಪೊಡೆಲೆ ಚಂಚಲ ಚೇಷ್ಟಿತ ನೋಟ್ಪೆನೆಂಬುದುಂ ೪೩.

ಪನಿಮಿಜುಗಲ್ ಮುಗುಳ್ನಗೆ ನಗುತ್ತೊತ್ತರಲಂ ತೆಗೆಯುತ್ತುಮೊಯ್ಯನೊ
ಯ್ಯನೆ ಮುರಿದಂಬಿಕಾ ಮುಖಮನೀಕ್ಷಿಸುತುಂ ನಡೆಯಲ್ ಮಹಾಯಮಾ
ರ್ಜನ ಕುಜದಲ್ಲಿ ಸಿಲ್ಕಿದೊರಲಂ ತೆಗೆಯಲ್ಕನುಗೆಯ್ದೊಡಾಯಮಾ
ರ್ಜುನತರು ಕಿಟ್ಟು ಬೇರ್ವೆರಸು ಬಿಟ್ಟರೆ ಮಧ್ಯದೊಳಿರ್ದನಚ್ಯುತಂ ೪೪.

ಈ ಕೌತುಕವನ್ನು ಕಂಡು ಯಶೋದೆಯ ಹೃದಯಕ್ಕಾದ ಸಂತೋಷ ಅವರ್ಣನೀಯ

ಪರಮ ಸುಖಾರ್ದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ
ದರನನಿದಾರ ಮಾಣಿಕ ವಿದಾರ ನಿಧಾನ ವಿದಾರ ಮುದ್ದಿದಾ
ರರಸನಿದಾರ ಬಲ್ಲಹನಿದಾರ ಕರೀಂದ್ರನಿದಾರ ಸಿಂಹ ಮೆಂ
ದಿರದಮರ್ದಪ್ಪಿದಳ್ ಪದೆಪಿನಿಂ ಪೊಳೆವಾಲ್ ತೊಜಿದೆಚ್ಚು ಪಾಯ್ವಿನಂ ೪೫.

ಬಂದಪಿಯನಿಟ್ಟು ಹರಿಮ
ತ್ತೊಂದಡಿಗಡಿಯೆತ್ತುವಾಗಳುಂ ವಿಕ್ರಮನಾ
ದಂದಿನ ಸಂಸ್ಕಾರಂ ಬಿಡ
ದೆಂದೆನೆ ಬಗೆಗೊಳಿಸಿದಂ ತಳರ್ನಡೆವೆಡೆಯೊಳ್ ೪೬.

ಒಡನೊಡನಾಡಿಗಳ್ ಗಡಣದಿಂ ಬರೆ ಗೆಜ್ಜೆಯನುಣ್ಚರಂ ಪೊದ
ಪ್ಪಿಡೆವಣೆಯಿಂಚರಂ ನೆಗಟೆ ಕಣ್ಮಲರ್ಗಳ್ ಪೊಳೆದಾಡೆ ಧೂಳಿಮೆ
ಯ್ಯಡರ್ದಿರೆ ಮುಗ್ಧ ಜಲ್ಪನಮೊಡಂ ಬಡೆ ರಂಜಿಸಿ ತಾಯ ದಿಟ್ಟಿಗ
ಮ್ಮೊಡನೊಡನೆತ್ತಲುಂ ಪರಿಪಿನಂ ಪರಿದಾಡಿದರಾ ಬಳಾಚ್ಯುತರ್ ೪೭.

ಘನಕುಚೆಗೋಪಿ ಪಾಲ್ಗರೆಯುತುಂ ಮನೆವಾಜ್ತೆಗೆ ಪೋಗೆಗೆಜ್ಜೆಯಿಂ
ದನಿ ನಸು ಪೊಣ್ಮದಂತು ಪರಿತಂದೆಡಗೆಯ್ಯೊಳೆ ತೋಡಿ ಬೆಣ್ಣೆಯಂ
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ವೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ ೪೮.

ವ || ಮತ್ತೊಂದು ಸಮಯದೊಳ್ ಪಾಲ್ಗುಡಿಯಲೊಲ್ಲದಾಟಿ ಗುಟ್ಟುವ ದಾಮೋದರನಂ ಯಶೋದೆ ಕಂಡು ೪೯.

ಶಕಟ ವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
ಟಿಕೆ ಘಣಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ್ನ ಚೆಂ

ಡಿಕೆ ಬಳಿವಪ್ಪುದೆಂದಬಲೆನಂಬಿಸೆ ಪಾಲ್ಗುಡಿಯೀಗಳಪ್ಪ ಚೆಂ
ಡಿಕೆಯೆನಿತುದ್ದವಾದುದೆನುತುಂ ಬೆಸಗೊಳ್ವಮುಕುಂದನೊಪ್ಪುಗುಂ ೩೦.

ಚಾರಿ ಮೆಟ್ಟುವ ಭಂಗಿ ದೋರ್ವಲನಂ ಮನಂಗೊಳೆ ಮಂಜುಮಂ
ಜೀರ ಕಂಕಣಕಿಂಕಿಣೀರುತಿ ಪೊಣ್ಮೆ ವಕ್ರಿತ ಕಂಧರಂ
ಸ್ಮೇರ ವಕ್ತ್ರ ಸರೋರುಹಂ ಲಲಿತಾಯತೇಕ್ಷಣನಾಗಿ ಸಂ
ಸಾರನಾಟಕ ಸೂತ್ರಧಾರಿ ಮುರಾರಿ ಕೈಪಜೀಗಾಡಿದಂ ೩೧.

ನೀರದೋತ್ಪಲವರ್ಣನಾಡಿನಾಡಿದಂ ಕಮಲೇಕ್ಷಣಂ ॥
ಚಾರುಹಾಸನಿವಾಸನಾಡಿದನಾಡಿದಂ ಸುಭಗಂ ಶುಭಾ
ಕಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜೀಗಾಡಿದಂ ॥ ೩೨.

ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ
ದಾರಕವ್ರಜಮಲ್ಲನಾಡಿದನಾಡಿದಂ ಹರಿ ಗೋಕುಲಾ
ಧಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜೀಗಾಡಿದಂ ॥ ೩೩.

ದಾರುಣಾಕೃತಿ ಪೂತನಾಂತಕನಾಡಿದಂ ಶಕಟ ಪ್ರಸಂ
ಹಾರನಾಡಿದನಾಡಿದಂ ಯಮಳಾರ್ಜುನದ್ರುಮಘಾತಿಯುಂ
ಜೀರವಂ ನೆಗಟಲ್ಕೆ ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜೀಗಾಡಿದಂ ೩೪.

ಪೀರದ್ವೈತ್ಯರನಿಕ್ಕಲಾಡಿಯೆ ಪುಟ್ಟಿದಂ ಹರಿಯೆಂದು ಕೈ
ವಾರದಿಂದವೆ ಮಾತನಾಡೆ ವಿರೋಧಿಗಳ್ ಯಮಲೋಕಮಂ
ಸಾರಲಾಡೆ ಯಶೋದೆ ರಾಗರಸಾಬ್ಧಿಗಳ್ ತುಳುಕಾಡೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜೀಗಾಡಿದಂ ೩೫.

ಬಹುಶಃ ಕೃಷ್ಣ ನಿದ್ರೆಯಲ್ಲಿ ಕನವರಿಸುತ್ತಿದ್ದಾಗ, ತನ್ನ ಹಿಂದಿನ ವಿಷ್ಣು ಅವಸ್ಥೆಯಲ್ಲಿ ಬ್ರಹ್ಮ, ಮಹೇಶ್ವರ, ದೇವೇಂದ್ರರನ್ನು ಓಲಗದಲ್ಲಿ ಮಾತನಾಡಿಸುವಂತೆ ಮಾತನಾಡಿಕೊಳ್ಳುತ್ತಿದ್ದನಂತೆ. ಅದನ್ನು ಕೇಳುತ್ತಿದ್ದ ಗೋಪಿಗೆ ಪರಮಾಶ್ಚರ್ಯವಾಯಿತಂತೆ:

ಕೃಷ್ಣನ ಕನವರಿಕೆ ಗೋಪಿಗೆ ವಿಸ್ಮಯ ಮೂಡಿಸಿದ್ದು

ವನಜಜ ಬನ್ನಿಮಿತ್ತ ಹರ ಕುಳ್ಳಿರಿಮುನ್ನತ ಪೀಠದೊಳ್ ಪದಾ
ವನತಿಯಿನೇಟ್ ಮಹೇಂದ್ರ ದಿವಿಜರ್ ಪುಗೆ ಬಾರಿಸವೇಡೆನುತ್ತೆಮು
ನ್ನಿನ ನಿಜಲೀಲೆಯೋಲಗದ ಪೆರ್ಮೆಯ ಮಾತನ ದೊರ್ಮೆಸುಪ್ತಿಯೊಳ್
ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯವಂ ನೆಗಟ್ಟಿದಂ ೫೬.

ಒಂದು ದಿನ ಕೃಷ್ಣನ ಹಟವನ್ನು ತಪ್ಪಿಸಲು ಗೋಪಿ ಏನೆಲ್ಲ ಪ್ರಯತ್ನ ಮಾಡಿದರೂ ಸುಮ್ಮನಿರದೆ ಇದ್ದಾಗ, ಕೃಷ್ಣನಿಗೆ ಒಂದು ಕಥೆಯನ್ನಾದರೂ ಹೇಳೋಣವೆಂದು ರಾಮಾಯಣದ ಕಥೆ ಹೇಳಲು ತೊಡಗಿದಳು. ಎಲ್ಲವನ್ನೂ ಕೇಳುತ್ತ ಹೂಂ ಗುಟ್ಟುತ್ತಿದ್ದ ಬಾಲಕೃಷ್ಣನು, ರಾವಣನು ರಾಮನ ಸತಿಯನ್ನು ಕದ್ದೊಯ್ದನು ಎಂದು ಹೇಳಿದಾಗ ಹೂಂಗುಟ್ಟದೆ ಕೋಪದಿಂದ ಹೂಂಕಾರ ಮಾಡಿ ಔಡುಗಚ್ಚಿ ಕಣ್ಣು ಕೆಂಪು ಮಾಡಿದನಂತೆ. ನಾಟಕೀಯ ಸಂವಾದ, ಮಗುವಿನ ಮುಗ್ಧತೆ ಮತ್ತು ದೈವದ ಮಹಾನುಭಾವತೆ ಎಲ್ಲ ಮುಪ್ಪುರಿಗೊಂಡಿರುವ ಪದ್ಯವಿದು:

ಕತೆಯಂ ಕೇಳಿಲೆ ಕಂದ ಹುಂ ರಘುಜನೆಂಬಂಹುಂ ಸಕಾಂತಂವನ
ಸ್ಥಿತಿನಾದಂ ಗುರುಪೇೞೆಹುಂ, ದಶಶಿರಂ ಕೊಂಡುಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆಯುತುಂ ಹುಂಕೊಳ್ಳದುತ್ಕೋಪಹುಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸು ಗಣ್ಬೆಟ್ಟಚ್ಯುತಂ ರಂಜಿಕುಂ ೫೭.

ಕೃಷ್ಣನು ಮಣ್ಣು ತಿಂದನೆಂದು ಬಲರಾಮ ಯಶೋದೆಗೆ ಚಾಡಿ ಹೇಳಿದಾಗ

ಹರಿ ನೀಂ ಮಣ್ದಿಂದೆ, ತಿನ್ನೆಂ ಜನನಿ ಪುಸಿದನೆಮ್ಮಗ್ರಜಂ ತೋಱುವಕ್ರಾಂ
ತರಮಂ ನೋಡೆಂದು ಬಾಯಂ ತೆಱೆವುದು ಮದರೊಳ್ ವಾರ್ಧಿಯೇೞುಂ ಕುಲೋರ್ವೀ
ಧರವೇೞುಂ ದ್ವೀಪವೇೞುಂ ಬೆರಸು ಜಗಮನೀರೇೞುಮಂ ಕೂಡೆಕಂಡ
ಚ್ಚರಿವಟ್ಟಿಂ ಮುಚ್ಚುಮುಚ್ಚಾನನಮನೆನುತುಮಾಕಾಂತೆ ವಿಭ್ರಾಂತೆಯಾದಳ್ ೫೮.

ಒಂದು ದಿನ ನಂದಗೋಪನು ಗೋಪ ವೃದ್ಧರೊಡನೆ ಆಲೋಚಿಸಿ ವೃಂದಾವನಕ್ಕೆ ಹೋಗಿ ನೆಲಸ ಬೇಕೆಂದು ತೀರ್ಮಾನಿಸಿ, ಅಲ್ಲಿಗೆ ನಡೆದನು.

ಅಲ್ಲಿ ಮುರಾರಿ ಗೋವುಗಳನ್ನು ಕಾದ ಹಾಗೂ ಗೋಪಯುವತಿಯರಿಗೆ ಅನುರಾಗ ಮೂಡಿಸಿದ ಬಗೆ

ಮಿಳಿರ್ವನ್ನಂ ಕುಡಿವಾಲಮುವ್ವಳಿಸುವನ್ನಂದಿಟ್ಟೆ ಸೂಟಿಕ್ಕಿ ಕೆ
ಕ್ಕಳಿಪನ್ನಂ ಕಿವಿಸೋಂಕಿನಿಂ ಕೊಣಕಿಡುತ್ತುಂ ಬರ್ಪಿನಂಪೋಗಿ ತಂ

ದೆಳವುಲ್ಲುಂ ಪೊಳೆವುಲ್ಲುಮೆಂಬ ಪಸುರ್ವುಲ್ಲೊಳ್ ತಾಂಗಿಕಾಳಿಂದಿಯೊಳ್
ತಿಳಿನೀರೂಡಿ ಮುರಾರಿ ವತ್ಸಕುಲಮಂ ಕಾದಂ ಮಹೋತ್ಸಾಹದಿಂ ೫೯.

ಅನುನಯದಿಂ ಬನಕ್ಕೊಡನೆ ಪೋಗಿ ಲತಾಗೃಹದಲ್ಲಿ ಗೋಪಿಯರ್
ವನರುಹನೇತ್ರನಂ ಪಿಡಿದು ಚುಂಬಿಸೆ ತಳ್ತುಮರ್ದಪ್ಪಿ ಪೀವರ
ಸ್ತನಭರದೊಳ್ ಪೊರಳ್ಚಿ ನಿಬಿಡೋರು ಯುಗಂಗಳೊಳಿಟ್ಟುಮರ್ಚಿ ಸಂ
ಜನಿತಕಟೀತಟದ್ರವೆಯರುತ್ಪುಲಕಾಂಗಿಯರಾಗಿ ರಂಜಿಪರ್ ೬೦.

ಅಲ್ಲಿ ಕಾಳಿಂದಿಯಲ್ಲಿ ಹಕ್ಕಿ ಪ್ರಾಣಿ, ಮತ್ತು ಮನುಷ್ಯರಿಗೆ ಭಯಕಾರಕವಾದ ವಿಷಸರ್ಪ ಕಾಳಿಂಗ ನಿರುವುದನ್ನು ತಿಳಿದು ದುಷ್ಟೋರಗನನ್ನು ನಿಗ್ರಹಿಸಿ ಶಿಷ್ಟ ಜನರನ್ನು ಕಾಯುವೆನು ಎಂದು ನಿರ್ಧರಿಸಿ ಆ ಮಡುವಿನ ಸಮೀಪಕ್ಕೆ ಬಂದು, ಕಾಳಿಂದಿಯ ದಡದಲ್ಲಿದ್ದ ಮರವೊಂದರ ಮೇಲಿನಿಂದ ಕಾಳಿಂಗನ ಮೇಲೆ ಎರಗಿದ.

ಆಗಸದಿಂ ವಧ್ಯಶಿಲಾ
ನಾಗಂಗೆ ಗರುತ್ಮನೆಱಗುವಂತಾ ಮರದಿಂ
ನಾಗಾರಿಕೇತು ಕಾಳಿಯ
ನಾಗಂಗೆಱಗಿದನಮರ್ತ್ಯರೀಕ್ಷಿಸೆ ನಭದೊಳ್ ೬೧.

ಸಿಡಿವ ಪಡೆವಣಿಗಳಂ ನೂ
ರ್ಮಡಿಸುತ್ತುಂ ನೆಗೆವ ತದ್ವಿಷಾಗ್ನಿಯ ಕಿಡಿಯಿಂ
ದೊಡನೆಯ ಗೋಪರ್ ತಂತ
ಮ್ಮೊಡಲೊಳ್ ಪುಗುಳೇಱೆಪೋಗಿ ಪುಯ್ಯಲ್ಚುವುದುಂ ೬೨.

ಶಿಶಿರಪಯಃಕಣವೆರಸಿದ
ಕುಶೇಶಯಚ್ಛದ ಮನಕ್ಷಿಗಳ್ ಬಾಷ್ಪಜಲ
ಪ್ರಶಮಿತ ರುಚಿಗಳ್ ಪೋಲ್ತಿರೆ
ಯಶೋದೆಯುಂ ನಂದಗೋಪನುಂ ನಡೆತಂದರ್ ೬೩.

ಅವರ ಮನೋವೇದನೆ ಹೀಗೆ ಕೋಡಿವರಿಯಿತು.

ಭವದೀಯ ಮನೋಹರ ಬಾ
ಲ್ಯವಿನೋದಾಮೃತದೊಳೆಯ್ದೆ ತೀವಿದ ಮತ್ಸ್ವಾಂ
ತವನಿಂತೀ ವಿಷದಿಂ ತೀ
ವುವುದೇ ಶ್ರೀ ವತ್ಸ ವತ್ಸ ವತ್ಸ ಸವತ್ಸಾ ೬೪.

ಪಿರಿದುಂ ಮದೀಯ ಜನ್ಮಾಂ
ತರಪುಣ್ಯದಿನೆಮಗೆ ನಿನ್ನ ದೊರೆಯ ತನೂಜಂ
ದೊರೆಕೊಂಡನೆಂಬ ಸುಖ ಸಾ
ಗರಮುಂ ದುಃಖಾನಳಾರ್ಕ್ಕಿ ಪೀರ್ದಪುದಲ್ತೆ ೬೫.

ಹರಿಯಿಲ್ಲದ ಪವನಾಧ್ವಂ
ಹರಿಯಿಲ್ಲದ ಲೋಕಪಾಲ ಪರಿಷದ್ವಲಯಂ
ಹರಿಯಿಲ್ಲದ ಕಾಂತಾರಂ
ಹರಿ ನೀನಿಲ್ಲದ ಮದೀಯ ಗೋಕುಲಮಫಲಂ ೬೬.

ಹೀಗೆ ಗೋಳಿಟ್ಟು ನಂದಗೋಪ-ಯಶೋದೆಯರು ತಪಿಸಿದರು. ಗೋಪಿಯರು ತಾವೂ ಜೊತೆಯಲ್ಲೇ ಬರುವೆವೆಂದರು. ಬಲರಾಮನೂ ಮಡುವನ್ನು ಬಿಟ್ಟು ಹೊರ ಬಾ ಎಂದು ಕೂಗಿದನು. ಆಗ ಕೃಷ್ಣನು:

ತಿಳಿಯೆ ವಿನೋದನಿದ್ರೆ ಹರಿ ಮೆಲ್ಲನೆ ಮೆಯ್ಮುಱಿವಂತೆ ಗೆಯ್ಕೆ ತ
ನ್ನಳವಱಿದೆಯ್ದೆ ಸುತ್ತಱಿದ ಪಾವಿನ ಪೆರ್ಪೆಡೆಯುಂ ಪದಾಂಬುಜಂ
ಗಳ ಕೆಳಗಿಕ್ಕಿ ಮೆಟ್ಟಿ ಕರದಿಂದೆ ತದೀಯ ಶರೀರ ಕಾಂಡಮಂ
ಜಳರುಹ ಕಾಂಡಮಂ ಪಿಡಿವವೋಲ್ ಪಿಡಿದಾಡಿದನೆಂದು ಲೀಲೆಯಿಂ ೬೭.

ಆಗ ಕಾಳಿಂಗನ ಪತ್ನಿಯರು ತಮಗೆ ಪುರುಷಭಿಕ್ಷೆಯನ್ನು ನೀಡಬೇಕೆಂದು ಅಚ್ಯುತನಿಗೆ ಅಂಜಲಿಬದ್ಧರಾಗಿ ನಿಂತು ಬಗೆ ಬಗೆಯಾಗಿ ಸ್ತುತಿಗೈದು ಬೇಡಿಕೊಂಡರು. ಆಗ ಕೃಷ್ಣನು ಕಾಳಿಂಗನಿಗೆ ನೀನು ಇಲ್ಲಿರಬೇಡ, ಸಮುದ್ರವನ್ನು ಸೇರು ಎಂದು ಹೇಳಿ ಕಾಳಿಂಗನನ್ನು ಕಾಯ್ದು ಎಲ್ಲರಿಗೂ ಆನಂದವನ್ನುಂಟು ಮಾಡಿದನು.

೫. ಗೋಕುಲಕೆ ಕೊಡೆವೊಲಂದತ್ತಿನಿಂದಂ ಮುಕುಂದಂ

ಬೃಂದಾವನಕ್ಕೆ ವರ್ಷಾಕಾಲ ಕಾಲಿಟ್ಟಿತು. ಅದರ ವರ್ಣನೆ :

ಮುಗಿಲಿವಿರೇಱೆ ಕಾದಲಲರೇಱೆವೊಲಂ ಪಸುರೇರೆ ಕಾಡ ಮ
ಲ್ಲಿಗೆ ನನೆಯೇಱೆ ಪೊಲ್ಲೆ ನಯಮೇಱೆ ಬಿಸಿಲ್ ಕಮದಣ್ಣಸೇಱೆ ಕೇ
ದಗೆ ಸುಳಿಯೇಱೆ ಹಂಸೆ ಭಯಮೇಱೆ ನವಿಲ್ ನಲಮೇಱೆ ಕಾಮ ಬಾ
ಹುಗ ಜಯಮೇಱೆದತ್ತು ವಿರಹಿಪ್ರಕರಕ್ಕಱಲೇಱುತ್ತಿರ್ಪಿನಂ ೬೮.

ದಿನನಾಥಂ ನವವರ್ಷಾ
ವನಿತೆಯ ಪೀವರ ಪಯೋಧರ ಸ್ಪರ್ಶನದಿಂ
ವಿನತಾಂಶುಕನಾದನೆನಲ್
ವನಿತೆಯ ಪೋಲೆ ಮುಟ್ಟಿಸೌಚಿಯಾವಂ ಜಗದೊಳ್ ೧೯.

ಗಗನ ಶ್ರೀಯ ವಿಚಿತ್ರ ವಸ್ತ್ರ ವಿಳಸತ್ಕಂವ್ಯಾನಮೆಂಬಂತೆ ಕಾ
ರ್ಮುಗಿಲೆಂಬಾನೆಯ ರನ್ನದಗ್ಗವಣೆಯೆಂಬಂತಬ್ಜ ಗರ್ಭಾಂಡ ಭೂ
ರಿಗೃಹದ್ವಾರ ಮುದಾರ ತೋರಣಮಿದೆಂಬಂತಭ್ರದೊಳ್ ನೋಡೆವಿ
ಟ್ಟಿಗೆ ಚೆಲ್ವಾಯ್ತು ಬಹುಪ್ರಭಾಶಬಳಿತಂ ಗೀರ್ವಾಣ ಬಾಣಾಸನಂ ೨೦.

ಸುರಗೋಪಂಗಳು ಮಾಲಿಕಲ್ಲುಮೆಳವುಲ್ಲುಂ ಕೆಂಪಿನಿಂ ಬೆಳ್ಪಿನಿಂ
ಹರಿತಚ್ಛಾಯೆಯಿನಲ್ಲಿಗಲ್ಲಿಗೆಸೆಗುಂ ಮಾಣಿಕ್ಯದಿಂ ಮುತ್ತಿನಿಂ
ಗರುಡೋದ್ಗಾರದ ಪಚ್ಚೆಯಿಂ ಸಮೆದ ನಾನಾ ಭೂಷಣಾನೀಕಮಂ
ಧರಣೀವಲ್ಲಭೆಗಂಬುದಾಗಮ ವಿಟಂ ತಂದಿಕ್ಕಿದೊಂದಂದದಿಂ ೨೧.

ದರಿಗೊಂಡೀಡಿಱಿದಾಡುತುಂ ಕೊಣಕುತುಂ ಬಾರುತ್ತುಮೊಳ್ಗಾಡೊಳಾ
ದರದಿಂ ಮೇದೆಳೆವುಲ್ಗಳಂ ತೊರೆದು ಪಾಲ್ಗಳ್ ಕೆಚ್ಚಲಿಂದೆಚ್ಚು ಪಾ
ಯ್ತರೆ ಪಟ್ಟಿರ್ದುವೆಟಿಲ್ವ ಕರ್ಣವರೆಮುಚ್ಚಿರ್ದಕ್ಷಿಗಳ್ ಪೊಯ್ದು ಸುಯ್
ನೊರೆವಿಂಡುಣ್ಮುವ ಸೃಕ್ವಮಂದೆಸೆಯೆ ಮೆಲ್ಕೊತ್ತುತ್ತೆ ಕಾಡೆರ್ಮೆಗಳ್ ೨೨.

ಬಳ್ಸರಿ ಬಿಱುಸರಿ ಪೆರ್ಮಳೆ
ಮೆಲ್ಸರಿ ತುಂತುರ್ ತುಷಾರವಿಡುಕುಂಬನಿ ತಂ
ದಲ್ಸೋನೆ ನಟ್ಟು ಬಡಪಮೆ
ನಲ್ಸರಿದುವು ಬಿಡದೆ ಮುಱುಗಳಿರುಳುಂಪಗಲುಂ ೨೩.

ಕೃಷ್ಣನನ್ನು ಕೊಲ್ಲಲು ಕಂಸನು ಕಳುಹಿಸಿದ ಧೇನುಕನೆಂಬ ರಾಕ್ಷಸನನ್ನು ಕೃಷ್ಣನು ಕೊಲ್ಲುತ್ತಾನೆ.

ಶರತ್ಕಾಲದ ಆಗಮನ- ವರ್ಣನೆ

ದರಿಯಂ ಮೀಱಿರ್ದ ನೀರೊತ್ತಿಱಿತರೆ ತೊಱೆಗಳ್ಗಂ ಪುಳಿಲ್ವಟ್ಟಮಯ್ತೀ
ಱಿರೆ ಸ್ವಪಾಳಂ ಮಳಲ್ದಿಂಟೆಗಳೆಸೆಯೆ ಶರತ್ತಾಪ ಸಂಪತ್ತಿಯಿಂದಂ

ತೆರೆಗಳ್ ನೀರ್ವೊಕ್ಕವೊಲ್ ತೀರದ ತರುಪಟಲಚ್ಛಾಯೆನೀರೊಳ್ ಬೆಡಂಗಾ
ಗಿರೆ ತತ್ಛಾವಾಸ ಚಿತ್ತಕ್ಕೆಣೆಯೆನೆ ತಿಳಿದತ್ತಂದು ಸಿಂಧುಪ್ರತಾನಂ ೭೪.

ಪಿಂಗಳಮಾದನೆಲ್ಲ ತೆನೆಯಂ ನಸುಗರ್ಚಿದ ರಕ್ತಚಂಚುಪ
ಕ್ಷಂಗಳ ಶಾಡ್ವಲಚ್ಛವಿ ಮನಂಗೊಳೆ ಪಾಱುವ ಕೀರ ಮಾಲೆ ರೋ
ದೋಂಗಣಮೆಂಬ ಪಟ್ಟಣದೊಳೊಪ್ಪುವ ಬೆಳ್ಮುಗಿಲೆಂಬ ಬಳ್ಳಿಮಾ
ಡಂಗಳ ಪೊನ್ನ ಮಾಣಿಕದ ಪಚ್ಚೆಯ ತೋರಣದಂತೆ ರಂಜಿಕುಂ ೭೫.

ಮದಚೆಳೆಯಾಗಿ ನೀರ್ಮೊಗೆವ ಖೇಚರ ಕಾಂತೆಯ ಹಸ್ತದಿಂ ಬೞಿ
ಲ್ಚಿದ ನವ ಕಾಪ್ಯ ಕುಂಭಮೆ ತರಂಗಿತ ನಾಕ ತರಂಗಿಣೀ ಪ್ರವಾ
ಹದೊಳಿದೆ ಕಾಣಲಾದಪುದೆನಲ್ ನಿಱಿಗೊಂಡ ಶರಧ್ವನಾಳಿಯಿಂ
ಪುದಿದನಿಳಾಧ್ವದೊಳ್ ಪೊಳೆಯುತಿರ್ದುದು ಚಂಡ ಮರೀಚಿ ಮಂಡಲಂ ೭೬.

ಶರತ್ಕಾಲದ ಬೆಳ್ದಿಂಗಳು :

ಮೃಡಹಾಸದ್ಯುತಿಯಂತೆ ಕಂತು ಶರದಂತಿರ್ದಚ್ಚವೆಳ್ದಿಂಗಳಂ
ಕಡುದಣ್ಪಿಂಗೆಡೆಗೊಂಡಿದೊಂದು ಬಿಸಿಲೆಂದಾಶ್ಚರ್ಯದಿಂದಂ ಜನಂ
ನಡೆನೋಡುತ್ತೆ ಮಹೋತ್ಪಳೋತ್ಪಳನಿಮೇಷೋನ್ಮೇಷ ಚಿಹ್ನಂಗಳಿಂ
ಗಡಬೆಳ್ದಿಂಗಳಿದೆಂಬುದೇವೊಗ ಟ್ವೆಸೂರ್ಜಚ್ಛೀಯ ಬೆಳ್ದಿಂಗಳಾ ೭೭.

ಇಂಥ ಶರತ್ಕಾಲದಲ್ಲಿ ಇಂದ್ರೋತ್ಸವವನ್ನು ನಡೆಸಬೇಕೆಂದು ನಂದಗೋಪನಾದಿಯಾಗಿ ಗೋಪರೆಲ್ಲರೂ ಸಂಭ್ರಮದಿಂದ ಸಜ್ಜಾಗಿದ್ದನ್ನು ಕಂಡು ಕೃಷ್ಣನು, ನಮಗೆ ಗಿರಿಗಳು, ಗೋವುಗಳೇ ಇಷ್ಟದೈವ. ಗಿರಿಯಜ್ಞವೂ, ಗೋಯಜ್ಞವೂ ಪ್ರಧಾನವಾದ ಮಂಗಳ. ಆದ್ದರಿಂದ ಗಿರೀಂದ್ರೋತ್ಸವ ಮಾಡೋಣವೆಂದು ಅವರನ್ನು ಒಪ್ಪಿಸಿ ಗೋವರ್ಧನಗಿರಿಗೆ ಕರೆದೊಯ್ಯುತ್ತಾನೆ. ಆ ಗಿರಿಯಲ್ಲಿನಿಂತು ತಾನೇ ಅವರಿಂದ ಪೂಜೆಗೊಳ್ಳುತ್ತಾನೆ. ಗಿರಿಗೂ ಪೂಜೆ ಸಲ್ಲುತ್ತದೆ. ಅದರಿಂದ ಕೋಪಗೊಂಡ ಇಂದ್ರನು ಆನೆಯ ಸೊಂಡಿಲಿನ ಗಾತ್ರದ ಮಳೆಯ ಧಾರೆಗಳನ್ನು ಆಲಿಕಲ್ಲುಗಳೊಂದಿಗೆ ಸುರಿಸಿದನು. ಗೋಪಬಾಲ- ಬಾಲೆಯರು ಕೃಷ್ಣನನ್ನು ಮೊರೆಹೊಕ್ಕರು. ಆಗ ಕೃಷ್ಣನು:

ಸಮುದಗ್ರಗ್ರಾವವರ್ಷಂ ಕಱೆಯೆ ತುರುವುಮಾವುಂ ಪಡಲ್ವಿಟ್ಟುಬಿಟ್ಟ
ಪ್ಪಮೆನುತ್ತುಂ ಗೋಪಗೋಪೀ ತತಿ ಮಱೆವುಗೆ ಗೋವರ್ಧನಾದೀಂದ್ರಮಂಕಿ
ಟ್ಟುಮಹಾಂಭೋ ನಿರ್ಝರಂ ಝಲ್ಲವೊಲಿರೆ ಮಹಾವೃಷ್ಟಿಯಿಂ ವಾಮದೋರ್ದಂ
ಡಮೆ ಕಾವಾಗಿರ್ಪಿನಂ ಗೋಕುಲಕೆ ಕೊಡೆವೊಲಂದೆತ್ತಿಸಿಂದಂ ಮುಕುಂದಂ ೭೮.

ಹೀಗೆ ಏಳು ದಿನಗಳು ಎತ್ತಿ ಹಿಡಿದು ಎಲ್ಲರನ್ನೂ ಕಾದನು. ಇಂದ್ರನು ಶ್ರೀ ಕೃಷ್ಣನ ಮಹಿಮೆಯನ್ನು ಮನಗಂಡು ಕ್ಷಮೆ ಕೇಳಿ ಅವನನ್ನು ವಿಧವಿಧವಾಗಿ ಸ್ತುತಿಸಿ ಗೋವಿಂದನೆಂಬ ಅಭಿದಾನವನ್ನು ನೀಡಿದ.

೬. ಶ್ರೀಕೃಷ್ಣನ ರಾಸಲೀಲೆ

ಶ್ರೀಕೃಷ್ಣನೊಂದಿಗೆ ರಾಸಕ್ರೀಡೆಯಾಡಲು ಬಗೆ ಬಗೆಯ ಬೆಡಗಿನ ಗೋಪಬಾಲೆಯರು ಬಂದರು.

ಕೊಂಕಿದ ಪುರ್ಬುಂತೆಳ್ವಸಿ
ಱುಂ ಕೋಮಲ ತನುವುಮೆಸೆಯೆ ನಡೆತಂದುದು ಚೆ
ಲ್ವಿಂ ಕದಳೀ ಪತ್ರದ ದೂ
ರ್ವಾಂಕುರದೆಳವಿದಿರ ಬಣ್ಣದ ಬಲಾನೀಕಂ ೭೯.

ನಡುನಳಿಯೆ ಪೊಳೆಯೆ ಕಣ್ಗಳ್
ಪೊಡರೆ ಕುಚಂ ಮಿಳಿರೆ ಮೇಲುದೆಸೆಯೆ ವಿಳಾಸಂ
ನಡೆದರ್ ಕೇಸಡಿಗಳ ತಳಿರ
ರಡಿಗಳ ಮೆಲ್ನಡಿಗಳ ತನು ಶರಸನ್ನಿಭೆಯರ್ ೮೦.

ಲಳಿತ ನಿಜರೂಪ ವಿಭ್ರಮ
ವಿಳಾಸ ಮಡರ್ದೆಸೆಯೆ ಬಂದರಾಮಳಕ ಕುಚಂ
ಗಳನಾರಂಗ ಕುಚಂಗಳ
ನಳಿನೀ ಕುಟ್ಮಳ ಕುಚಂಗಳೆಳ ಜವ್ವನೆಯರ್ ೮೧.

ಲಳಿತಾಕಾರಂ ವಿಭವಂ
ಬೆಳಗುವ ಲಾವಣ್ಯಮೆಸೆಯೆ ಬಂದರ್ ನಗೆಗ
ಣ್ಗಳ ಚೆಲ್ಲೆಗಣ್ಗಳಲರ್ಗ
ನಿಡುಗಣ್ಗಳ ಬೆಡಂಗಿಯರ್ ಕೋಮಲೆಯರ್ ೮೨.

ತನ್ನನ್ನು ಸುತ್ತುವರಿದ ಗೋಪಬಾಲೆಯರ ನಡುವೆ ಕೃಷ್ಣ ಹೀಗಿದ್ದ :

ಮುಡಿಗಟ್ಟೆಂಬಾಗೆ ನುಣ್ಪೇಲಿಯಿಸಮರೆ ಭುಜಂ ರತ್ನ ಕೇಯೂರದಿಂದು
ಳ್ಳುಡೆ ಚೆಲ್ವಂಬೀಱೆ ಪೀತಾಂಬರದಿನಗಲ್ಬುರಂ ಕೌಸ್ತುಭ ಶ್ರೀಯಿನೊಳ್ಪಂ

ಕುಡೆ ಗಂಡಂ ಕುಂಡಲಾಂದೋಳನವಿನೆಸೆಯೆ ನಿಂದಂ ತ್ರಿಭಂಗಾಂಗದಿಂನೋ
ಟ್ಪೊಡೆ ಶೃಂಗಾರಾವತಾರಂ ಮುರರಿಪು ಕೊಬಿಲಂ ಬಾಜಿಸುತ್ತಿರ್ದನಾಗಳ್ ೮೩.

ರಸಭಾವ, ಬೇರೆ, ಕ್ರಮ ಬೇರೆ, ಜತಿ ಇನ್ನೊಂದೇತರ ಎಂಬಂತೆ, ನಾಳಿಕೇರ ರಸಧಾರಾವೃಷ್ಟಿ ಮತ್ತು ಜೇನಿನ ಮಳೆ ಎರಡೂ ಒಟ್ಟಿಗೆ ಸುರಿಯುತ್ತಿದೆ ಎಂಬಂತೆ ಕೃಷ್ಣ ಕೊಳಲೂದಿದ.

ರಸಭಾವಂ ಪೆಱತೋಜೆ ಬೇಱೆಜತಿಮತ್ತೊಂದಿಂಪಪೂರ್ವಂ ನಯಂ
ಪೊಸತೆಂಬಂತಿರೆ ನಾಳಿಕೇರ ರಸಧಾರಾವೃಷ್ಟಿ ಜೇನೆಯ್ಯ ಸೋ
ನೆಸುಧಾಸಾರವಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾಜಿಸಿದಂ
ಬಣ್ಣಿಸೆ ವಾಸವಂ ಮಧುರ ನಾದಾವಾಸವಂ ವಾಸವಂ. ೮೪.

ಕಮಳ ದಳಾಕ್ಷನಾಕೃತಿಯನೀಕ್ಷಿಸಿ ಸಾಸಿರ ಕಣ್ಗಳಂಗದೊಳ್
ಸಮನಿಸಿದೀಕ್ರಮಂ ಸಫಲ ಮಾಯ್ತೆನಗೀತನದೊಂದು ವೇಣುನಾ
ದಮನೊಸೆದಾಲಿಸಲ್ ಕಿವಿಗಳೇಕೆಯೊ ಸಾಸಿರವಾದುವಿಲ್ಲೆನು
ತ್ತಮರವರಂ ಮನಂಗೊಳೆ ನೆಗಟ್ಟುದು ಕೃಷ್ಣನ ವೇಣುನಿಸ್ವನಂ ೮೫.

ತಮ್ಮ ಮಧ್ಯೆ ಪರಿವೇಷಗೊಂಡ ಚಂದ್ರನಂತೆ ಮೆರೆಯುತ್ತಿದ್ದ ಶ್ರೀ ಕೃಷ್ಣನು ನರ್ತನಕ್ಕೆ ಪ್ರೇರಿಸಲು, ಗೋಪಿಯರು ಪ್ರೀತ್ಯಾದರಗಳಿಂದ ಹಾಡುತ್ತ ನರ್ತಿಸಿದರು.

ಗೀತ ರಸ ಪ್ರವಾಹನದಿ ಚಂಚಳನೇತ್ರ ಮರೀಚಿವೀಚಿ ಸಂ
ಘಾತಿ ಹೃದ್ಯವಾದ್ಯ ಘನಘೋಷಣ ದೇಟ್ಗೆ ನಿಸರ್ಗವಾದ ಸಂ
ಗೀತರಸಾಬ್ಧಿ ಪೆರ್ಚೆ ಹರಿಲೋಚನ ಚಂದ್ರಿಕೆಯಿಂ ವಿಧೂದಯ
ಸ್ಫೀತ ಸುಧಾಬ್ಧಿಯಂತೆ ಪರಿಘೂರ್ಣಿಸುತಿರ್ದುದು ರಾಸಕೇಳಿಯೊಳ್ ೮೬.

ನಗೆ ಮೊಗದಿಂ ಮುಗುಳ್ನಗೆ ತುಳುಂಕೆ ಬಳಲ್ಕೆಡಿಯಿಂದರಲ್ಗಳ
ಲ್ಲಿಗೆ ನಿಡುಗಣ್ಗಳಿಂ ಪೊಳಪು ಸಾಲಿಡೆ ನೀಳ ಚಳಾಳಕಾಳಿಯಿಂ
ಮೃಗಮದರೇಣು ಸೂಸೆಲತೆ ತೆಂಬೆಲರ್ಗೊಯ್ಯನೆ ನರ್ತಿಪಂದದಿಂ
ಸೊಗಯಿಸೆ ಗೋಪಿ ಢಕ್ಕೆಯ ಲಯಕ್ಕೆ ಪಱಿಳ್ ಜತಿ ಮೆಟ್ಟುತಾಡಿದಳ್ ೮೭.

ಹೀಗೆ ಗೋಪಿಯರೊಡನೆ ರಾಸಕ್ರೀಡೆಯಾಡಿದ ಕೃಷ್ಣನಿಗೆ ಇಂದ್ರನಿಂದ ಉಪೇಂದ್ರನೆಂಬ ಅಭಿದಾನವೂ ದೊರಕಿತು. ಹಾಗೆ ಗೋಪಿಯರೊಡನೆ ಸರಸ- ಸಲ್ಲಾಪದಿಂದಿದ್ದ ಕೃಷ್ಣ ಸ್ವಲ್ಪಕಾಲ ಅನ್ಯ ಪ್ರದೇಶಕ್ಕೆ ಹೋಗುತ್ತಾನೆ. ಗೋಪಿಯರು ಕೃಷ್ಣಚೇಷ್ಟಿತ ಸ್ವಾಯತ್ತರೂಪೆಯರಾಗಿ ಕೃಷ್ಣನ ವಿವಿಧ ಭಾವ -ಭಂಗಿಗಳನ್ನು ಅಭಿನಯಿಸಿ ಪ್ರಣಯ ಕೋಪವನ್ನು ತಾಳಿದರು. ಅವರ ಪ್ರಣಯ

ಕೋಪದ ರೀತಿ:

ಪ್ರಿಯೆಯೊರ್ಬಳ್ ವಿನಿಗೂಢ ಸಂಭ್ರಮೆಯು ಮೊರ್ಬಳ್ ಪಾಟಲೀಲೋಲನೇ
ತ್ರೆಯುಮೊರ್ಬಳ್ ವಿತತಸ್ಮಿತಾನ್ವಿತೆಯುಮೊರ್ಬಳ್ ದಂತದಷ್ಟಾರುಣೋ
ಷ್ಠೆಯುಮೊರ್ಬಳ್ ವಿಮುಖೀಕೃತಾಕೃತಿಯುಮೊರ್ಬಳ್ ಕುಂಚಿತಭ್ರೂಶಲಾ
ಕೆಯು ಮಾಗಿರ್ದ ಬೆಡಂಗದೇಂ ಪಡೆದುದೋ ಕೃಷ್ಣಂಗತಿಪ್ರೀತಿಯಂ ೮೮.

ಈ ಪ್ರಣಯ ಕುಪಿತೆಯರನ್ನು ಶ್ರೀ ಕೃಷ್ಣನು ತನ್ನ ಸರಸವಾದ ನೋಟ, ವಚನ ಹಾಗೂ ಹಸ್ತಕಮಲ ಸಂಸ್ಪರ್ಶನದಿಂದ ಪ್ರಸನ್ನಗೊಳಿಸಿದನು.

ಗೂಳಿರೂಪದಲ್ಲಿ ಕಂಸನು ಕಳಿಸಿದ ಅರಿಷ್ಟಾಸುರನನ್ನು ಕೃಷ್ಣ ಸಂಹರಿಸಿದ. ಹಾಗೆಯೇ ಕಂಸಪ್ರೇರಿತನಾಗಿ ಬಂದ ಕುದುರೆಯ ರೂಪದ ಕೇಶಿರಾಕ್ಷಸನನ್ನು ವಿಲಕ್ಷಣವಾದ ರೀತಿಯಲ್ಲಿ ಕೊಂದನು. ಈ ವಧಕ್ರಮವನ್ನು ಕಣ್ಣಾರೆ ಕಂಡ ನಾರದನು ಕೃಷ್ಣನನ್ನು ಸ್ತುತಿಸುತ್ತಾನೆ. ಈ ಸ್ತುತಿಯಲ್ಲಿ ರುದ್ರಭಟ್ಟನ ನಿರ್ಭರ ಭಕ್ತಿ ಕೆನೆಗಟ್ಟಿದೆ.

ಜಗಮಂ ನುಂಗುವ ಶೂಲಿ ನೀನೆ ಜಗಮಂ ಮಾಟ್ಪಬ್ಜಜಂ ನೀನೆತ
ಜ್ಜಗಮಂ ರಕ್ಷಿಪ ವಿಷ್ಣು ನೀನೆ ಜಗಮುಂಪೊ ನೀನೆ ಸರ್ವೇಶ ಸ
ರ್ವಗ ಸರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನವಾಗಿರ್ಪವ
ಸ್ತುಗಳಿಲ್ಲೀ ರಿಪು ಭಿನ್ನನಾದನಿದು ಚಿತ್ರಂ ಪದ್ಮಪತ್ರಾಂಬಕಾ ೮೯.

೭. ಚೈತನ್ಯರೂಪನಜಿಯನೆ ಕೃಷ್ಣ

ಕೃಷ್ಣನು ಕೇಶಿಯನ್ನು ಸಂಹರಿಸಿದ ವಿಚಾರವನ್ನು ನಾರದನಿಂದ ತಿಳಿದ ಕಂಸನು ಕೃಷ್ಣನನ್ನು ಕೊಲ್ಲುವುದು ಹೇಗೆಂದು ಚಿಂತಿತನಾದ. ಕೊನೆಗೆ ಕಾರ್ಮುಕೋತ್ಸವದ ನೆಪದಿಂದ ಕೃಷ್ಣನನ್ನು ಆಹ್ವಾನಿಸಿ ಕೊಲ್ಲಬೇಕೆಂದು ನಿಶ್ಚಯಿಸಿ, ತನ್ನ ಮಂತ್ರಿಮುಖ್ಯನಾದ ಅಕ್ರೂರನನ್ನೇ ಆ ಕೆಲಸಕ್ಕೆ ನಿಯಮಿಸಿದ. ಈ ಸಂದರ್ಭದಲ್ಲಿ ಕವಿ ಅಕ್ರೂರನ ಕೃಷ್ಣ ಭಕ್ತಿಯನ್ನೂ ಅವನ ಕರ್ತವ್ಯ ಪ್ರಜ್ಞೆಯನ್ನೂ ಸೊಗಸಾಗಿ ನಿರೂಪಿಸಿದ್ದಾನೆ. ಕಂಸನೇ ಅವನ ವ್ಯಕ್ತಿತ್ವವನ್ನು ಹೀಗೆ ಕೊಂಡಾಡುತ್ತಾನೆ.

ಅಕ್ರೂರನ ವ್ಯಕ್ತಿತ್ವ

ವದನ ಚತುಷ್ಕವಿಲ್ಲದ ರಜೋಗುಣವಿಲ್ಲದ ಪದ್ಮಪೀಠವಿ
ಲ್ಲದ ಕಳಹಂಸವಿಲ್ಲದ, ಕಮಂಡಲುವಿಲ್ಲದ ಪಾಶರಜ್ಜುವಿ

ಲ್ಲದ ವಿಮಳಾಕ್ಷ ಮಾಲಿಕೆಯುಮಿಲ್ಲದ ಪೂರ್ವ ವಿರಿಂಚ ಧರ್ಮಕೋ
ವಿದ ನಯಯುಕ್ತ ದಾನಪತಿ ಪೇೞ್ಪೆನಾಂ ನಿನಗೊಂದು ಕಾರ್ಯಮಂ ೬೦.

ಅಕ್ರೂರ ರಥವೇರಿ ಹೊರಟ. ಬಹುಕಾಲದಿಂದ ಬಯಸಿದ ಶ್ರೀ ಕೃಷ್ಣದರ್ಶನದ ಅವಕಾಶದಿಂದ ಸಂತುಷ್ಟನಾಗಿದ್ದ. ಅವನ ಮನಸ್ಸಿನ ಚಿತ್ರ. ದ್ವಂದ್ವ

ಮುಖಿ ಪುರುಷನಿರ್ದ ದೆಸೆಗಭಿ
ಮುಖನಾದೊಡೆ ಪೋಯ್ತುಘಂ ಪರಾಙ್ಮುಖಮಂತ
ರ್ಮುಖವಾದುದು ಮಾನಸಮು
ನ್ಮುಖವಾದುದು ಭೋಂಕನಲರ್ದುದಾಸ್ಯಾಂಭೋಜಂ ೬೧.

ಪೊಡವಿಯೊಳಾಂ ಮೆಯ್ಯಿಕ್ಕಿರೆ
ನಡೆನೋಡಿದಯಾನ್ವಿತಂ ಸುದರ್ಶನ ಚಕ್ರಂ
ಬಿಡಿವ ನಿಜ ದಿವ್ಯ ಕರದಿಂ
ಪಿಡಿದೇಂ ನೆಗಪುಗುಮೆ ಕಮಳಲೋಚನನೆನ್ನಂ ೬೨.

ಧರೆಯಿಂದೇೞ್ವುದುಮಾನುಂ
ಬರೆತೆಗೆದು ಪುನಃ ಪುನಃ ಜನಾರ್ದನನಾಂ ಮಂ
ದರಮಂತಪ್ಪೈಸಿದ ಭುಜ
ಪರಿಘಂಗಳಿನೆನ್ನನೊಲ್ದು ತಪ್ಪೈಸುಗುಮೇ ೬೩.

ಅವನತಿಯಿಂ ಪೊರೆದ ಮದೀ
ಯ ವದನ ಭೂರಜಮನೊಲ್ದು ತೊಡೆಗುಮೆಲಕ್ಷ್ಮೀ
ಯುವತಿಯ ಮುಖಘರ್ಮಪಯೋ
ಲವಮಂತೊಡೆವರುಣ ಹಸ್ತತಳದಿಂ ಕೃಷ್ಣಂ ೬೪.

ಅಸುರನ ಚರನೆಂದಪಮಾ
ನಿಸುಗುಮೊ ಮೇಣ್ ಭಕ್ತನೆಂದು ಮನ್ನಿಸುಗುಮೊ ಭಾ
ಕವಿಸಿ ತಿಳಿದೆ ನಿಂತಿದಂ ಕ
ರ್ಮಸಾಕ್ಷಿ ಚೈತನ್ಯರೂಪ ನಟಿಯನೆ ಕೃಷ್ಣಂ ೬೫.

ಶ್ರೀ ಕೃಷ್ಣನ ದರ್ಶನ ಭಾಗ್ಯದಿಂದ ಅಕ್ರೂರನು ಸಂತುಷ್ಟನಾದ. ನಂದಗೋಪನು ಸ್ವಾಗತಿಸಲು, ಅವನ ಮತ್ತು ಯಶೋದೆಯ ಪುಣ್ಯಾತಿಶಯವನ್ನು ಹೀಗೆ ಹೊಗಳುತ್ತಾನೆ.

ಏತೆಱದ ತಪೋದಾನ
ವ್ರಾತದೊಳೇಂ ಮೊಗ್ಗೆನಂದ ನೀನೀ ತ್ರಿಜಗ
ತ್ತ್ರಾತಂಗೆ ಜಳಧಿಶಾಯಿಗೆ
ತಾತನೆ ಆದೊಂದು ಪೆಂಪಜಂಗಮಲಭ್ಯಂ ೯೬.

ರೂಢಿಯನಪ್ಪುಕೆಯ್ವಮರ ಮಾತೃಗಮಿಲ್ಲದ ಪುಣ್ಯ ಶಕ್ತಿ ಕೈ
ಗೂಡಿದುದೀಕೆಗಬ್ಧಿಶಯನಂ ಗಡ ನಂದನನೀ ಮನೋಹರ
ಕ್ರೀಡನನೆತ್ತಿಕೊಂಡು ಮೊಲೆಯೂಡಿದ ತಳ್ತುಮರ್ದಪ್ಪಿದೊಲ್ಪು ಮು
ದ್ದಾಡಿಸಿದೀ ಭವತ್ಸತಿ ಯಶೋದೆ ಕುಲಕ್ಕೆ ಯಶೋದೆಯಲ್ಲಳೆ ೯೭.

ಯಶೋದೆ-ನಂದನರನ್ನು ಕಾರ್ಮುಕೋತ್ಸವಕ್ಕೆ ರಾಮ, ಕೃಷ್ಣರನ್ನು ಸಂಗಡ ಕರೆದೊಯ್ಯಲು ಉದ್ಯೋಗಿಸಿದಾಗ ಗೋಪಿಯರೆಲ್ಲ ಬಗೆ ಬಗೆಯಲ್ಲಿ ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಾರೆ.

ವನಜಾತಾಕ್ಷನನುಯ್ವುಗಲ್ಕುವುದಱಿಂದಕ್ರೂರನಾಗಿರ್ದುಮಾ
ಣ್ಪನೆ ಹಿಂದೋಳರವಕ್ಕೆ ಮಲ್ಲಿಗೆಗೆ ಬೆಳ್ದಿಂಗಳ್ಗೆ ತಣ್ಗಾಳಿಗಿ
ನ್ನೆನಸುಂ ಕ್ರೂರತೆಯಂ ನೆಗೞ್ಚಿದಪನೋ ಅಕ್ರೂರನೆಂತಾದ ನೀ
ತನತಿಕ್ರೂರನಮೋಘಮೆಂದರಱಿಂದಕ್ರೂರನಂ ಗೋಪಿಯರ್ ೯೮.

ಕೃಷ್ಣವಿರಹವನ್ನು ಸಹಿಸಲಾರದ ಗೋಪಿಯರ ವಿರಹದ ಪರಾಕಾಷ್ಠೆ ಹೀಗೆ ವ್ಯಕ್ತವಾಗಿದೆ:

ಗೋಪಿಯರ ವಿರಹ ಭಾವ

ಪೊಡೆಯಲರಾತನಕ್ಷಿಗಮಗೋಚರಮಾಗಿರೆ ನಿೞ್ಕಿನೋಡಿ ಧೀಂ
ಕಿಡುವರಥಧ್ವಜಾಗ್ರಮನದುಂ ಮಸುಳುತ್ತಿರೆ ತೇರ ಧೂಳಿಯಂ
ಬಿಡೆ ನೋಡಿ ಧೂಳಿಯುಮಡಂಗಿರೆ ಕೃಷ್ಣನ ತೇರ ಧೂಳಿಯ
ಪ್ಪೊಡಿಮಿರದಾಯ್ತೆನುತ್ತಬಳೆ ಧೂಳಿವಿಡುತ್ತಿರೆ ಬಾಯ್ವಲುಂಬಿದಳ್ ೯೯.

ನಯನಕ್ಕೆಗಮ್ಯನಲ್ಲಂ
ಪ್ರಿಯಂ ಮನೋಗಮ್ಯನೀಕ್ಷಿಪೆಂ ಮನದೊಳೆ ಶೌ
ರಿಯನೆಂದು ನಿಮೀಲಿತ ನಯ
ನೆಯುಮೊರ್ಬಳ್ ಗೋಪಿ ಯೋಗರೂಢೆವೊಲಿರ್ದಳ್ ೧೦೦.

ರಾಮ-ಕೃಷ್ಣರನ್ನು ರಥದಲ್ಲಿ ಕುಳಿತಿರಲು ಹೇಳಿ ಮಾಧ್ಯಾಹ್ನಿಕಾನುಷ್ಠಾನ ಮಾಡಿ ಬರಲು ಅಕ್ರೂರ ಹೋಗುತ್ತಾನೆ. ಯಮುನೆಯಲ್ಲಿ ಮುಳುಗಿದ್ದಾಗ ವಿಷ್ಣು ಸಾಕ್ಷಾತ್ಕಾರವಾಯಿತು.

ರಥದ ಮೇಲಿದ್ದ ಕೃಷ್ಣ ಹಾಗೇ ಇರುವುದನ್ನು ಕಂಡು ಕೈ ಮುಗಿದುಕೊಂಡು ಬಗೆಬಗೆಯಾಗಿ ಸ್ತುತಿಸುತ್ತಾನೆ.

೮. ಕಂಸನಂ ಮಲ್ಲಕಳಕ್ಕೆತ್ತಿಕ್ಕಿತಾಂ ಮೇಲೆರಗಿದನ್

ಶ್ರೀ ಕೃಷ್ಣ-ಬಲರಾಮರು ಮಧುರಾಪುರವನ್ನು ನೋಡಬೇಕೆಂಬ ಕುತೂಹಲದಿಂದ ಬರುತ್ತಿರಬೇಕಾದರೆ ಎದುರಿಗೆ ಸಿಕ್ಕ ಅಗಸನಿಂದ ಕಂಸನಿಗಾಗಿ ಸಿದ್ಧಪಡಿಸಿದ ಅಮೂಲ್ಯ ವಸ್ತ್ರಗಳನ್ನು ಕಿತ್ತುಕೊಂಡು, ಅವುಗಳಲ್ಲಿ ಶ್ರೀಕೃಷ್ಣನು ಪೀತಾಂಬರವನ್ನೂ ಬಲರಾಮನು ನೀಲವಸ್ತ್ರಗಳನ್ನೂ ಧರಿಸಿದರು. ಅವರು ಆಗ ಹೇಗೆ ಕಾಣುತ್ತಿದ್ದರೆಂದರೆ :

ಎಳವಿಸಿಲೆಳಸಿದ ನೀಳಾ
ಚಳ ಶಿಖರದೊಳಸಿತ ಮೇಘವೆಳಸಿದ ತುಹಿನಾ
ಚಳ ಶಿಖರದೊಳೆಣೆಯೆನೆಹರಿ
ಬಳರೆಸೆದರ್ ಪೀತ ನೀಲಪಟಪರಿಧಾನರ್ ೧೦೧.

ಶ್ರೀ ಕೃಷ್ಣ-ಬಲರಾಮರು, ಸ್ವೇಚ್ಛೆಯಿಂದ ಸುಳಿದಾಡುತ್ತ ಆಯುಧ ಶಾಲೆಯನ್ನು ಪ್ರವೇಶಿಸಿ, ಅಲ್ಲಿ ಇಂದ್ರನನ್ನು ಗೆಲ್ಲುವ ಸಲುವಾಗಿ ಕಂಸನು ಇರಿಸಿದ್ದ ಧನುಸ್ಸಿಗೆ ಹೆದೆಯೇರಿಸಿದಾಗ ಅದು ಭಗ್ನವಾಯಿತು. ಇಂಥ ಧನುಸ್ಸನ್ನು ಮುರಿದ ವೈರಿಯನ್ನು ಒರೆಸಲು ಕುವಲಯಾಪೀಡ ಎಂಬ ಆನೆಯೇ ಸರಿ ಎಂದು ಮಂತ್ರಿ ಸಲಹೆ ನೀಡಿದನು. ಆ ಆನೆ ನಿಜಕ್ಕೂ ಮಹಾಗಜ:

ವ || ಅದೆಂತೆಂದೊಡೆ ವಿಂಧ್ಯ ಭೂಭೃದಾಯಾಮದೊಳಂ ಮಹಾ ವರಾಹ ಪರಿಣಾಹದೊಳಂ, ಮೇರು ಭೂಧರೋತ್ಸೇಧದೊಳಂ ಐರಾವತಪ್ರಭಾವದೊಳಂ ಕ್ಷಯಾಶುಶುಕ್ಷಣೀ ಕ್ಷೇಪದೊಳಂ ಪ್ರಳಯ ಜಲಧರ ಧ್ವಾನದೊಳಂ, ಸಂಹಾರ ಭೈರವಾರ್ಭಟೆಯೊಳಂ ತಾರ್ಕ್ಷ್ಯ ವಿಕ್ಷೇಪದೊಳಂ, ಸಿಂಹಲಂಘನದೊಳಂ ಪವನ ವೇಗ ದೊಳಮಗುರ್ವುಮದ್ಭುತ ಮುಮೆನಿಸಿ ೧೦೨.

ಅದು ಪರಿಯಿತ್ತೆ ಮುಟ್ಟಿದುದು ಮುಟ್ಟಿತ್ತೆ ಪೊಯ್ದುದು ಪೊಯ್ದುದೇ ಪೊರ
ಳ್ಚಿದುದು ಪೊರಳ್ಚಿತೇ ನಖರದಿಂದಿಱಿಯಿತ್ತಿಱಿಯಿತ್ತೆ ಪೋ ಕಟಿ
ಳ್ಚಿದುದು ಕಟಿಲ್ಚಿತೇ ಪದದಿನಿಟ್ಟೊರಸಿತ್ತೊರಸಿತ್ತೆ ಕೊಂದುದೆಂ
ಬುದನಜಿವೈರಿಯಿಂದನುಜ ಕೇವಳಮಲ್ತು ಮದೀಯ ಸಿಂಧುರಂ ೧೦೩.

ಮಲ್ಲರಂಗದ್ವಾರದಲ್ಲಿ ಕುವಲಯಾಪೀಡ ಗಜಾರೂಢನಾಗಿ ಆ ಬಾಲಕರನ್ನು ಕೊಲ್ಲಲು ಅಮಾತ್ಯನಿಗೆ ಹೇಳಿದ.

ಮಲ್ಲರಂಗದ್ವಾರದಲ್ಲಿ ಬಂದು ನಿಂತ ಆನೆಯ ಚಿತ್ರ :

ಮಣಿಮನ್ನಕ್ಷತ್ರ ಮಾಲಾರುಚಿನಿಚಯ ಮರುಚ್ಚಾಪದಿಂ ಪ್ರಸ್ಫುರದ್ಭೃಂ
ಹಣ ವಜ್ರಧ್ವಾನದಿಂದಂಕುಶಕಿರಣ ತಟಿಜ್ಜಾಲದಿಂ ದಾನಧಾರಾ
ರುಣಧಾರಾವರ್ಷದಿಂ ಕಾರ್ಮುಗಿಲೆ ಗಜದ ರೂಪಾದುದೆಂಬಂತಿಭೇಂದ್ರಂ
ರಣರಂಗದ್ವಾರದೊಳ್ ನಿಂದುದು ಪದಭರದೊಳ್ ಬಳ್ಕಿತತ್ ಕ್ಷೋಣೀಚಕ್ರಂ೧೦೪.

ಈ ಭಾನುಬಿಂಬಮಂ ಲೀ
ಲಾ ಭಸ್ತ್ರೀಕೆಯೆಂದು ಪೊಯ್ವುವೊಲ್‌ನಿಳ್ಕುವ ಹ
ಸ್ತಾಭೋಗದಿನೆಸೆದತ್ತ ಚ
ಲಾಭಂ ತಾನೆನಿಪ ಕುವಲಯಾ ಪೀಡೇಭಂ ೧೦೫.

ಶ್ರೀಕೃಷ್ಣ ಅದರೊಡನೆ ಸೆಣಸಿದ ರೀತಿ

ಅಱಿಯಟ್ಟಿತ್ತಟ್ಟಿ ಮುಟ್ಟಿತ್ತಡಿಸಿ ಪಿಡಿದುದಿಕ್ಕಿತ್ತು ಮೆಟ್ಟಿತ್ತದೌಂಕಿ
ತ್ತೆಱಗಿತ್ತೆತ್ತಿಭಂ ಕೃಷ್ಣನನೆತುಮರರ್ ಬೆರ್ಚೆ ಗೋಪಾಲಕರ್ ಬೆ
ಳ್ಕುಱಿದೈತ್ಯರ್ ಪೊಂಗೆ ಕೃಷ್ಣಂ ರಿಪುಕರಿಗಿನಿಸಂ ಗೆಲ್ಲವೀವಂತೆ ಪೋರ್ದಂ
ಕಿಱಿದಾನುಂ ಬೇಗದಿಂದಚ್ಯುತನ ತೆಱದಿನಾವಂ ವಿನೋದೈಕಶೀಲಂ ೧೦೬.

ರದನಾಗ್ರದ್ವಂದ್ವಮಂ ಕೈದುಡುಕಿ ಪಿಡಿದುರೋಭಾಗಮಂ ಪಾದದಿಂಪೋ
ಗೊದೆಯುತ್ತುಂ ಕೋಟ್ಕಳಂ ಚಿಕ್ಕನೆ ಕಿಟಿ ರದನದ್ವಂದ್ವ ಮೆಂಬೀಗದಾದಂ
ಡದಿಸುರ್ಚಿಡಾಡಿದಂ ಪೋಗವಸಣಿಗೆಯ ನೀಕೃಷ್ಣನೆಂಬಂತುರುಳ್ಚಿ
ದುರ್ದಗ್ರೇಭೇಂದ್ರಮಂ ತದ್ರದನಯುಗಳದಿಂ ಮೋದಿ ಕೊಂದಂ ಮುಕುಂದಂ೧೦೭.

ಆ ಮಹಾಗಜವನ್ನು ಕೊಂದ ಕೃಷ್ಣನ ಬಗ್ಗೆ ಜನಗಳಿಗೆ ಅನ್ನಿಸಿದ್ದು.

ಪ್ರತಿಮಲ್ಲರ್ ಗಿರಿಕಲ್ಪನೆಂದಿತರರೆಲ್ಲರ್ ಬಾಲನೆಂದಂಗನಾ
ತತಿಪುಷ್ಪಾಯುಧನೆಂದು ಗೋಪನಿವಹಂ ಸಾಮಾನ್ಯನೆಂದಾ ಕುಲಾ
ಕೃತಿ ಕಂಸಂ ಲಯಕಾಲನೆಂದು ದಿವಿಜರ್ ವಿಶ್ವಾತ್ಮನೆಂದೀಕ್ಷಿಸಲ್
ದಿತಿಜಾರಾತಿ ವಿಚಿತ್ರಮೂರ್ತಿ ಪುಗುತಂದಂ ಮಲ್ಲರಂಗಾಗ್ರಮಂ ೧೦೮.

ಆ ವಿಜಯತೇಜೋವಿಭವ ಸುಭಗರಪ್ಪ ತನ್ನ ಮಕ್ಕಳನ್ನು ಕಂಡು ದೇವಕಿಗೆ ಅಪೂರ್ವ ದರ್ಶನವಾಯಿತು.

ಪರಿದಾಲಿಂಗಿಸುವೆತ್ತಿ ಕೊಳ್ವ ಬಗೆ ಪುಟ್ಟಲ್ ಪುಟ್ಟಿದೌತ್ಸುಕ್ಯದಿಂ
ತೊರೆವನ್ನಂಕುಚಯುಗ್ಮಮಂದೆ ಸುತರಂ ಪೆತ್ತಂದದಿಂ ಪೆತ್ತಳಾ
ದರಮಂ ಕಾಣ್ಬುದುಮಪತ್ಯರಸಶೇಷಸ್ತುತ್ಯರಂ ಸೇವ್ಯ ಸ
ತ್ಯರಸಸ್ತಾಖಿಲ ದೈತ್ಯರಂ ಯದುಕುಲಾಬ್ಜಾದಿತ್ಯರಂ ನಿತ್ಯರಂ ೧೦೯.

ಕುವಲಯಾಪೀಡವನ್ನು ಕೊಂದ ಕೃಷ್ಣಬಲರಾಮರನ್ನು ಕೊಲ್ಲಲು ಚಾಣೂರ ಮುಷ್ಟಿಕರನ್ನು ಮುಂದೆ ಬಿಟ್ಟನು. ಮುಷ್ಟಿಕನೊಡನೆ ಬಲರಾಮನೂ, ಚಾಣೂರ ನೊಡನೆ ಕೃಷ್ಣನೂ ಮಲ್ಲಕಾಳಗವಾಡಿದರು.

ಶ್ರೀ ಕೃಷ್ಣನ ಕಾಳಗ

ಉಪಮಾತೀತವೆನಲ್ ಜವಕ್ಕೆ ಜವವಣ್ಮೆಂಗಣ್ಮು ಬಲ್ಪಿಂಗೆ ಬ
ಲ್ಪು ಪೊಡರ್ಪಿಂಗೆ ಪೊಡರ್ಪು ರೌದ್ರತೆಗೆ ರೌದ್ರತ್ವಂ ಮಿಗಿಲ್ಕಾಣಲಾ
ದಪುದೀ ಕೃಷ್ಣನೊಳಿಂ ಗೆಲಲ್ಕಱಿಯನೀ ಚಾಣೂರನೆಂದಿತ್ತ ಬಾ
ಜಿಪುದಂ ಮಾಣ್ಬೆರೆ ಶಂಖ ತೂರ್ಯಮೆಸೆದತ್ತತ್ತಿಂದ್ರ ತೂರ್ಯಸ್ವನಂ ೧೧೦.

ಆಮೇಲೆ ಶ್ರೀಕೃಷ್ಣನು ಚಾಣೂರನ ಹಿಂಗಾಲುಗಳನ್ನು ಹಿಡಿದೆತ್ತಿ ತಿರ್ರನೆ ತಿರುಗಿಸಿದನು.

ವ॥ ಅಂತು ಚಾಣೂರನಂ ನೆಗಪಿ ನೂಱುಸೂಟ್ವರಂ ತಿಱ್ರನೆ ತಿರಿಪಿ ಸೊಪ್ಪು ಸೊವಡಾಗೆ ಕಳದೊಳಪ್ಪಳಿಸಿ ಕೊಂದಿಕ್ಕಿದನ್. ಬಲರಾಮನು ಮುಷ್ಟಿಕನನ್ನು ಅವನ ದೇಹದ ನವರಂಧ್ರಗಳಿಂದಲೂ ರಕ್ತ ಹೊರಹೊಮ್ಮುವ ಹಾಗೆ ಮಾಡಿ ಕೊಂದ. ಆಗ ಕಂಸನ ಸೂಚನೆಯಂತೆ ಹಲವಾರು ಜನ ಜಟ್ಟಿಗಳು ಮೇಲೆ ಹಾಯಲು ಕೃಷ್ಣನು ಅವರೆಲ್ಲರನ್ನೂ ಕೊಂದ. ೧೧೧.

ಕೃಷ್ಣನ ಆಗಿನ ಸ್ವರೂಪ

ತೆಗೆದೀಂಟಲ್ ವಾರ್ಧಿ ನುಂಗಲ್ ದಿಗಿಭಸಮಿತಿ ತುತ್ತಲ್ ವಿರಿಂಚಾಂಡ ಭಾಂಡಂ
ಮಿಗಿಲಲ್ತೀತಂಗೆನಲ್ ದಾನವರಿಪು ಮುಸಕಂಗೊಂಡನಿಂಪೋರ್ವ ನೆಂಬೀ
ಬಗೆಯಿಂ ಪೆಣ್ಣಾನೆಯಂ ಪಲ್ಲಣಿಸು ಕುದುರೆಯಂಪೂಡು ತೇರಂ ಭಟರ್ ಕೈ
ದುಗಳಂ ಕೈಕೊಳ್ಳಿಮೆಂಬೀ ಭಟರ ಕಳಕಳಂ ಕೇಳಲಾದತ್ತದೆತ್ತಂ ೧೧೨.

ಕಂಸನೇ ಹೋರಾಡಲು ಬಂದಾಗ ಅವನನ್ನು ಅಪ್ಪಳಿಸಿ ಕೊಂದನು.

ಪ್ರಕಟಂ ಸಿಂಹಸ್ಫುರಲ್ಲಂಘನಮೆಸೆಯೆ ತವಂಗಕ್ಕೆ ಧೀಂಕಿಟ್ಟು ಕೃಷ್ಣ
ಮಕುಟಾಗ್ರಾಸ್ಫಾಲನಂಗೆಯ್ದಲೆಲೆ ರವಿಯನಾರಾಹುವೀಂಟಿತ್ತೆನಲ್ ಕಾ

ತುಕಮಾಯ್ತೆಂದಭ್ರದೊಳ್ ಬೊಬ್ಬಿಱಿಯೆ ದಿವಿಜರಾ ಮಾಡದಿಂ ಕಂಸನಂ ಮ
ಲ್ಲಕಳಕ್ಕೆತ್ತಿಕ್ಕಿ ತಾಂ ಮೇಲೆಱಗಿದ ನೆಱಗಲ್ ಸ್ವರ್ಗದಿಂ ಪುಷ್ಪವರ್ಷಂ ೧೧೩.

ಜಗದಾಧಾರಕದದಟಿಂ
ಧಿಗಿಲೆನೆ ಮೇಲೇಱಿ ತುೞಿದು ರಾಕ್ಷಸನಸುವಂ
ತೆಗೆದು ತೆಗೆದುೞಿದು ಬೞಿಯಂ
ತೆಗೆದಂ ಶ್ರೀ ಕೃಷ್ಣನವನ ಮೇಗಣ ಮುಳಿಸಂ ೧೧೪.

ಆಗ ದೇವತೆಗಳು ಶ್ರೀ ಕೃಷ್ಣನನ್ನು ಸ್ತುತಿಸುತ್ತಾರೆ.

ಗಡಿಗೆಟ್ಟಬ್ರಹ್ಮಾಂಡ ಕೋಟಿಯ
ನೆಡೆಯುಡುಗದೆ ನುಂಗಿಯುಗುೞ್ವ ನಿನಗೀ ಪಗೆಯಂ
ಮಡಿಪುವುದು ಪಿರಿದೆ ಕೇಶವ
ಕಡಲಂ ಪೀರ್ವಗಮರಿದೆ ಕುಡಿತೆಯ ಸಲಿಲಂ ೧೧೫.

ಕಮಲೋದ್ಭವ ವಾಗ್ವಿಲಸ
ತ್ರ್ಯಮಮಂ ಮೀಱಿದುದು ವೇದ ವೇದಾಂಗರಹ
ಸ್ಯಮನದಟಲೆದುದೆನಲ್ ಕಂ
ಸಮಥನ ಬಣ್ಣಿಸುವರಳವೆನಿನ್ನಮಹತ್ವಂ ೧೧೬.

ಶ್ರೀಕೃಷ್ಣನು ವಸುದೇವ-ದೇವಕಿಯರ ಪಾದಗಳಿಗೆ ನಮಸ್ಕರಿಸುತ್ತಾನೆ. ಅವರಿಗಾದ ಸಂತೋಷಕ್ಕೆ ಪಾರವಿಲ್ಲದೆ:

ಉದಯಿಸಿದಿವ್ಯಾಕೃತಿಯಿಂ
ಮೊದಲೊಳ್ ನೀನೆಮಗೆ ನುಡಿದ ತೆಱದಿಂದಡಿಗಿ
ಕ್ಕಿದೆ ಕಂಸನನೆಮ್ಮಂ ನೆಗ
ಪಿದೆ ಚಿಂತಾವಾರ್ಧಿಯೊಳಗೆ ಮುಳುಗಿರ್ದವರಂ ೧೧೭.

ಪುಟ್ಟುವುದು ಜಗಂನಿನ್ನಿಂ
ಪುಟ್ಟುವೆ ನೀನಾವನಿಂ ಸ್ವಯಂಪ್ರಭು ಪಿರಿದುಂ
ಪುಟ್ಟುವೊಡಂಶಾಂಶದೆ ನೀಂ
ಪುಟ್ಟಿ ಜಗದ್ರಕ್ಷಣಕ್ಷಯಕ್ಷಮನಪ್ಪೈ ೧೧೮.

ನಿಜಗರ್ಭದೇಶದೊ
ಳಜಾಂಡಶತಮಿರ್ಪ ವಿಷ್ಣು ನೀನಸ್ಮದ್ಗ

ಭರ್ಜನೆಂತಾದೆಯಿದಂಬ್ರಾಂ
ತಿಜಾಲಮಮಂ ಬೀಸಿದೈ ಧರಿತ್ರಿಗಮೆಮಗಂ ೧೧೯.

ಭೂ ಭಾರವನ್ನಿಳಿಸುವುದಕ್ಕಾಗಿ ಅಂಶಪುರುಷನಾಗಿ ಹುಟ್ಟಿದ ನಿನ್ನಲ್ಲಿ ನಮಗೆ ಇನ್ನು ಲಕ್ಷ್ಮೀಪತಿ ವಿಷ್ಣು ಎಂಬ ಭಕ್ತಿ ಹುಟ್ಟುತ್ತದೆ. ಮಗನೆಂಬ ಮಮಕಾರ ಹುಟ್ಟುವುದಿಲ್ಲ ಎಂದು ಹೇಳಿದ ಅವರನ್ನು ವೈಷ್ಣವಮಾಯೆಯಿಂದ ಮೋಹಗೊಳಿಸುತ್ತಾನೆ ಮತ್ತು ಪಾದಾರ್ಚನೆ ಮಾಡಿ ಸಂಭಾವನೆ ಮಾಡುತ್ತಾನೆ. ಶ್ರೀ ಕೃಷ್ಣನು ಉಗ್ರಸೇನನನ್ನು ಸೆರೆಯಿಂದ ಬಿಡಿಸಿ ರಾಜ್ಯ ಭಾರವನ್ನೊಪ್ಪಿಸಿದ.

೯. ಸಾಂದೀಪನಿಯೊಳ್ ಶಿಷ್ಯತ್ವಂ

ಶ್ರೀ ಕೃಷ್ಣನು ತನಗೆ ಸಕಲ ವಿದ್ಯೆಗಳೂ ತಿಳಿದಿದ್ದರೂ ಗುರು ಶಿಷ್ಯ ಕ್ರಮವನ್ನು ಮನುಷ್ಯರಿಗೆ ತಿಳಿಸಿಕೊಡಬೇಕೆಂಬ ಇಚ್ಛೆಯಿಂದ ಬಲರಾಮನೊಡನೆ ಕಾಶೀಕ್ಷೇತ್ರಕ್ಕೆ ಹೋಗಿ ಸಾಂದೀಪನಿಯಲ್ಲಿ ಶಿಷ್ಯತ್ವವನ್ನು ಪಡೆದನು.

ಸಾಂದೀಪನಿಯ ಸುವಿದ್ಯೆ ಮು
ಕುಂದನ ಸಂಗತಿಯೊಳತಿವಿಕಾಸಮನೊಳಕೊಂ
ಡಂದೆಸೆದುದು ಪೂಗೊಳದರ
ವಿಂದಿನಿ ದಿನಕರನ ಸಂಗದಿಂ ವಿಕಸಿಪವೋಲ್ ೧೨೦.

ಗುರುವಿನ ವಿದ್ಯೆ ನಿತಾಂತಂ
ಪುರುಷೋತ್ತಮನಂತರಂಗದೊಳ್ ಕೋಟಿ ವಿಧಂ
ಸ್ಫುರಯಿಸಿದುದಭ್ರ ಶಶಿಕಳೆ
ತರಂಗಿತಾರ್ಣವದೊಳೆಸೆವ ವೋಲ್ ಬಹುವಿಧದಿಂ ೧೨೧.

ಜಳ ಜಿನಿ ದಿನಕರನಿಂದು
ತ್ಪಳಿನಿ ಸುಧಾಕರನಿನಾಮ್ರವಲ್ಲರಿ ಮಧುವಿಂ
ಬೆಳಪಂತೆ ಕೃಷ್ಣನಿಂದಂ
ಬೆಳಗಿದುವೆನಿತೊಳವು ರಾಜವಿದ್ಯೆಗಳನಿತುಂ ೧೨೨.

ಚಂದ್ರ ಸೂರ್ಯರೆ ಮನುಷ್ಯ ಕುಮಾರರಾಗಿ ವಿದ್ಯೆ ಕಲಿಯಲು ಬಂದರೆ ಎಂದು ಸಾಂದೀಪನಿ ಆಶ್ಚರ್ಯಗೊಂಡ. ವಿದ್ಯಾಭ್ಯಾಸ ಮುಗಿದ ಮೇಲೆ ಶ್ರೀಕೃಷ್ಣನು ಗುರುದಕ್ಷಿಣೆ ಕೇಳಬೇಕೆಂದು ಗುರುಗಳನ್ನು ಪ್ರಾರ್ಥಿಸಿದನು. ಗುರು ಒಂದು ಅಸಾಧ್ಯವಾದ ಗುರುದಕ್ಷಿಣೆ ಬೇಡಲಪೇಕ್ಷಿಸಿ

ತೀರಿ ಹೋದ ತನ್ನ ಮಗನನ್ನು ತಂದುಕೊಡು ಎಂದು ಬೇಡಿದ. ಕೃಷ್ಣನು ಪಂಚಜನನ್ನು ಕೊಂದು ಗುರುಪುತ್ರನನ್ನು ತಂದೊಪ್ಪಿಸಿದ.

ಇತ್ತ ಕಂಸಪತ್ನಿಯರಾದ ತನ್ನ ಪುತ್ರಿಯರ ವೈಧವ್ಯ ದುಃಖವನ್ನು ಕಂಡು ಜರಾಸಂಧ ಕ್ರೋಧೋದ್ದೀಪಿತನಾದ ಅವನ ಆಟೋಪ ಹೀಗಿತ್ತು :

ತಿಱಿಕಲ್ಲಾಡುವೆನೊ ಕುಲಾದ್ರಿಚಯಮಂ ವಾರಾಸಿಯಂ ತಾಯ್ಮಱಿ
ಲ್ದೆಱೆವಂತೀಂಟುವೆನೋ ಕಳಲ್ಚುವೆನೊ ಚಂದ್ರಾದಿತ್ಯರಂ ಶಕ್ರನಂ
ಸೆಱೆಗೆಯ್ದಾಳ್ವೆನೊ ಕೀಳ್ವೆನೋ ದಿಗಿಭದಂತವ್ರಾತಮಂ ಮೇರು ವಂ
ಪೆಱತೇನೂದಿಯೆ ಬೆಂಡು ವಾಱಿಸುವೆನೋಬ್ರಹ್ಮಾಂಡಮಂಪೋಳ್ವೆನೋ೧೨೩.

ಧುರದೊಳ್ ಬಂದಿದಿರೊಡ್ಡೆ ಕಂಸ ಹರನೊಡ್ಡಂ ತುತ್ತುವೆಂತುತ್ತುವೆಂ
ಮುರವಿಧ್ವಂಸಕನಂಜಿ ಮೆಯ್ಸಡೆಯೆ ಬೆನ್ನಂಪತ್ತುವೆಂ ಪತ್ತುವೆಂ
ಹರಿಮೇಣ್ ಪೊಕ್ಕಿರೆ ಕೋಂಟೆಯಂ ಮಧುರೆಯಂ ಪೋ ಮುತ್ತುವೆಂ ಮುತ್ತುವೆಂ
ಪರಭೂಚಕ್ರಮನೆನ್ನ ತೇಜದುರಿಯಿಂದಂ ಸುತ್ತುವೆಂ ಸುತ್ತುವೆಂ. ೧೨೪.

ಹಾಗೆ ಆಟೋಪದ ಮಾತುಗಳನ್ನಾಡುತ್ತ ಭುವಕ್ಷೋಭಕರವಾದ ರೀತಿಯಲ್ಲಿ ಅಗಾಧ ಸೈನ್ಯದೊಂದಿಗೆ ಮಥುರಾಪುರದತ್ತ ಬಂದ. ಯುದ್ಧ ಶುರುವಾದದ್ದೇ ಜಗದ್ವಿನಾಶಕ್ಕೆ ಮೊದಲಿಟ್ಟಿತು ಎಂದು ಎಲ್ಲರೂ ಆತಂಕಕ್ಕೊಳಗಾದರು. ವಾದ್ಯಗಳ ಮತ್ತು ವೀರರ ಆರ್ಭಟದಿಂದ ಉಂಟಾದ ಶಬ್ದ ಎಷ್ಟು ಜೋರಾಗಿತ್ತೆಂದರೆ:

ಶಬ್ದಾದ್ವೈತಂಜಗಮೆನ
ಲಬ್ದರವೋದಾರಮಾದವಾದಿತ್ರ ಮಹಾ
ಶಬ್ದದೆ ಭೂಮಿವ್ಯೋಮಕ
ಕುಬ್ದಳನವೊಡರ್ಚೆತಾಗಿದತ್ತುಭಯ ಬಲಂ ೧೨೫.

ಬಲರಾಮನಿಗೆ ಯುದ್ಧವು ಕಷ್ಟವಾದಾಗ ಶ್ರೀಕೃಷ್ಣನು ತನ್ನ ದಿವ್ಯಾಯುಧಗಳನ್ನು ಸ್ಮರಿಸಿ ಯುದ್ಧಕ್ಕಿಳಿದನು.

ಕೃಷ್ಣನು ಜರಾಸಂಧನೊಂದಿಗೆ ಯುದ್ಧ ಮಾಡಿದ ರೀತಿ.

ಪೆಣದ ಬಣಂಬೆ ಕೋಟಿಮಿದುಳ ಕೋಟಿಸರೆಲ್ವಿನ ಪರ್ವತಂಕರು
ಳ್ವಿಣಿಲ ಪೊದಱ್ಕೆ ರುಂಡದಡಕಿಲ್ ನರದುರ್ಬು ಕಪಾಲದೋಳಿ ಬಾ
ಳ್ವೆಣದೆಡೆ ಖಂಡದಿಂಡೆ ಬಿಸುನೆತ್ತರ ಪೆರ್ಬೊನಲರ್ಬಿಸಲ್ಕೆ ಮಾ
ರ್ಗಣ ಗಣಾಘಾತದಿಂ ತವಿಸಿದಂ ದಿತಿಜಾರಿ ವಿರೋಧಿ ಸೈನ್ಯಮಂ ೧೨೬.

ಕೃಷ್ಣನ ಕೈ ಮೇಲಾದದ್ದನ್ನು ಕಂಡು ಜರಾಸಂಧನು, ತಮ್ಮನ್ನು ಮೊದಲಿಸಲು ಶಲ್ಯ, ಕರ್ಣ, ದುರ್ಯೋಧನರು ಕೃಷ್ಣನ ಮೇಲೆ ಏರಿ ಬಂದರು. ಕೃಷ್ಣನು ಅವರೆಲ್ಲರನ್ನೂ ಹಿಮ್ಮೆಟ್ಟಿಸಿದ. ಕೃಷ್ಣನೊಂದಿಗೆ ಹೋರಾಡಿ ಕಂಗೆಟ್ಟ ದುರ್ಯೋಧನನ ಸ್ಥಿತಿಯಂತೂ :

ದಶಕಂಠವೈರಿಯೊಳ್ ಪೊಣ
ದುರ್ಶೀರ್ಣತನುವಾಗಿ ಸೆಡೆದು ಧೃತರಾಷ್ಟ್ರ ಸುತಂ
ಪ್ರಶಮಿತ ಪರಾಕ್ರಮಮುಂ ಗಂ
ಡಶೈಲದೊಳ್ ಪೊಣರ್ದರಣ್ಯ ಗಜದಂತಾದಂ ೧೨೭.

ಆಮೇಲೆ ಶಿಶುಪಾಲನು ಏರಿ ಬರಲು ಅವನ ಮೇಲೂ ಕೃಷ್ಣನು ಜಯವನ್ನು ಪಡೆದನು. ಕೊನೆಗೆ ಜರಾಸಂಧನೇ ಶಿಶುಪಾಲನನ್ನು ತಡೆದು, ಇಂದು ನೇಸರು ಮುಳುಗಿದ. ನಾಳೆ ನಮ್ಮ ಪರಾಕ್ರಮ ತೋರೋಣ ಎಂದು ಕರೆದ. ಶ್ರೀ ಕೃಷ್ಣನ ಬಾಣಗಳಿಗೆ ಹೆದರಿ ಓಡುತ್ತಿದ್ದ ಜರಾಸಂಧನ ಸೈನ್ಯವನ್ನು ಕಂಡು ಕೃಷ್ಣ ಮುಗುಳ್ನಗೆ ಬೀರಿದ.

೧೦. ಕೃಷ್ಣಂಗೆಸೆದುದಸದಳಂ ರಾಜರಾಜಾಭಿಷೇಕಂ

ಜರಾಸಂಧನ ಮೇಲೆ ಜಯ ಸಂಪಾದಿಸಿ ಮಧುರಾಪುರದಲ್ಲಿ ಶ್ರೀ ಕೃಷ್ಣನು ಸುಖದಿಂದಿದ್ದನು. ಆದರೆ ಹಿಂದಿನ ಸೋಲಿನ ಮತ್ಸರದಿಂದ ಜರಾಸಂಧನು ಮೂವತ್ತು ಅಕ್ಷೋಹಿಣೀ ಸೈನ್ಯದೊಂದಿಗೆ ಯುದ್ಧಕ್ಕೆ ಬಂದನು. ಅಷ್ಟು ಸಾಲದು ಎಂಬಂತೆ ಹದಿನೆಂಟು ಸಲ ದಂಡೆತ್ತಿ ಬಂದನು. ಜರಾಸಂಧನ ಈ ಆಕ್ರಮಣದಿಂದ ಕಂಗೆಟ್ಟಿದ್ದ ಯದುಭೂಮಿಯನ್ನು ರಕ್ಷಿಸಲು, ಜರಾಸಂಧನನ್ನು ಬೇರೊಂದು ಪ್ರದೇಶದಲ್ಲಿ ಎದುರಿಸಲು ಹೋಗುತ್ತಿರುವಾಗ ಪರಶುರಾಮನ ಸಂದರ್ಶನವಾಗುತ್ತದೆ.

ರುದ್ರಭಟ್ಟನ ವಿರೋಧಾಭಾಸಾಲಂಕಾರ ಪ್ರಿಯತೆಗೆ ಈ ಗದ್ಯ ಒಳ್ಳೆಯ ಉದಾಹರಣೆ :

ವ॥ ಅದಂ ನೋಡುತ್ತು ಮೆಯ್ವೆವಂದಿರವಿಂದಲೋಚನಂ ನಿಜಾವತಾರ ರೂಪನಂ, ನಿರುಪಮ ತಪಸ್ತೇಜೋಭಿಯುಕ್ತ ಜಟಾಕಲಾಪನಂ, ಪುಣ್ಯ ಪ್ರಭಾವಾಭಿರಾಮನಂ ಜಮದಗ್ನಿ ರಾಮನಂ ಕಂಡು, ಬಲಭದ್ರರಾಮನ ಮೊಗಮಂ ನೋಡಿ ; ಈ ಮಹಾಪುರುಷಂ ಕೃಭೃತ್ಪಕ್ಷವಿಚ್ಛೇದನನಾಗಿಯುಂ ವಜ್ರಧರ ನಲ್ಲು, ಸಪ್ತಾರ್ಚಿಯಾಗಿಯುಂ ಹುತವಹನಲ್ಲು, ಸಮವರ್ತಿಯಾಗಿ ಯುಂ ದಕ್ಷಿಣದಿ ಕ್ಪಾಲಕನಲ್ಲು, ಪೂರ್ವದೇವನಾಗಿಯುಂ ನೈಋತ ನಲ್ಲು, ವನ ನಿವಾಸಿಯಾಗಿಯುಂ

ವರುಣನಲ್ತು, ಪವಮಾನನಾಗಿಯುಂ, ಕುರಂಗ ವಾಹನನಲ್ತು, ಮನುಷ್ಯ ಧರ್ಮನಾಗಿಯುಂ ಧನಾಧ್ಯಕ್ಷನಲ್ತು, ಕಾಮಧ್ವಂಸಿಯಾಗಿಯುಂ ತ್ರಿಲೋಚನನಲ್ತು, ಚತುರಾಸ್ಯನಾಗಿಯುಂ ಹಿರಣ್ಯಗರ್ಭನಲ್ತು, ತೀವ್ರ ತೇಜನಾಗಿಯುಂ ಮಾರ್ತಂಡನಲ್ತು, ದ್ವಿಜರಾಜನಾಗಿಯುಂ ನಕ್ಷತ್ರಪತಿಯಲ್ತು, ಕ್ರೌಂಚಾರಾತಿಯಾಗಿಯುಂ ಷಣ್ಮುಖನಲ್ತು, ಪರಶುಧರನಾಗಿಯುಂ ದ್ವಿರದಾಸ್ಯನಲ್ತು, ಎಂದು ವಕ್ರೋಕ್ತಿಯಿಂತೋಱುತ್ತು ಮತ್ಯಾಸನ್ನನಾದ ಸಮಯದೊಳ್, ೧೨೮.

ಕೃಷ್ಣನ ರಾಜ್ಯಾಭಿಷೇಕ

ಕೆಲ ದಿನಗಳ ನಂತರ ಕುಂಡಿನಪುರದ ಭೀಷ್ಮಕನ ಮಗಳು ರುಕ್ಮಿಣಿಗೆ ಸ್ವಯಂವರವೆಂದು ತಿಳಿಯಿತು. ಆದರೆ ಅವನು ಕೃಷ್ಣನನ್ನು ನಿವಾರಿಸಲೆಂದೇ ಕೇವಲ ಸಿಂಹಾಸನಾಧಿಪತಿಗಳು ಮಾತ್ರ ಸ್ವಯಂವರಕ್ಕೆ ಬರಲೆಂದು ಸಾರಿಸಿದ. ತನ್ನ ಅಂಶದಿಂದಲೇ ಲಕ್ಷ್ಮಿಯೂ ಭೀಷ್ಮಕನ ಮಗಳಾಗಿ ಜನಿಸಿದ್ದಾಳೆಂದು ಅರಿತ ಶ್ರೀಕೃಷ್ಣ ತಾನೇ ಅವಳನ್ನು ವರಿಸಬೇಕೆಂದು ನಿರ್ಧರಿಸಿದನು. ಆ ದರ್ಪಿಷ್ಟ ಸಭೆಯನ್ನು ಗರುಡನ ರೆಕ್ಕೆಯ ಗಾಳಿಯಿಂದ ಅಲ್ಲೋಲಕಲ್ಲೋಲವಾಗುವಂತೆ ಮಾಡುವೆನೆಂದು ಅವನನ್ನು ಆಮಂತ್ರಿಸಿದನು. ಕೃಷ್ಣನ ಮನಸ್ಸನ್ನು ಅರಿತ ಗರುಡ

ವಿನಮಿತ ಗಾತ್ರಂ ಕೃಷ್ಣನ
ಮನಮಱಿದಾ ದ್ರೋಹಿ ಸಭೆಗೆ ನಿಜಪಕ್ಷಸಮೀ
ರನನಿನಿಸೊದವಿಸೆ ಸಿಂಹಾ
ಸನದಿಂ ತಲೆಯೂಱಿ ಕೆಡೆದರತಿಬಳ ಭೂಪರ್ ೧೨೯.

ಮಕುಟಂಗಳನವನಿಯೊಳೂ
ಱಿಕೆಡೆದ ತೆಱನಚ್ಯುತಾಂಘ್ರಿಗಳ್ಗವನತಿಯಂ
ಪ್ರಕಟಿಪ ತೆಱನಾದನಿತಱೊ
ಳಕುಟಿಲ ಮನರಾದರ ಹಿತರೊಂದೆ ಮುಹೂರ್ತಂ ೧೩೦.

ಆಗ ಜರಾಸಂಧನು ಅಲ್ಲಿಗೆ ಬಂದವನು ಕೃಷ್ಣನೆಂಬುದನ್ನು ಸ್ಪಷ್ಟಪಡಿಸುತ್ತ, ಕೃಷ್ಣನ ಹಿಂದಿನ ಅವತಾರಗಳನ್ನು ವರ್ಣಿಸುತ್ತ ಪರೋಕ್ಷವಾಗಿ ಅವನ ಮಹಿಮೆಯನ್ನು ಹಾಡಿ ಹೊಗಳುತ್ತಾನೆ.

ಕುಳಗಿರಿಯಂತೆರಳ್ಚಲರಿದಲ್ತು ತೆರಳ್ಚಲಶಕ್ಯಮೆಮ್ಮನೆಂ
ಬಳವಿನ ನಮ್ಮುಮಂ ಕೆಡಪಿದತ್ತಿದು ತಾರ್ಕ್ಷ್ಯನ ಪಕ್ಷಸಂಭವಾ

ನಿಳನಜಿದೆಂ ಖಗೇಂದ್ರ ನೊಡವಂದಪನಾದೊಡೆ ದೇವಕೀಸುತಂ
ಜಳಶಯನಾವತಾರ ತನುವೆಂಬುದು ನಿಶ್ಚಯಮಾಯ್ತುನಮ್ಮೊಳಂ ೧೩೧.

ಅವನ ಮಾತಿಗೆ ಸಾಲ್ವ, ದಂತವಕ್ರರೂ ದನಿಗೂಡಿಸುತ್ತಾರೆ.

ದಂತವಕ್ರನು ಶ್ರೀ ಕೃಷ್ಣನ ಮಹಿಮೆ ವರ್ಣಿಸಿದ್ದು

ನೆನೆದಾತಂ ನೆನೆಯಂ ಭವಾದಿ ಸುಖಮಂ ತನ್ನಂದಮಂ ಕಂಡಮ
ರ್ತ್ಯನಣಂ ಕಾಣನವಿದ್ಯೆಯಂ ನಿಜಪಯಸ್ಸಂಸೇವೆಯಂ ಮಾಡಿದಂ
ಜನನೀಸ್ತನ್ಯದ ಸೇವೆಯೊಳ್ ತೊಡರನೆಂಬಾ ಜಾಹ್ನವೀ ಸಿಂಧು ವೀ
ತನ ಕಾಲ್ಗರ್ಚಿನ ನೀರೆನಲ್ ಹರಿಯ ಪೆಂಪಂ ನೀನದೇಂ ಬಣ್ಣಿಪೈ ೧೩೨.

ಹೀಗೆ ಹರಿಯ ಮಹಿಮೆ ಸಾಮರ್ಥ್ಯ ಅರಿತಿದ್ದೂ ವೈರವನ್ನು ವಹಿಸಿದ ಬಳಿಕ ಅಂಜಬಾರದು ಎಂದು ಚಲವನ್ನೇ ಹಿಡಿದರು. ಅಷ್ಟರಲ್ಲಿ ಕೃಷ್ಣನು ಕುಂಡಿನೀಪುರಕ್ಕೆ ಸಮೀಪದಲ್ಲಿರುವ ವಿದರ್ಭ ರಾಜಧಾನಿಗೆ ಬರಲು, ವಿದರ್ಭರಾಜನು "ದೇವ ನೀವು ಈ ಸ್ವಯಂವರಕ್ಕೆ ಹೋದಲ್ಲಿ ರಾಜ್ಯಾಭಿಷಿಕ್ತನಲ್ಲವೆಂದು ನಿಮಗೆ ಸಿಂಹಾಸನಸ್ಥರ ಸಮೀಪದಲ್ಲಿ ಪೀಠವನ್ನು ಹಾಕುವುದಿಲ್ಲ. ಆದ್ದರಿಂದ ನಾನು ರಾಜ್ಯ ಕೊಟ್ಟು ಅಭಿಷೇಕ ಮಾಡುತ್ತೇನೆ ಎಂದು ಹೇಳಿದನು. ಕೂಡಲೇ ಕೃಷ್ಣನ ಮನೋಭಿಸಂಧಿಯಿಂದ ಇಂದ್ರನು ಆ ವಿವರವನ್ನು ತಿಳಿದು ಜಗತ್ಪ್ರಭುವಾದ ವಿಷ್ಣುವಿಗೆ ತಾನೇ ಮುಂದೆ ನಿಂತು ಎಲ್ಲ ರಾಜರ ಸಮ್ಮುಖದಲ್ಲಿ ಅಭಿಷೇಕ ಮಾಡುತ್ತೇನೆ ಎಂದನು. ಆ ಸಮಯಕ್ಕೆ ಇಂದ್ರನ ಅಪ್ಪಣೆಯಂತೆ ಮಹಾಸಿಂಹಾಸನ, ಮಹಾ ಮಂಟಪ, ಸ್ವರ್ಣಕಲಶ, ನವನಿಧಿಗಳು, ಓಷಧಿಗಳು, ರತ್ನ ಕಲಶಗಳು ಬಂದುವು.

ವ॥ ಅನ್ನೆಗಂ ಶುಭ ಮುಹೂರ್ತದೊಳ್ ಸಮಸ್ತ ಮಂಗಳಾಶ್ರಯಂ ಪುರುಷೋತ್ತಮನನೇಕ ರಾಜಲೋಕ ರತ್ನ ಕೋಟೀರಂಗಳೆ ಪಾದಪೀಠಂಗಳಾಗೆ ಮಹೋತ್ತುಂಗ ಸಿಂಹಾಸನದ ಮೇಲೆ ಕುಳ್ಳಿರ್ಪುದುಂ ೧೩೩.

ಪ್ರಭೆಯಿಂ ನಯನ ಭ್ರಮೆಯಾ
ಸಭೆಗಾಗಿರೆ ಬಂದು ತಾನೆ ಕೃಷ್ಣಂಗಮರ
ಪ್ರಭು ಪೂರ್ಣಕಳಶಮಂ ಪಿಡಿ
ದಭಿಷೇಕಂಗೆಯ್ದು ಪರಸಿ ಪೋದಂ ಮುದದಿಂ ೧೩೪.

ಪೊಗಟುತ್ತಿರ್ಪೊಂದು ವಂದಿವ್ರಜದುಲಿ ಪಟಹಧ್ವಾನಂ ಮೀಱಿಬೇಳ್ಪ
ರ್ಧಿಗೆ ಸೂಸುತಿರ್ಪ ಚೆಂಬೊಂಗಳ ರುಚಿಪಟ ವಾಸಸ್ಫುರ ತ್ಪಾಂಸುವಂ ಕೈ
ಮಿಗೆ ನಾನಾ ರಾಜ ಚಿಹ್ನಾವಳಿ ದೊರೆಯೆನೆ ಸಾಮ್ರಾಜ್ಯಲಕ್ಷ್ಮೀ ವಿಭೂಷಾ
ಳಿಗಳಂ ಪೋಲ್ತೊಪ್ಪೆ ಕೃಷ್ಣಂಗೆಸೆದುದಸದಳಂ ರಾಜರಾಜಾಭಿಷೇಕಂ ೧೩೫.

೧೧. ಅದೇಂ ಪಿರಿದೊ ಯುದ್ಧಮಧೋಕ್ಷಜದಂತವಕ್ರಣ

ತನ್ನನ್ನು ನಿವಾರಿಸುವ ಉದ್ದೇಶದಿಂದ ಸ್ವಯಂವರವನ್ನು ಏರ್ಪಡಿಸಿದ್ದ ಭೀಷ್ಮಕನನ್ನು ಲೇವಡಿ ಮಾಡುತ್ತಾನೆ.

ಭೀಷ್ಮಕನು ತನ್ನ ಮಗನ ಪರಾಕ್ರಮ ವರ್ಣಿಸಿದಾಗ ಕೃಷ್ಣ ತನ್ನ ಬಗ್ಗೆ

ಜಗಮಂ ರಕ್ಷಿಸಲೆಂದು ಕೃಷ್ಣವೆಸರಿಂ ಪುಟ್ಟಿರ್ದ ನಾರಾಯಣಂ
ಬಗೆವಂದಾಂ ಭವದೀಯನಂದನೆ ಮದರ್ಥಂ ರುಕ್ಮಿಣೀ ನಾಮದಿಂ
ದೊಗೆದಾಲಕ್ಷ್ಮಿಯೆನಲ್ಕೆಯಾನೆ ಒಡೆಯಂ ನಾರಾಯಣಂಗುಂಟುಂಪೊ
ರ್ದುಗೆ ನೀವಾಕೆಯನೀ ಸ್ವಯಂವರದೊಳಗನ್ಯರ್ಗೀಯಲೇಂ ಬರ್ಕುಮೇ ೧೩೬.

ಆಗ ಬೇರೆಲ್ಲ ರಾಜರೂ ಜಗನ್ನಾಥ ಕೃಷ್ಣನೇ ಅಧಿಪತಿಯೆಂದು ಧನಕನಕ ವಸ್ತುವಾಹನಾದಿ ಕಾಣಿಕೆಗಳನ್ನು ಒಪ್ಪಿಸುತ್ತಾರೆ. ಕೃಷ್ಣನು ಸ್ವಯಂವರ ಸಭೆಯಲ್ಲಿ ನೆರೆದವರನ್ನೆಲ್ಲಾ ಅಪಮಾನಿಸಿದ್ದಕ್ಕೆ ಪ್ರತೀಕಾರ ಮಾಡಲು ಕಾಲಯವನೇ ತಕ್ಕವನೆಂದು ಜರಾಸಂಧ, ಶಿಶುಪಾಲ ದಂತವಕ್ರಾದಿಗಳು ತೀರ್ಮಾನಿಸುತ್ತಾರೆ.

ಕಾಲಯವನನ ಪರಾಕ್ರಮ

ಕಡಲಂ ಪೀರಲುಮುರ್ವಿಯಂ ತಿಱಿಪಲುಂ ಚಂದ್ರಾರ್ಕರಂ ಮೀಂಟಲುಂ
ಸಿಡಿಲಂ ನುಂಗಲು ಮದ್ರಿಬೇಶನುರಿಗಣ್ಣಂ ಮುಚ್ಚಲುಂ ಮೇರುವಂ
ಪೊಡೆಸೆಂಡಾಡಲು ಮಾರ್ಪ ಕಾಲಯವನಂಗೇನಾರ್ಪನೇ ಯುದ್ಧದೊಳ್
ತೊಡರಲ್ ಚಕ್ರಿದಿಶಾಗಜಕ್ಕೆ ಕಳಭಂ ಕೈಯಿಕ್ಕಲೇನಾರ್ಕುಮೇ ೧೩೭.

ಕೃಷ್ಣನು ಲೋಕಕ್ಕೆ ತನ್ನ ಮಾನುಷ ಚಾರಿತ್ರವನ್ನು ಪ್ರಕಟಿಸಬೇಕೆಂಬ ಉದ್ದೇಶದಿಂದ, ಮಧುರಾಪುರವನ್ನು ಬಿಟ್ಟು ಯಾದವರಿಗೆ ನೆಲೆಸಲು ಬೇರೊಂದು ಸುರಕ್ಷಿತವಾದ ಎಡೆಗೆ ಸೈನ್ಯ, ಪರಿವಾರವನ್ನೆಲ್ಲ ಸಾಗಿಸು ಎಂದು ಗರುಡನಿಗೆ ಹೇಳಿದ. ಅದರಂತೆ ಗರುಡನು ಸುತ್ತಲೂ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಕುಶ ಸ್ಥಳವೊಂದಿರುವುದಾಗಿ ಸೂಚಿಸಲು ಇಡೀ ಮಧುರಾಪುರವೇ ಅಲ್ಲಿಗೆ ಹೊರಟಿತು. ಆಗ ಕಾಲಯವನ ಕೃಷ್ಣನೊಡನೆ ಸೆಣಸಲು ಬಂದು ತಡೆದ. ಕೃಷ್ಣನ ವಿಷಯಕ್ಕೆ ಅವನು ಮನದಲ್ಲೇ ಮೆಚ್ಚುತ್ತಾನೆ.

ಅವಿಧೇಯಂ ಕ್ಷತ್ರಲೋಕಂ ನೆರೆದು ಪೊಣರ್ದೊಡಾತ್ರಿಂಶದಕ್ಷೌಹಿಣೀ ಸೈ
ನ್ಯವನೋರೋರ್ವೊಂದೆಮೆಯ್ಯಿಂ ತವಿಸಿ ತವದಧೋಃ ಕಂಡು ವಿಂದೀತನಿಂದೆ
ಮ್ಮವನಿಂತೇಕಾಂಗದಿಂ ಗೆಲಲೊಡರಿಪನೀ ತೇಜದಿಂದರ್ಪದಿಂ ಸೌ
ಷ್ಠವದಿಂ ಶಸ್ತ್ರಾಸ್ತ್ರ ವಿಜ್ಞಾನದ ಯದುಕುಲನೊಳ್ ಗೆಲ್ಲವೇಕಾಗದಿರ್ಕುಂ ೧೩೮.

ಶಿವನ ಶಾಪವಿದ್ದುದರಿಂದ ಅವನನ್ನು ಮುಚುಕುಂದನೆಂಬ ಋಷಿಯಿಂದ ಕೊಲ್ಲಿಸಿದನು. ಅನಂತರ ದಂತವಕ್ರನು ಗದೆ ಹಿಡಿದು ಯುದ್ಧಕ್ಕೆ ಬಂದನು.

ಅಸುರನ ಗದೆ ಭೂತ ಪಿಶಾ
ಚಸಮಿತಿಗೆಱೆಯಿಸುವ ನೆತ್ತಱಬಟ್ಟಿಗೆ ತೆ
ತ್ತಿಸಿದೆಲ್ವಿನ ಸೊದೆವನೆಯಿ
ಕ್ಕಿಸುವಡಗಿನ ವಾರಿ ಸತ್ತ್ರವಚ್ಚರಿ ರಣದೊಳ್ ೧೩೯.

ರಯದೊಳಗಿಂದು ಬಿಂಬವನುದಿರ್ಚುವ ಸಾಗರ ಮಂತುಳುಂಕುವ
ದ್ರಿಯನಗೆಯೆತ್ತುವುರ್ವಿಯನಡಂಗಿಪ ಭಂಗಿಯೊಳಿಲ್ಲ ಭೇದವಾ
ಕ್ಷಯ ಪವನಂಗಮಾತನ ಗದಾಪವನಂಗ ಮದೊಂದೆ ರಕ್ತ ಚ
ರ್ಚೆಯ ಪೊಲಸುಂಟೆ ದೈತ್ಯನಗದಾನಿಳನಲ್ಲದೊಡಾಕ್ಷಯಾನಿಳಂ ೧೪೦.

ಅವರು ಯುದ್ಧ ಮಾಡಿದ ರೀತಿ :

ಅಧಮುಂ ಮಧ್ಯಮುಮೂರ್ಧ್ವಮೆಂಬ ಭುವನಂಗಳ್ ಪೊಯ್ದು ಬಾಹಾಗದಾ
ಯುಧ ವಿಕ್ಷೇಪ ವಿಜೃಂಭಣ ಭ್ರಮಣದಿಂ ಪ್ರಕ್ಷೋಭಿಸಲ್‌ಯುದ್ಧಕೇ
ಳಿಧುರೀಣರ್ ದನುಜಾರಿಯುಂ ದನುಜನುಂ ಸೂಱೊಯ್ಯಗ್ಗಳಿಂ ಧೊಟ್ಟುಧಿ
ಟ್ಟು ಧೊಗಲ್ ಧೊಪ್ಪುಭಟಿಲ್ ಭುಗಿಲ್ಗರೆವಿನಂ ಪೊಯ್ದರ್ ಗದಾದಂಡದಿಂ
೧೪೧.

ಸರದಿಯ ಬಾಡಬಂ ನಭದಿರಮ್ಮದಮೀಶನ ಲೋಚನಸ್ಥಾಗಿಸಂ
ಹರಣದೊಳಟ್ಟೆಕೊಲ್ವ ದಹನಂ ನೆಗೆದೀ ಶಿಖಿಯಿಂ ಸಿಡಿಲ್ಪುಮೆ
ಯ್ಗರೆದ ಶಿಖಾಲವಂಗಳೆನೆ ತಮ್ಮ ಗದಾ ಪರಿಘಟ್ಟನಾಗ್ನಿ ಬಾಂ
ಬರವೊಗೆದತ್ತದೇಂ ಪಿರಿದೊ ಯುದ್ಧಮಧೋಕ್ಷಜದಂತವಕ್ರರಾ ೧೪೨.

ಹಾಗೆ ಘೋರ ಯುದ್ಧ ಮಾಡಿದಂತೆ ವಕ್ರನನ್ನು ಕೊಂದ ಸಮಯಕ್ಕೆ ಸರಿಯಾಗಿ ಗರುಡನು ಬಂದು, ಕುಶಸ್ಥಳದಲ್ಲಿ ಕೃಷ್ಣನಿಗೆ ಮತ್ತು ಯಾದವರಿಗಾಗಿ ವಿಶ್ವಕರ್ಮನು ಇವರು ಅಲ್ಲಿಗೆ ಹೋಗುವುದಕ್ಕೆ ಮುಂಚೆಯೇ ದ್ವಾರಾವತಿಯೆಂಬ ಪಟ್ಟಣವನ್ನು ನಿರ್ಮಿಸಿರುವ ವಿಚಾರ ತಿಳಿಸಿ ಅದರ ಸೌಂದರ್ಯಾತಿಶಯವನ್ನು ಅಪೂರ್ವವೆಂಬಂತೆ ವರ್ಣಿಸುತ್ತಾನೆ.

ದ್ವಾರಾವತಿಯ ವರ್ಣನೆ

ನಳಿನೀ ತೀರ ಲತಾಗೃಹಂಗಳ ನೆಟಿಲ್ ನೇರ್ಪಟ್ಟಿರಲ್ ಪಟ್ಟು ಕಾ
ಲ್ಗಳನಿಂಬಿಂ ಪರಿಕಾಲೊಳಿಟ್ಟತಿ ಮುದಂ ಕೈಸಾರೆ ಕೈಸಾರೆಯೊಳ್
ಬಳೆದಿಮ್ಮಾವಿನ ಬಾಳೆಯಿಳೆಗಳ ಪಣ್ಣಿಂ ಪಣ್ಣನೋರ್ರೊರ್ಮೆ ಮೆ
ಲ್ವೆಳನೀರೀಂಟಿ ಪಥಾರ್ತರಿರ್ಪಳಿ ಕೀರ ಧ್ವಾನದುದ್ಯಾನದೊಳ್ ೧೪೩.

ನಿಳಯಕ್ಕೋರೊಂದು ಕೇಳೀವನಮುಮಮೃತ ಕಾಸಾರಮುಂ ವಾಟಮುಂ ತ
ನ್ನಿಳಯಂಗಳ್ ಮಾಡಮುಂ ಮಂಟಪಮುಮುಪರಿಯುಂ
ತನ್ನಿವಾಸಂಗಳೊಳ್ ಗೋ
ಕುಳಮುಂಧಾನ್ಯಂಗಳುಂ ತೀವಿದ ನವನಿಧಿಯುಂ ತದ್ಗೃಹಸ್ಥರ್ ಕಳಾಪೇ
ಶಳರುಂಗಂಭೀರರುಂ ಭೋಗಿಗಳುಮೆನೆ ಪುರಶ್ರೀಕರಂ ರಂಜಿಸಿರ್ಕುಂ ೧೪೪.

ಅಗಣಿತ ಧನಂಗಳಿಂದಂ
ನಗುತಿರ್ಕುಂ ಮೇರುನಗಮನೆನೆ ನೆಗಳ್ದಟಿಕಾ
ನಗರೀಶಂ ಬರ್ಕುಮೆ ತ
ನ್ನಗರದ ಕಡೆಪಟ್ಟ ಪರದರೊರೆಗಂ ದೊರೆಗಂ ೧೪೫.

ಚದುರ ಪೊದಟ್ಕೆ ಸಂಪದದ ಬೊಂಬುಳಿ ಸತ್ಯದ ಬಿತ್ತರಂ ವಿವೇ
ಕದ ನೆರವೀವ ಮೈಮೆ ದಯೆಯುನ್ನತಿ ಧರ್ಮದ ಪೆರ್ಮೆ ಸಜ್ಜನ
ತ್ವದ ವಿಮಲತ್ವ ಮಾರ್ಪಿನ ಪೊಡರ್ಪು ವಿಳಾಸದ ದೇಸೆ ಕೂಡೆ ಭೋ
ಗದ ಕಣಿಯಾಯ್ತು ತಾಂ ತನಗೆ ಪೌರಜನಂ ಸ್ಥಿರ ಸೌಖ್ಯ ಭಾಜನಂ ೧೪೬.

೧೨. ಬಾಲೆ ವನಮಾಲಿಗೆ ಮಾಲೆಯನೊಲ್ದು ಸೂಡಿದಲ್

ಒಂದು ದಿನ ನಾರದನು ಶ್ರೀಕೃಷ್ಣನ ಆಸ್ಥಾನಕ್ಕೆ ಬಂದು ರುಕ್ಮಿಣಿಯನ್ನು ವಿವಾಹವಾಗು ಎಂದು ಹೇಳಿ ಬಗೆ ಬಗೆಯಾಗಿ ಅವಳ ವರ್ಣನೆ ಮಾಡತೊಡಗಿದ.

ರುಕ್ಮಿಣಿಯ ವರ್ಣನೆ

ಕುಂದದರಸ್ಮಿತೆಯ ಮಡಂ
ಕುಂದದ ಚೆಲ್ವಿಂ ಮನೋಜರಾಜ ಕ್ರೀಡಾ
ಕಂದುಕಮೆನೆ ಜನದ ಮನ
ಕ್ಕಂದು ಕರಂ ಮುದಮನೊದವಿಕುಂ ಮೃದುಗತಿಯಿಂ ೧೪೭.

ರಂಭಾವಿಭವದಿನಧಿಕತ
ರಂಭಾವಿಸೆ ಪತಿಮನೋಮದೇಭಾಲಾನ
ಸ್ತಂಭವೆನೆ ನೋಡೆ ಸುಗತಿ
ಸ್ತಂಭವನೊಡರಿಪುವು ಬಟ್ಟದೊಡೆ ರುಕ್ಮಿಣಿಯಾ ೧೪೮.

ಸಮನೆನೆ ಪೊಣರ್ವಕ್ಕಿ ವಿಳಾ
ಸಮನೆನಿಸಂ ತಳೆದ ಘನಕುಚಂ ನಿಬಿಡತೆಯಿಂ
ರಮಣಿಗೆ ಸೊಗಯಿಸುಗುಂ ಹಾ
ರಮಣಿಗೆ ನುಸುಳಲ್ಕೆ ತೆಱಪುಗುಡದನವರತಂ ೧೪೯.

ಪಿಂಗದೆ ಲಾವಣ್ಯದ ಸೊಂ
ಪಿಂಗದೆ ತಾಂ ನಿಳಯ ಮೆನಿಸಿ ಯೌವನ ಲಕ್ಷ್ಮೀ
ಮಂಗಳ ಮಣಿದರ್ಪಣಯು
ಗ್ಮಂಗಳವೆಂದೆನೆ ಕಪೋಲವಂಗನೆಗೆಸೆಗುಂ ॥ ೧೫೦.

ಕೈದುವನಿಟಿಕೆಯ್ದು ದಿಟ
ಕ್ಕೈದು ವನಲರಂಬನತನು ಜಗಮಂ ಗೆಲ್ವಂ
ನೈದಲೆ ನೀರೇಜದ ಚೆ
ನ್ನೈದಲಣಂ ಸಾಲದೆನಿಸುವವಳಕ್ಷಿಗಳಿಂ ೧೫೧.

ರುಕ್ಷಿಣಿಯನ್ನು ತರುವ ಉದ್ದೇಶದಿಂದ ಕೃಷ್ಣನು ಕುಂಡಿನೀಪುರವನ್ನು ತಲುಪಿ ಊರ ಹೊರಗಿನ ಉದ್ಯಾನವನ್ನು ಅವಲೋಕಿಸುತ್ತ ನಿಂತಿದ್ದಾಗ ಅಲ್ಲಿ ಪುಷ್ಪಾಪಚಯ ಮಾಡುತ್ತಿದ್ದ ರುಕ್ಮಿಣಿಯನ್ನು ಕಂಡು ಮೋಹಗೊಂಡನು. ರುಕ್ಮಿಣಿಯೂ ಕಮಲಾಕ್ಷನಲ್ಲಿ ಮನಸ್ಸು ನೆಟ್ಟಳು. ಅದರ ಪರಿ :

ಅಲಂಕಂತುಂಬಿ ತಳಂತಳಿರ್ ತೊಡೆಮಡಲ್ ತೋಳ್ ಶಾಖೆ ಸುಯ್ಗಂಪು ಕಂ
ಪಲರ್ಗಣ್ಣೊಪ್ಪುವಲರ್ ಮುಗುಳ್ನಗೆ ಮುಗುಳ್ ಬಿಂಬಾಧರಂ ಪಣ್ಣೆನಿ
ಪ್ಪಲತಾಂಗೀತನು ಚೂತವಲ್ಲರಿಯೊಳಂದೆಕ್ಕೆಕ್ಕೆಯಿಂ ನಾಟಕಂ
ನಲಿಯುತ್ತಿರ್ದುವು ನೇತ್ರ ಷಟ್ಪದ ಮನಃ ಕೀರಂಗಳಾ ಕೃಷ್ಣನಾ ೧೫೨.

ಮನಸಿಜನಂಬು ನಾಂಟಿ ತನುವಂ ಮನವೆಚ್ಚಱದಂತೆ ವಾರಿಜಾ
ಕ್ಷನೊಳಿರೆ ರುಕ್ಮಿಣೀ ರಮಣಿ ಚಿತ್ರದಲೆಪ್ಪದ ಕಲ್ಲ ಪೆಣ್ಣರೂ

ಪೆನೆಮರವಟ್ಟಳಾವಳನನಂಗ ಶರೆಕ್ಕಡೆ ಮಾಡದಾವಳಂ
ನೆನೆಯಿಸಿ ಕಾಡದಾವಳನದಿರ್ಪದು ಕೃಷ್ಣನ ರೂಪವಿಭ್ರಮಂ ೧೫೩.

ಬಾಲೆಯ ನೇತ್ರದಿಂದಮರ್ದಿನೊಳ್ಪೆರೆ ಮಾಲೆ ಪೊದಟ್ಟು ನೀಳ್ದು ಬಂ
ದೀಲಲಿತಾಂಗನಂ ಬಳಸಿದತ್ತೆನೆ ಕೃಷ್ಣನ ಮೇಲೆ ಬಾಲೆ ಕ
ಣ್ಸೋಲದಿನಂದು ಬಿತ್ತರಿಸಿದಳ್ ನಗೆವೀಱುವ ಮುದ್ದುವೀಱುವಾ
ಲೋಲತೆ ವೀಱುವುಜ್ವಲತೆ ವೀಱುವ ಮುಗ್ಧ ಕಟಾಕ್ಷಮಾಲೆಯಂ ೧೫೪.

ಹಾಗೆ ಕಟಾಕ್ಷ ಬೀರುತ್ತ, ಮನ್ಮಥನ ಜಯಲಕ್ಷ್ಮಿಯೇ ಎಂಬಂತೆ ಒಲವಿಂದ ನಡೆತಂದು :

ಲೋಲಕಟಾಕ್ಷಮಾಲೆ ವನಮಾಲೆಗೆ ಚಂದ್ರಿಕೆ ವೀಱಿಕೈಯ ಪೂ
ಮಾಲೆಗೆ ಭೃಂಗಮಾಲೆ ಮೊರೆದೆಯ್ದೆ ಶಿರೀಷದ ಮಾಲೆಯಂ ಪ್ರಭಾ
ಮಾಲೆಯಿನೇಱಿಸುತ್ತಿರೆ ಭುಜಂ ನಖಮಾಲೆ ಮಯೂಖ ಮಾಲೆಯಂ
ಸಾಲಿಡೆ ಬಾಲೆ ಬಂದು ವನಮಾಲಿಗೆ ಮಾಲೆಯನೊಲ್ದುಸೂಡಿದಳ್ ೧೫೫.

೧೩. ಅಭಿನವ ವೈವಾಹದಿಂ ಕೃಷ್ಣನಿರ್ದಂ

ಶ್ರೀಕೃಷ್ಣನು ಸ್ನೇಹದ ನೆಪದಿಂದ ಸತ್ರಾಜಿತನಲ್ಲಿಗೆ ಹೋಗಿದ್ದನು. ಆಗ ಅವನ ರೂಪ ವೈಭವವನ್ನು ಕಂಡು ಸತ್ಯಭಾಮೆ ಕೃಷ್ಣನಿಗೆ ಮನಸೋತಳು. ಹಾಗೆ ಮನಸೋತದ್ದರ ಪರಿಣಾಮ :

ನವ ಕಾಮೋದ್ರೇಕದಿಂ ಚಿಂತಿಸುವ ಮತಿ, ಮತಿಗ್ಲಾನಿಯಿಂದ ಶ್ರುವಂಸೂ
ಸುವ ಕಣ್ ಕಣ್ಣೀರೆ ಬಾನಲ್ವರಿದು ಬೆಳಪ ಮೆಯ್, ಮೆಯ್ಯ ಸಂತಾಪದಿಂ ಬಾ
ಡುವ ವಕ್ತ್ರಂ ವಕ್ತ್ರಮುಂ ತಳ್ತಳಕವಳಕ ಸಂದೋಹಮುಂ ಮಾಣದಳ್ಳಾ
ಡುವಸುಯ್, ಸುಯ್ಯೆಂಕೆಯಿಂದಿರ್ಪಳಿದಧರಮವಳ್ಗಿತ್ತುದಂದೊಂದು ಚೆಲ್ವಂ
೧೫೬.

ಕೃಷ್ಣನ ಒಲುಮೆಯ ಕಿಚ್ಚು ಹತ್ತಿದ ಸತ್ಯಭಾಮೆಯ ವಿರಹದ ತೀವ್ರತೆಯನ್ನು ಕವಿ ಬಗೆ ಬಗೆಯಾಗಿ ವರ್ಣಿಸಿದ್ದಾನೆ:

ವ ॥ ಅಂತು ಶಯ್ಯೆಯೊಳ್ ಮೆಯ್ಯನೀಡಾಡಿ ಗಣನೆಗಳುಂಬ ಮಾದ ವೇದನೆಯನೊಳಕೊಂಡು, ತನ್ನ ಮೆಲ್ಲಡಿಗಳಂ ಮೆಲ್ಲನೊತ್ತಲೆಂ ದಾಟಿಸುವ ಚೇಟಿಯರ ಕರಾಗ್ರಮುಂ ಚರಣಾಂಗುಷ್ಠದಿಂ ಪೋಗೆ ನೂಂಕಿಯುಂ, ಪರೆದಕುರುಳ್ಗಳಂ ಸಡಿ

ಮುಡಿಯುಮಂ ಸಾವಗಿಸಲೆಂದೆಳಸುವ ವಿಳಾಸಿನಿಯರುಂ ಹೂಂಕಾರದಿಂ ನಿರಾಕರಿಸಿಯುಂ, ವೀಳಯಂಗುಡಲೆಂದು ಮೇಳೈಸುವ ತಾಂಬೂಲ ಕರಂಡಕವಾಹಿನಿಯರಂ ಪುರ್ವಿನಿಂ ಜರ್ವಿನಿಂ ಮಾಣಿಸಿಯುಂ, ... ಅಸ್ಫುಟಿತ ಮೌನ ಮುದ್ರಾ ಪರಿಮ್ಲಾನ ದೀನವದನೆಯುಮವಿರಳ ಸರಳ ಸೋಷ್ಣ ಶ್ವಾಸ ಶೋಷಿತಾಧರೆಯು, ಮನವರತ ವಿಗಳದಶ್ರುಧಾರಾಪರಿಕಲಿತ ಕಪೋಲೆಯುಮಶ್ರಾಂತನಿತಾಂತ ಸಂತಾಪಸಂತಪ್ತ ತನುಲತಿಕೆಯಾಗಿರ್ದ ಸತ್ಯಭಾಮೆ ೧೫೭.

ಅಷ್ಟೇ ಅಲ್ಲ; ಅದು ಇನ್ನೂ ತೀವ್ರಾವಸ್ಥೆ ಹೊಂದಿದೆ :

ಪಾಸುವ ಪಲ್ಲವಾಸ್ತರಣವೊಟ್ಟುವ ಬಾಳಮೃಣಾಳ ಸಂಕುಳಂ
ಸೂಸುವ ಚಂದ್ರಕಾಂತ ಜಲಮೊತ್ತುವ ಶೀತಳಿಕಾ ಕದಂಬಕಂ
ಬೀಸುವ ಪುಷ್ಪವೀಜನವಮರ್ಚುವ ಕರ್ಪೂರವಚ್ಚವಾಗಳುಂ
ಪೂಸುವ ಚಂದನಂ ಬಿಸುಪನಾಱಿಸಲಾರ್ತವೆ ಸತ್ಯಭಾಮೆಯಾ ೧೫೮.

ಮೇಳಿಸಿ ಪೊರ್ದಿದಾಳಿಯರ ಮೈ ಬಿಸುಪೇಱೆ ಬೆಮರ್ತುರ್ವಂಗದೊಳ್
ಬಾಳಮೃಣಾಳಿಕಾಸಮಿತಿ ಚುಯ್ಯೆನುತುಂ ನೊರೆವಿಟ್ಟುದಶ್ರುಧಾ
ರಾಳಿ ಕಪೋಲದೊಳ್ ಕುದಿದು ಬತ್ತಿದುದೊಯ್ಯನೆ ಬೀಸುತಿರ್ಪ ಪೊಂ
ಬಾಳೆಯ ಚಾಮರಂಗಳುರೆ ಸೀದುವು ತನ್ವಿಯ ದೇಹದಾಹದಿಂ ೧೫೯.

ಸತ್ಯಭಾಮೆಯ ಆಪ್ತಸಖಿಯಾದ ಕಾಮಲೇಖೆಯೆಂಬುವಳು, ಈ ವಿರಹಕ್ಕೆ ಶ್ರೀಕೃಷ್ಣನ ಮೇಲಿನ ಗಾಢ ಪ್ರೇಮವೇ ಕಾರಣ ಎಂದರಿತು, ನೀನು ಒಲಿದಿರುವ ಕೃಷ್ಣನನ್ನು ಸೇರುತ್ತೀಯೆ ಎಂದು ಭರವಸೆ ನೀಡಿ ಸತ್ರಾಜಿತನಲ್ಲಿಗೆ ಹೋಗಿ ಸತ್ಯಭಾಮೆಯ ವಿರಹದ ಸಂತಾಪವನ್ನು ವರ್ಣಿಸುತ್ತಾಳೆ.

ಸತ್ಯಭಾಮೆಯ ವಿರಹದ ಸಂತಾಪ

ಸೋಂಕಿದಗಾಳಿ ದಳ್ಳುರಿವೊಲಾದುದು ಪೊಕ್ಕ ಸರೋವರಾಂಬು ಕಾ
ಯ್ದುಂಕುದಿದತ್ತು ನಂದನವನಂ ಕರಿಕೆಟ್ಟುದು ನೋಡೆ ಸುಯ್ಯು ಸು
ಯ್ವೆಂಕಿಯಿನೆಯ್ದೆ ಚಂದ್ರಿಕೆ ಬಿಸಿಲ್ಗೆಣೆಯಾದುದುನಂಗತಾಪದಿಂ
ಪಂಕರುಹಾಕ್ಷಿ ಕಾಮಶಿಖಿ ಪೆಣ್ಬರಿಜಂ ತಳೆದಂತೆ ತೋರಿದಳ್ ೧೬೦.

ಅವಯವದ ಸಾರಸರ್ವ
ಸ್ವವನಾಹುತಿ ಗೆಯ್ದುಳಂಗಜಾಗ್ನಿ ಯೊಳುಱಿದ

ತ್ತವಳಸುವೊಂದೆ ಸತಿ ಮಾ
ಟ್ಕುವನಾಕುಳ ಕಾಮಶಿಖಿಗೆ ಪೂರ್ಣಾಹುತಿಯಂ ೧೬೧.

ಸತ್ಯಭಾಮೆಯ ಇಂಥ ಉತ್ಕಟಾವಸ್ಥೆಯನ್ನು ಕೇಳಿ ತಿಳಿದ ಸತ್ರಾಜಿತನು, ಹರಿಯು ಅವಳಿಗೆ ಪತಿಯಾದರೆ ಅವಳ ರೂಪಕ್ಕೂ ಯಶಸ್ಸಿಗೂ ತಕ್ಕ ಸೌಭಾಗ್ಯ ಉಂಟಾಗುವುದೆಂದು ಹೇಳಿ ಶ್ರೀ ಕೃಷ್ಣನನ್ನು ಒಪ್ಪಿಸುವ ಭಾರವನ್ನು ಅವಳಿಗೇ ವಹಿಸುವನು. ಅದರಂತೆ ಕಾಮಲೇಖೆ ಕೃಷ್ಣನ ಬಳಿಗೆ ಹೋಗಿ ಸತ್ಯಭಾಮೆಯ ವಿರಹದ ಪರಾಕಾಷ್ಠೆಯನ್ನೂ, ಒಲವನ್ನೂ ಹೀಗೆ ವರ್ಣಿಸುತ್ತಾಳೆ.

ಸತ್ಯಭಾಮೆಯ ವಿರಹದ ಉತ್ಕಟತೆ :

ಚಿತ್ತಂಬೊಕ್ಕಿರ್ದೆಯೆಂತೈ ಹರಿ ಕುಳಿರ್ವ ಕರಸ್ಪರ್ಶದಿಂದಿಂದುತಾಪಂ
ಬೆತ್ತಂ ಮೈ ಸೋಂಕಿ ಮಂದಾನಿಳನುರಿದನದರ್ಕಾಳಿಯರ್ ದೂರದಿಂಸೂ
ಸುತ್ತಿರ್ಪರ್ ತೋಯಮಂ ಜೀರ್ಕೊಟಿವಿಯೊಳೆ ಮನೋಜಾತನೆಟ್ಟೆಟ್ಟಿಸಲ್ಕಾ
ರ್ದೆತ್ತುಂಗೋಲಿಕ್ಕುವಂ ಭಾವಿಸುವರಳವೆ ಸತ್ರಾಜಿತೀ ದೇಹದಾಹಂ ೧೬೨.

ಎನಸುಂ ಮೈ ಬಿಸುಪೇಱೆ ವಾಸಗೃಹಮಂ ತೀವಿತ್ತು ಸುಯ್ಗಾಳಿ ನಂ
ದವ ಪತ್ರಂಗಳನಾಱಿಸಿತ್ತು ವಿಗಳದ್ಬಾಷ್ಪಾಂಬುಧಾರಾಳಿ ತ
ದ್ವನ ಭೂಜಾವಳಿಗಾಲವಾಲ ಜಲವಾಯ್ತುಬ್ಜಾಕ್ಷ ನಿನ್ನಂದ ಮಂ
ನೆನೆಯುತ್ತುಂ ಮನಮಂ ತುಱುಂಬುತಿರೆ ಜೀವಂ ನಿಂದುದಾ ತನ್ವಿಯಾ ೧೬೩.

ಹೀಗೆ ವಿರಹ ಸಂತಪ್ತಳಾಗಿರುವವಳನ್ನು ನೋಡಬೇಕೆಂದು ಪ್ರಚ್ಛನ್ನ ವೇಷದಿಂದ ಬಂದು ನೋಡಿ ಸಂತೋಷಪಟ್ಟನಂತೆ.

ಸತ್ಯಭಾಮೆ ತನ್ನ ತೀವ್ರ ಅನುತಾಪವನ್ನು ಗೆಳತಿಗೆ ಹೀಗೆ ಹೇಳಿಕೊಳ್ಳುತ್ತಾಳೆ

ಕೆಳದಿಯಱಿಟ್ಕರಿಂ ತಳಿವ ಚಂದನ ಮಿಶ್ರಿತ ಚಂದ್ರಕಾಂತ ಶೀ
ತಳಜಳವಾಱಿಸಲ್ ನೆಱೆಯವೆಂದು ಹಿಮೋದಕ ಪೂರ್ಣಮಪ್ಪಪೂ
ಗೊಳದೊಳೆಪೊಕ್ಕುಮೆನ್ನವಿರಹಾಗ್ನಿಯನಾಱಿಸಲಾರ್ತೆನಿಲ್ಲ ನೀ
ರೊಳಮುರಿವೊಂದು ದಳ್ಳುರಿಯನಂಗನೆ ನಂದಿಸುವಂದ ಮಾವುದೋ ೧೬೪.

ಹೃದಯದ ತಾಪವನೆನ್ನೀ
ಹೃದಯಸ್ಥಂ ಗೋಪಚಂದ್ರನಾಱಿಸನೆನೆ ಕೇಳ್
ಸುದತಿ ಕಡುದೂರದಾಕಾ
ಶದ ಚಂದ್ರಮನೆಂತು ಮಾಱಿಸಲ್ ನೆಱೆದಪನೇ ೧೬೫.

ತಾನಿರ್ದ ನಿಳಯ ಮಿದು ಮದ
ನಾನಳನಿಂದುರಿದುದಕ್ಕ ತನ್ನಿರ್ದೆಡೆಯಂ
ತಾನಾರಯ್ಯದನೆನ್ನನ
ದೇನಾರಯ್ವಪನೆ ಬಂದು ಕಮಲದಳಾಕ್ಷಂ ೧೬೬

ಹಾಗೇನಾದರೂ ಪ್ರಾಣೇಶ ಕೃಷ್ಣನು ಬರುವುದಿಲ್ಲವಾದರೆ ಪ್ರಾಣೇಶನಾದ ಯಮನು ನನ್ನನ್ನು ಒಯ್ಯಲು ಬರುವನು ಎಂದು ಹೇಳಿ ಮೂರ್ಛಾಗತಳಾದಳು. ಮರೆಯಲ್ಲಿಯೇ ಇದನ್ನೆಲ್ಲ ಕೇಳಿ ಮತ್ತು ನೋಡಿ ತಿಳಿದ ಕೃಷ್ಣನು ಕೂಡಲೇ ನುಗ್ಗಿ ತನ್ನ ಹಸ್ತ ಸ್ಪರ್ಶವೆಂಬ ಅಮೃತಸ್ಪರ್ಶದಿಂದ ಮೂರ್ಛೆಯಿಂದ ಎಚ್ಚರಿಸಿ ಹೊಸ ರೀತಿಯಲ್ಲಿ ಮದುವೆಯಾದನು.

ಪರಮಸ್ನೇಹಾಮೃತಾದ್ರೇಕ್ಷಣರುಚಿನಿಚಯಂ ಸೇಸೆ ಸಂಭಾಷಣಂ ತೂ
ರ್ಯರವಂ ಕಂದರ್ಪರಾಗೋದಯವೆಳದಳಿರ್ವಂದಲ್ ಪೊದಟ್ಬಂಗ ಶೃಂಗಾ
ರರಸಂ ಕೈನೀರ್ ಮುದಂ ಪೊಂಗಳಸವೊಲವು ಮೌಹೂರ್ತಮಾಗಲ್ ತದಲ್ಪೋ
ದರಿಯೊಳ್ ವೈವಾಹವಪ್ಪನ್ನೆಗವಭಿನವ ವೈವಾಹದಿಂ ಕೃಷ್ಣನಿರ್ದಂ ೧೬೭

ಕಾಮಲೇಖೆಯಿಂದ ಈ ಸಂಗತಿ ಅರಿತ ಸತ್ರಾಜಿತನು ಅವರ ವಿವಾಹ ಮಂಗಳವನ್ನು ಅದ್ದೂರಿಯಿಂದ ನಡೆಸಿದನು.

ಶ್ರೀ ಕೃಷ್ಣ ಸತ್ಯಭಾಮೆಯರ ಸಮಾಗಮ ಅತ್ಯಪೂರ್ವವೆಂಬಂತಿತ್ತು

ಅವಲುಪ್ತಾಂಗ ವಿಲೇಪನಂಚ್ಯುತಲಲಾಮಂ ಪ್ರಸ್ತಮಾಲಾಳಿ ವ
ಕ್ರವತಂಸಂ ಶ್ಲಥಮೇಖಲಂ ತ್ರುಟಿತ ಹಾಸಂ ಮುಕ್ತಮಂಜೀರಕಂ
ಪ್ರವಿಕೀರ್ಣಾಳಕವಸ್ತ ಬಂಧಕಬರಿಚ್ಛನ್ನಾಂಗ ಮಾರಕ್ತ ನೇ
ತ್ರವರಗಾಢರವಾಯ್ತು ಕಾಮ ಕಳಹಂ ಸತ್ರಾಜಿತೀದೇವಿಯಾ ೧೬೮

ಉರದಿಂ ಪೆರ್ಮೊಲೆ ಬೆಂಗೆ ಮೂಡೆ, ಬೆಮರಂಬು ವಜ್ರಲೇಪಂಬೊಲಾ
ಗಿರೆ ಕೀಲ್ಗೊಟ್ಟ ಬೆಡಂಗನೀಯೆ ಪುಳಕಂತೋಳ್‌ತಳ್ತು ಗಂಟಿಕ್ಕಿದಂ
ತಿರೆ ಮೆಯ್ ಮೆಯ್ಯೊಳಡಂಗುವಂತಮರೆ, ಗಾಢಾಲಿಂಗನಂ ಗೆಯ್ವನ
ಲ್ಲರದೇನಿರ್ದರೋ ಕಾಸಿಬೆಚ್ಚತೆಜಿದಿಂ ಶ್ರೀ ಸತ್ಯಭಾಮಾಚ್ಯುತರ್ ೧೬೯

೧೪. ನೆಗಬ್ದುದಂದಾಕೃಷ್ಣ ಭೌಮಾಹವಂ

ಒಂದು ದಿನ ಕೃಷ್ಣನ ಆಸ್ಥಾನಕ್ಕೆ ಇಂದ್ರನು ಬೃಹಸ್ಪತಿಯೊಡನೆ ಬರುತ್ತಾನೆ. ಆಗ ಬೃಹಸ್ಪತಿಯು ನರಕಾಸುರನ ಆಟೋಪವನ್ನು ವರ್ಣಿಸಿ, ಆದಿತಿದೇವಿಯ ಮಣಿಕುಂಡಲವನ್ನು ಅವನ

ವಶಪಡಿಸಿಕೊಂಡಿರುವ ವಿಚಾರವನ್ನು ತಿಳಿಸಿ ನರಕನನ್ನು ಕೊಂದು ಅದಿತಿಯ ಕರ್ಣಕುಂಡಲವನ್ನು ತಂದುಕೊಟ್ಟು ಅಷ್ಟದಿಕ್ಪಾಲಕರ ಪ್ರತಿಷ್ಠೆಯನ್ನು ಕಾಯಬೇಕೆಂದು, ಪ್ರಾರ್ಥಿಸಿದನು. ಅದನ್ನು ಕೇಳಿ ಕೃಷ್ಣನಿಗೆ ಬಂದ ಕೋಪ ಹೇಗಿತ್ತೆಂದರೆ:

ಹೃದಯದೊಳಂಕುರಿಸಿ ಮುಖಾ
ಗ್ರದಿಂದೆ ಕುಡಿವರಿವ ಕೋಪ ವಿಷಲತೆಯೆ ತಳಿ
ರ್ತುದು ಪೂತುದೆನಲ್ ತನ್ನಧ
ರದಂತ ದೀಧಿತಿಗಳೆಸೆಯೆ ಕೃಷ್ಣಂ ನುಡಿದಂ ೧೭೦.

ನರಕನನ್ನು ಸಂಹರಿಸಿ ಅದಿತಿದೇವಿಯ ಕರ್ಣ ಕುಂಡಲಗಳನ್ನು ತಂದು ಕೊಡುವೆನೆಂದು ಸಂತಯಿಸಿ, ಕಳುಹಿಸಿಕೊಟ್ಟು ದೇವತೆಗಳ ಅಪೇಕ್ಷೆಯನ್ನು ಈಡೇರಿಸುವ ನೆವದಲ್ಲಿ ಹದಿನಾರು ಸಾವಿರ ಸುರಕನ್ಯೆಯರನ್ನು ಮದುವೆ ಮಾಡಿಕೊಳ್ಳುವುದಾಗಿ ನಿರ್ಧರಿಸಿದನು.

ಕೃಷ್ಣನು ಮುರ, ಪಂಚಜನ, ನಿಶುಂಭ ಮೊದಲಾದ ರಾಕ್ಷಸರನ್ನು ಕೊಂದು, ನರಕನನ್ನು ಎದುರಿಸುತ್ತಾನೆ. ಅವರಿಬ್ಬರ ಮಧ್ಯೆ ಘನಘೋರ ಯುದ್ಧ ನಡೆಯುತ್ತದೆ.

ಶ್ರೀ ಕೃಷ್ಣ - ನರಕಾಸುರರ ಯುದ್ಧ :

ಘನಘಟೆಯಂ ತನುಗಳ್ ಗ
ರ್ಜನೆಯಂ ಗಜಂ ನೆಗಳಿಂದ್ರ ಧನುವಂಧನುಗಳ್
ನೆನೆಯಿಸೆ ಕಾರ್ಗಾಲದ ಮಟೆ
ಯೆನೆ ಸುರಿದರ್ ಕೃಷ್ಣಭೌಮರಂಬಿನ ಮಟೆಯಂ ೧೭೧.

ಮನದಣ್ಮಂ ಮನದಣ್ಮು ಮಾಂಕರಿಸಲೇಸಿಂಗೇಸು ಮೇಲಾಗಲಂ
ಬಿನಗುರ್ವಂಬಿನಗುರ್ವನಾಟಲೆದುದರ್ಕೆಂದ್ರಾದಿಗಳ್ ಭಾಪು ಬಾ
ಪೆನುತಮ್ಮಮ್ಮೆನಿತಕ್ಕು ಮಕ್ಕು ಮೆನುತಾದಂ ಮೆಚ್ಚೆಯುಂ ಬ್ರಹ್ಮನಂ
ದನನಾನಂದಿನಾಡೆಯುಂ ನೆಗಳ್ದುದಂದಾ ಕೃಷ್ಣಭೌಮಾಹವಂ ೧೭೨.

ಭೌಮನೆ ಹರಿಯೊಳ್ ಪೊಣರ್ಗುಂ
ಭೌಮನೊಳೀ ಹರಿಯೆ ಪೊಣರ್ಗು ಮೆನಲಸ್ತ್ರಕಳಾ
ಸಾಮರ್ಥ್ಯದೊಳಸ್ತ್ರಕಳಾ
ಸಾಮರ್ಥ್ಯಂ ಸೆಣಸೆ ಭೌಮಹರಿಗಳ್ ಪೊಣರ್ದರ್ ೧೭೩.

ಕೃಷ್ಣನು ಬ್ರಹ್ಮಾಸ್ತ್ರದಿಂದ ನರಕನ ಶಿರಸ್ಸನ್ನು ತರಿದನು.

ಮರುತಂ ಪಿಳ್ಕು, ಖಗೇಶ್ವರಂ ಗಱಿಸುಪರ್ವರ್ ಪರ್ವಸಂಘ ಫಣಾ
ಧರರಾಜಂ ಕಣೆ ಹವ್ಯವಾಹನಲಗಾದಿತ್ಯಂ ಪ್ರಕಾಶಂ ವಸುಂ
ಧರೆ ಬಿಣ್ಪಾದ ಸಮಸ್ತ ಶಕ್ತಿಮಯದಿಂ ಬ್ರಹ್ಮಾಸ್ತ್ರದಿಂದಂಬುಜೋ
ದರನೆಚ್ಚಂ ಪಱಿವಂತು ಭೌಮಶಿರಮಂ ಮೌಳಿಪ್ರಭಾಸ್ಫಾರಮಂ ೧೭೪.

ನರಕಾಸುರನು ಸೆರೆಯಲ್ಲಿಟ್ಟಿದ್ದ ಹದಿನಾರು ಸಾವಿರ ದಿವ್ಯ ಕನ್ಯೆಯರನ್ನು ಮದುವೆಯಾಗಿ ಅದಿತಿ ದೇವಿಗೆ ಕರ್ಣಕುಂಡಲವನ್ನು ಕೊಟ್ಟು ವಂದಿಸಲು ಹೋದಾಗ, ಅದಿತಿ ಜಗದ್ಗುರುವಾದ ನೀನು ನಮಗೆ ವಂದಿಸಬೇಡ ಎಂದು ಹೇಳಿ ನಾನಾ ಬಗೆಯಲ್ಲಿ ಸ್ತುತಿಸುತ್ತಾಳೆ :

ಅದಿತಿಯ ಸ್ತುತಿ

ಪರಮಾಣು ಸಮಂಸ್ಥೂಲಂ
ಪುರಾಣನಜರಂ ಸಮೀಪಗಂ ದೂರಸ್ಥಂ
ನಿರವಯವಂ ಸಾಕಾರಂ
ಹರಿನೀನೇ ಪೊಗಟ್ವರಳವೆ ನಿನ್ನ ಮಹತ್ವಂ ೧೭೫.

೧೫. ಪಾರಿಜಾತಾಪಹರಣಂ

ಇದು ಜಗನ್ನಾಥ ವಿಜಯದ ಒಂದು ರಸಸ್ಥಾನ.

ಒಂದು ದಿನ ಕೃಷ್ಣ ರುಕ್ಮಿಣಿಯೊಂದಿಗೆ ಅರ್ಧಾಸನದಲ್ಲಿ ವಿಲಾಸದಿಂದಿರುವ ಸಮಯದಲ್ಲಿ ನಾರದನು ಬಂದು ಸುರಲೋಕದ ದಿವ್ಯಗಂಧಭರಿತ ಪಾರಿಜಾತದ ಹೂವೊಂದನ್ನು ಕೃಷ್ಣನಿಗೆ ನೀಡಿದ. ಕಂಪಿನ ಕಣೆಯೂ, ಮಕರಂದದ ಮನೆಯೂ, ಚೆಲುವಿನ ನಿಧಿಯೂ ಆದ ಅದನ್ನು ಅಗ್ರಮಹಿಷಿಯಾದ ರುಕ್ಮಿಣಿಗೆ ಒಲವಿನಿಂದ ನೀಡಿದ. ಅದನ್ನು ತನ್ನ ಮುಡಿಯಲ್ಲಿಧರಿಸಿದ ರುಕ್ಮಿಣಿಯ ಸೊಬಗು ಕೃಷ್ಣನ ಕಾಮರಾಗವನ್ನು ಹೆಚ್ಚಿಸಿತಂತೆ. ಇದೆಲ್ಲವನ್ನೂ ಸೌಭಾಗ್ಯ ನಿಧಿಯೆನಿಸಿದ ಸತ್ಯಭಾಮೆಯ ಕೆಳದಿಯೊಬ್ಬಳು ಅತಿ ವಿಸ್ಮಯದಿಂದ ನೋಡುತ್ತಿರಲು ಅವಳ ಮನದ ಮತ್ಸರವನ್ನು ಅರಿತ ಕಲಹ ತೃಷ್ಣಕನಾದ ನಾರದ ಹೀಗೆ ಹೇಳಿದ :

ಇದನೆ ತಲೆದೊಡವು ಮಾಡಿಯೆ
ಪದಪದ್ಮಕ್ಕೆಱಗಿಪಳ್ ಶಚೀವಧುವಂತಾ
ತ್ರಿದಶೇಂದ್ರನನೆನೆ ಭುವನದೊ
ಳಿದೆದಲ್ ಸೌಭಾಗ್ಯ ಕಾರಣಂ ಪೆಱತುಂಟೇ ೧೭೬.

ತಲೆದೊಡವಾಯ್ತುಮರದ್ರುಮ
ದಲರೀ ರುಕ್ಮಿಣಿಗೆ ಸತ್ಯಭಾಮೆಯ ಸೊಬಗಿಂ
ಸಲಲರಿಯದೆಂದು ಸಂತತ
ಮುಲಿಗುಂ ಸೌಭಾಗ್ಯಡಿಂಡಿಮಂ ರುಕ್ಮಿಣಿಯಾ ೧೭೭.

ಅಬಲೆಯರೊಳ್ ಮುಯ್ಯಾಂಪಳ್
ಸೊಬಗಿಂಗಾ ಸತ್ಯಭಾಮೆ ಬೇಡಿಂ ತನಗಾ
ಸೊಬಗೀಯಲರಂ ಮುಡಿದಿರೆ
ಸೊಬಗೇಕಚ್ಛತ್ರಮಾಯ್ತು ಭೀಷ್ಮಕ ಸುತೆಯಾ ೧೭೮.

ಬಳಿರಿಪುವಿನ್ನೀಕೆಯ ಪದ
ತಳಸಂಗದ ಸುಖಮನವಳ ಮುಖಸಂಗದೊಳಂ
ತಳೆಗುಮೆ ರುಕ್ಮಿಣಿಯುಂಗುಟ
ದೊಳುಳ್ಳ ಸೊಬಗುಂಟೆ ಸತ್ಯಭಾಮೆಯ ನೊಸಲೊಳ್ ೧೭೯.

ತಡವೇಂ ಪೂಣ್ಕೆಗೆ ದಿವ್ಯಂ
ಬಿಡಿವೆಂ ರುಕ್ಮಿಣಿಯೊಳಲ್ಲದಿಂ ಹರಿ ಮಱೆದುಂ
ಗಡ ಸತ್ಯಭಾಮೆಗೆಱಗಂ
ಮುಡಿಗಿಕ್ಕಿದನಾರ್ಪರೆತ್ತಿ ಕೊಳ್ಳಿಂ ಸಭೆಯೊಳ್ ೧೮೦.

ಹೀಗೆ ರುಕ್ಮಿಣಿಯನ್ನು ಹೊಗಳುವ ನೆಪದಲ್ಲಿ ಸತ್ಯಭಾಮೆಯನ್ನು ತೆಗಳಿ ನಾರದ ಸವತಿಯರಲ್ಲಿ ಕೋಪ ಉಂಟು ಮಾಡುವ ಮಾತಾಡಿದ.

ಈ ವೃತ್ತಾಂತವನ್ನು ಕರ್ಣಾಕರ್ಣಿಕೆಯಾಗಿ ತಿಳಿದ ಸತ್ಯಭಾಮೆ ಸೌಭಾಗ್ಯ ಮಾತ್ಸರ್ಯವನ್ನು ತಳೆದಳು. ಪ್ರಣಯಕೋಪದಿಂದ ಕೋಪಾಗಾರವನ್ನು ಪ್ರವೇಶಿಸಿದಳು. ಕೃಷ್ಣನು ಸತ್ಯಭಾಮೆಯ ಅರಮನೆಗೆ ಬಂದು ಅವಳು ಕೋಪಾಗಾರದಲ್ಲಿರುವುದನ್ನು ಕಂಡು ಅವಳ ಸಮೀಪಕ್ಕೆ ಹೋಗಲಂಜಿ ಅಲ್ಲೇ ನಿಂತನು. ಪ್ರಣಯ ಕುಪಿತೆಯಾದ ಸತ್ಯಭಾಮೆಯ ವರ್ಣನೆ.

ಪರಮ ಕ್ರೋಧಾದಿ ದೇವಾರ್ಚನಮೆನೆ ಪರಿದೊಟ್ಟುತ್ತೆ ಲೀಲಾಬ್ಜಪತ್ರೋ
ತ್ಕರಮಂ ಚಿಂತಾಲತಾವೃದ್ಧಿಯನೊಡರಿಸಲೋರಂತೆ ನೀರ್ವೊಯ್ವ ಪಾಂಗಿಂ
ಸುರಿಯುತ್ತುಂ ಭಾಷ್ಪ ಧಾರಾಜಲಪರಿಕರಮಂ ಸ್ನೇಹ ಶಾಸ್ತ್ರಕ್ಕೆ ಟೀಕಂ
ಬರೆಯುತ್ತಿರ್ಪಂದದಿಂದುಂಗುಟದೆ ಬರೆಯುತುಂಭೂಮಿಯಂ ಭಾಮೆಯಿರ್ದಳ್
೧೮೧.

ಕೃಷ್ಣನು ಮೆಲ್ಲಗೆ ಹೆಜ್ಜೆಯಿಡುತ್ತ ಬಂದು ಸೇವಕನ ಭಾವದಿಂದ ಬೀಸಣಿಗೆಯಿಂದ ಗಾಳ
ಹಾಕತೊಡಗಿದ. ಅವಳ ಪ್ರಣಯ ಕೋಪದ ಭಂಗಿ ಕೃಷ್ಣನಿಗೆ ಅಧಿಕ ಅನುರಾಗವನ್ನೂ
ಸಂತೋಷವನ್ನೂ ಉಂಟು ಮಾಡಿತಂತೆ.

ಸಮಸಂದೊಲ್ಮೆಗೆ ಮುಂ ಪ್ರಸನ್ನವತಿಯಾಗಿರ್ದಂದಿನಾ ರೂಪವಿ
ಭ್ರಮಮಾಸಾಧ್ವಸಭಾವವಾರತಿಕಳಾಚಾತುರ್ಯವಾ ವಾಕ್ಯವ
ಕ್ರಿಮಮಾಹಾಸ ವಿಳಾಸವನ್ನೆಗಮದಿಂ ಮಾಣ್ದಿರ್ಕೆ ಕೃಷ್ಣಂಗ ದೊಂ
ದುಮುದಂಬೆತ್ತುದು ಸತ್ಯಭಾಮೆಯ ಮಹಾಕ್ಷೇಪಾಕ್ಷಿ ವಿಕ್ಷೇಪಣಂ ೧೮೨

ಕೃಷ್ಣನು ಬಗೆಬಗೆಯಾಗಿ ಅವಳ ಕೋಪದ ಕಾರಣವನ್ನು ಕೇಳಿದ. ಅದಕ್
ಸತ್ಯಭಾಮೆಯ ಉತ್ತರ :

ಉಪಚಾರದಿಂದಮೇವಂ
ದಪುದೆನಗೀ ಕೃತಕ ವೃತ್ತಿಯಂ ನಚ್ಚುವರಾ
ರಪಚಾರ ಕುಪಿತೆಗೆನಗಿ
ನ್ನುಪಚಾರಂ ವ್ಯಥೆಯ ನೀಗುಮೀಗುಮೆ ಸುಖಮಂ ೧೮೩

ಪೂತನೆಯಂ ಕೊಂದಾಸ್ತ್ರೀ
ಘಾತುಕವೃತ್ತಿಯುಮನೆನ್ನೊಳೇಂ ತೋಱಿದ ಪೈ
ಪೂತನೆಯ ತೆಱದೆ ನಿನಗಾ
ನೇತಱ ಪೊಲ್ಲಮೆಯನರಸ ಬಗೆದೆಂಬಗೆಯೊಳ್ ೧೮೪

ಮಾನನಿಧಿಯೆಂದು ಮನ್ನಿಪೆ
ನೀನೆನ್ನಂ ಮುನ್ನ ಮಾದುದಿಂದಪಮಾನಂ
ಮಾನಿನಿಗೆ ಮಾನಭಂಗಂ
ತಾನಿದು ಮರಣಕ್ಕಮಧಿಕಮೆಂಬುದನಱಿಯಾ ೧೮೫

ಆಗ ಕೃಷ್ಣನು ತಾನು ಅವಳ ಕಿಂಕರ, ಅವಳಿಗಿಂತ ಪ್ರಿಯವಸ್ತು ಬೇರೆ ಇದೆಯೆ ಎಂದು
ಸಮಾಧಾನಿಸಲು ಯತ್ನಿಸಿದ. ಆದರೆ ಅದಕ್ಕೆ ಸತ್ಯಭಾಮೆ ಕಿಡಿಕಿಡಿಯಾಗಿ ಹೀಗೆ ಹೇಳುತ್ತಾಳ

ಕ್ರಿಯಮಪ್ಪ ವಸ್ತುವಂ ನೀಂ
ದಯೆಯಿಂ ಕುಡೆ ಪಡೆದಳಾವಳಾಕೆಯೆ ದಿಟದಿಂ
ಪ್ರಿಯೆ ನಿನಗಾಂ ವಾಙ್ಮಾತ್ರ
ಪ್ರಿಯೆಯಿನ್ನೀನೆನಗಿದೇಕೆ ಚದುರಂ ಮೆಱೆವೈ ೧೮೬

ನೆರೆದಾಸ್ಥಾನ ದೊಳಿರ್ದು ರುಕ್ಮಿಣಿಯ ಮುಂದೆನ್ನೊಂದು ಸೌಭಾಗ್ಯಮಂ
ಪರಿಹಾಸಂಗೆಯುತಿರ್ಪ ನಾರದನ ಮಾತಂ ಪ್ರೀತಿಯಿಂಕೇಳ್ದಿಳಾ
ವರ ನೀಂ ಸೋವಡಿಯಂತಿರೀಗ ನುಡಿವಯ್ ಮಿಥ್ಯೋಕ್ತಿಯಂ ಕೂರ್ಪನ
ಲ್ಲರದೇಂ ಪೆಂಡಿರನಲ್ಲಿ ಲೋಗರಪಹಾಸ್ಯಂಗೆಯ್ವುದಂ ಕೇಳ್ವರೆ ೧೮೭.

ಪರಿಭವಮಂ ಕಾಣದಳೆಂ
ಪರಿಭವಮಂ ಕಂಡೆನೀ ಶರೀರದೊಳಸು ತಾ
ನಿರೆಯುಂ ದ್ವಿತೀಯ ಜನ್ಮಂ
ದೊರೆಕೊಂಡುದು ಪುಣ್ಯಹೀನೆಗೆನಗಿದು ಪಿರಿದೇ ೧೮೮.

ಪ್ರಿಯೆ ಸತ್ಯಂ ಸತ್ಯಭಾಮಾಸತಿ ಸತಿಯರೊಳೀಯಚ್ಯುತಂಗೆಂದು ನಿಚ್ಚಂ
ಪ್ರಿಯದಿಂದಂ ನೋಡುವರ್ ಮನ್ನಿಸಿ ನಡೆಸುವರೆಮ್ಮತ್ತೆವಿರ್ ದೇವಕೀದೇ
ವಿಯರಿನ್ನುಂ ನಾಡೆಕೊಂಡಾಡುವುದು ಪರಿಜನಂ ಧಾತ್ರಿಕೈಕೊಳ್ಳುದಿಂದ
ಪ್ರಿಯೆಯಾಗಿರ್ದೆನ್ನನಿನ್ನಾರ್ ಬಗೆದಪರೆನಗಿನ್ನೇಕೆ ಸಂಸಾರ ಬಂಧಂ ೧೮೯.

ಅಭಿನವಸ್ತುವಂ ಪ್ರಿಯೆಗೆ ರುಕ್ಷಿಣಿಗಿತ್ತು ವೃಥೋಕ್ತಿಯಿಂದೆಲೇ
ವಿಭು ತಿಳಿಪಲ್ಕೆ ಬೇಡ ಪಱಸಾಱೆನಗೀ ಭವನಿಂತು ಪೋದುದೀ
ಯಭಿಭವದಿಂದಮಿನ್ನೆನಗೆ ಬಾಳ್ಕೆಯೆ ಪೇಱಭವಾಂತರಕ್ಕೆವ
ಲ್ಲಭೆ ನಿನಗಪ್ಪೆನಕ್ಕೆನಗೆ ನೀಂ ದಯೆಗೆಯ್ಯ ತಪಕ್ಕನುಜ್ಞೆಯಂ ೧೯೦.

ಹೀಗೆ ಖೇದ ಸಂತಪ್ತೆಯಾದ ಸತ್ಯಭಾಮೆಯನ್ನು ಕರುಣಾದೃಷ್ಟಿಯಿಂದ ನೋಡಿ, ದೇವೇಂದ್ರನ ನಂದನಕ್ಕೆ ಹೋಗಿ, ಆ ಪಾರಿಜಾತವೃಕ್ಷವನ್ನೇ ತಂದುಕೊಡುವೆ ಎಂದು ಪ್ರತಿಜ್ಞೆ ಮಾಡಿದನು. ಸತ್ಯಭಾಮೆ ಪ್ರಸನ್ನಳಾಗಿ ಜಗನ್ನಾಥನ ಮನಸ್ಸಿಗೆ ಮುದ ಕೊಟ್ಟಳು.

ತನ್ನ ಪ್ರಿಯನ ಮಾತಿನಿಂದ ಸಂತುಷ್ಟಗೊಂಡ ಸತ್ಯಭಾಮೆ ವಿನೋದ ಗೃಹವನ್ನು ಪ್ರವೇಶಿಸಿದಳು. ಅಲ್ಲಿ ನಾರದ ಮತ್ತು ಕೃಷ್ಣ ಇಬ್ಬರೂ ಇದ್ದರು. ಸತ್ಯಭಾಮೆ ಬಂದ ರೀತಿ ಹೀಗಿತ್ತು :

ಕುಡುವುರ್ವಿಂ ಕರ್ಬುವಿಲ್ಲಂ ಪರಪುವ ಕಡೆಗಣ್ಣಿಂಮನೋಜಾಸ್ತ್ರಮಂ ಸಾ
ಲಿಡುವುದ್ಯನ್ಮೇಖಲಾಕೂಜಿತದಿನತನು ಕೋದಂಡಟಂಕಾರಮಂ ಕ
ನ್ನಡಿಪಂಘ್ರಿನ್ಯಾಸದಿಂ ತಾವರೆಗೆದಱುವ ಮಂದಸ್ಮಿತೋದ್ಯೋ ತದಿಂದಿಂ
ಗಡಲಂ ಬೇಱೊಂದನುತ್ಪಾದಿಸುವ ತೆಱದಿನಾನಂದದಿಂ ದೇವಿ ಬಂದಳ್ ೧೯೧.

ಪಾರಿಜಾತ ವೃಕ್ಷವನ್ನು ಭಾಮೆಗೆ ತಂದುಕೊಡುವೆನೆಂದು ಪ್ರತಿಜ್ಞೆಮಾಡಿದ ವೃತ್ತಾಂತವನ್ನು ಕೃಷ್ಣನ ಬಾಯಿಂದ ಕೇಳಿದ ನಾರದ ತನ್ನ ಮಾತಿನಿಂದ ದೇವೇಂದ್ರನಿಗೆ ಉಪೇಂದ್ರನಲ್ಲಿ ಕಲಹವುಂಟಾಗುವಂತಾದುದಕ್ಕೆ ತನ್ನನ್ನು ತಾನೆ, ಕಲಹಲೋಕಾರ್ಥಿ, ಭಾಪು ! ಎಂದು ಮೆಚ್ಚಿಕೊಂಡ. ಆದರೆ ಪಾರಿಜಾತಾಪಹರಣವು ಸಾಮಾನ್ಯ ಸಂಗತಿಯಲ್ಲ, ಕಾರಣ ಸಮುದ್ರಮಥನ ಸಂದರ್ಭದಲ್ಲಿ ಹುಟ್ಟಿದ ಆ ದಿವ್ಯವೃಕ್ಷಕ್ಕೆ ಒಡೆಯನಾದ ಇಂದ್ರ ಅದನ್ನು ಪ್ರೀತಿಯಿಂದ ಶಚಿಗೆ ಕೊಟ್ಟ, ''ಪೆಂಡಿರಾದರಿಸುತಿರ್ಪ ಪದಾರ್ಥಮಮಂ ಸುಭಟರನ್ಯರ್ಗೀಯಲೇಂಬಲ್ಲರೆ'' ಎಂದನು.

ಅದಕ್ಕೆ ಕೃಷ್ಣನು ನೀವು ನನ್ನ ಪ್ರತಿಜ್ಞೆಯ ವಿಷಯ ತಿಳಿಸಿದರೆ, ತಮ್ಮನಾದ ನನಗೆ ಸಂತೋಷದಿಂದ ಇಷ್ಟದಾನ ಕೊಟ್ಟು ನನ್ನ ಪ್ರತಿಜ್ಞೆಯನ್ನು ಸಲ್ಲಿಸುವನು ಎಂದು ಹೇಳಿದ.

ಅದಕ್ಕೆ ನಾರದನ ಉತ್ತರ ಮಾರ್ಮಿಕವಾಗಿದೆ

ದೇವಿಯರಟ್ಟಿಯಂ ಸಲಿಸಲಿಲ್ಲದ ವಸ್ತುವನಾಗು ಮಾಡಿ ನೀ
ವೀವೊಲವಿಂದೆ ಪೂಣ್ದಿರೆನೆ ಮುಂ ತನಗುಳ್ಳ ಪದಾರ್ಥಮಂಶಚೀ
ದೇವಿಗೆ ನಿಚ್ಚಮಟ್ಟಿಯ ನೊಡರ್ಚುವುದಂ ನಗವೈರಿ ಪಾರಿಜಾ
ತಾವನಿಜಾತಮಂ ನಿಮಗೆ ಕೊಟ್ಟಪನೆಂಬುದಿದಲ್ತೆ ವಿಸ್ಮಯಂ ೧೯೨.

ಅಲ್ಲದೆ ಹಿಂದೊಮ್ಮೆ ಗಿರಿಜೆಯೇ ಇಷ್ಟಪಟ್ಟಾಗಲೂ ಶಿವನು ಅದನ್ನು ತಂದುಕೊಡಲಾಗದೆ ಹೇಗೋ ಅವಳನ್ನು ಸಮಾಧಾನಿಸಿ ಅವಳ ಮನಸ್ಸಿನ ಆಗ್ರಹವನ್ನು ಕಳೆದನು. ಅಲ್ಲದೆ ಇಂದ್ರನಿಗೆ ತಾನು ದೇವತೆಗಳ ಒಡೆಯ ಎಂಬ ಅಹಂಕಾರವಿರುವುದರಿಂದ ಪಾರಿಜಾತವನ್ನು ಒಪ್ಪಿಸನು ಎನ್ನುತ್ತಾನೆ.

ಮನುಜಂ ಕೃಷ್ಣಂ ದೇವೇಂ
ದ್ರನೆನಾನಂತರ ಮದಾವುದೆನ್ನೊಳ್ ತನಗೆಂ
ದನವಧಿ ಗರ್ವದೆ ಕುಡಲಜಿ
ವನೆ ನಿಮಗಾವಜ್ರಿಪಾರಿಜಾತ ದ್ರುಮಮಂ ೧೯೩.

ಪಿಡಿವೆ ವಜ್ರಮನೆಂಬುದಗ್ರದಿವಿಜೇಭಾರೂಢನಾಗಿರ್ಪೆನೆಂ
ಬೆಡವಂಕಂ ಬಲವಂಕಮೆಂಬೆಡೆಗಳೊಳ್ ನಾಕಿವ್ರಜಂ ಬರ್ಪುದೆಂ
ಬೊಡನೇಕಾದಶರುದ್ರರಷ್ಟವಸುಗಳ್ ಪನ್ನಿರ್ವರಾದಿತ್ಯರುಂ
ನಡೆವರ್ ಸಂಗರ ಕೇಳಿಗೆಂಬೆಸಕದಿಂದುದ್ವೃತ್ತನಾವೃತ್ರಹಂ ೧೯೪.

ಕುಡಲಱಿಯಂ ನಿಮಗೆಂತುಂ
ಬಿಡೌಜನಾ ಪಾರಿಜಾತ ಕುಜಮಂ ನೀವಿಂ
ತೆಡವಱಿಯದೆ ಪೂಣ್ದಿರ್ಗಡ
ಬಿಡಿಮಿನ್ನಬ್ಜಾಕ್ಷನಿಮ್ಮ ಮನದಾಗ್ರಹಮಂ ೧೯೫.

ನಾರದನ ಈ ಕುಹಕದ ಮಾತಿಗೆ ಅತ್ಯುಗ್ರಕೋಪದಿಂದ ಕೃಷ್ಣನು

ತ್ರಿದಶಪತಿ ಪಾರಿಜಾತ
ಪ್ರದನಾಗದೊಡಾಧಿಪತ್ಯಸವನಮದಿನ್ನಾ
ಗದು ತನ್ನಗಾರಿಗಾಗಿ
ಪ್ಪುದು ಧಾರಾಖಡ್ಗ ಸವನಮಂ ಮತ್ಖಡ್ಗಂ ೧೯೬.

ಅಷ್ಟೇ ಅಲ್ಲ, ಮಹೀಮಂಡಲರಸಾತಳಕ್ಕಿಳಿಯುವುದು. ಸಮುದ್ರಗಳು ಸೀಮೋಲ್ಲಂಘನ ಮಾಡುವುವು; ಲೋಕ ವ್ಯವಸ್ಥೆಯೇ ಕೆಟ್ಟು ಹೋಗುವುದು. ಆದರಿಂದ ಎಂತಾದರೂ ನನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳುವೆನು. ನಾಳೆಯ ದಿನ ಸೂರ್ಯೋದಯ ಸಮಯದಲ್ಲಿ ಆ ಮಹೇಂದ್ರನನ್ನು ಯುದ್ಧಕ್ಕೆ ಬರಹೇಳಿರಿ, ಎಂದು ಹೇಳುವನು.

ಶ್ರೀ ಕೃಷ್ಣನು ಸತ್ಯಭಾಮೆಯೊಂದಿಗೆ ಗರುಡಾರೂಢನಾಗಿ ಸಾಗಿ ಪಾರಿಜಾತ ವೃಕ್ಷವನ್ನು ಕಿತ್ತು ಇಂದ್ರನಿಗೆ ಭಂಗವುಂಟು ಮಾಡಲು ಯುದ್ಧಾಹ್ವಾನ ಸೂಚಕವಾಗಿ ಪಾಂಚಜನ್ಯವನ್ನು ಊದಿದನು. ಯುದ್ಧ ಸನ್ನದ್ಧನಾದ ದೇವೇಂದ್ರನಿಗೆ ಬೃಹಸ್ಪತಿ, ಯುದ್ಧ ನಿನಗೆ ಉಚಿತವಲ್ಲ ಎನ್ನುತ್ತಾನೆ. ಆಗ ಸಂದಿಗ್ಧಕ್ಕೊಳಗಾದ ಇಂದ್ರನನ್ನು ನಾರದ ಯುದ್ಧಕ್ಕೆ ಪ್ರಚೋದಿಸುತ್ತಾನೆ.

ತ್ರಿದಶಾಧೀಶ್ವರಸಂಪದಂ ಸಫಲಮೀಪೌಲೋಮಿಯಿಂ ಪಾರಿಜಾ
ತದಿನೀ ದಿವ್ಯ ಪದಾರ್ಥಯುಗ್ಮದೊಳಗಿಂದೊಂದಂ ಮುಕುಂದಂಗೆ ಬ
ಲ್ಲಿದನೆಂದೀವುದೆ ಪಾರಿಜಾತಮನಿದೇಂ ಪೌಲೋಮಿಯಂ ನಾಳೆ ಬ
ಲ್ಲಿದರಾರಾನುಮಪೇಕ್ಷೆಗೆಯ್ಯಲವರ್ಗೀಯಲ್ವೇಟ್ಕುಮೆಂಬುದೇಂ ೧೯೭.

ಅಷ್ಟಕ್ಕೆ ನಿಲ್ಲದೆ ಶಚಿಯ ಬಳಿ ಹೋಗಿ ಕದನಕ್ಕೆ ಗಾಳಿ ಹಾಕುತ್ತಾನೆ.

ಪ್ರಾಕೃತಮರ್ತ್ಯನಾದ ಹರಿಪೂಣ್ಬು ಗಡಂ ನಿಜಕಾಂತೆಗಿತ್ತನೀ
ನಾಕಮಹೀಜಮಂ ಪಿರಿದುಮಾತನ ಶೌರ್ಯಮಿದಲ್ತು ಮೈಮೆವೆ
ತ್ತಾಕೆಯ ತೋಳಸೋಂಕಿನ ಗುಣಂ ಗತ ಭಾಗ್ಯೆಯ ನಿನ್ನ ತೋಳಸೋಂ
ಕೀಕುಲಿಶಾಸ್ತ್ರನಿಂ ತೊಲಗಿಸಿತ್ತು ನಿಸರ್ಗದ ಶೌರ್ಯಮಂ ಶಚೀ ೧೯೮.

ಇದರಿಂದ ವ್ಯಥಿತಳಾದ ಶಚಿಯ ಭರ್ತ್ಸನೆಯಿಂದ ಕೆರಳಿದ ಇಂದ್ರನು ಹರಿಯನ್ನು ಅಲಕ್ಷ್ಯ

ಮಾಡಿ, ದೇವಗುರುವನ್ನು ತೆಗಳಿ ಯುದ್ಧೋನ್ಮುಖನಾಗುತ್ತಾನೆ. ಆಗ ನಾರದನೇ ಅವರಿಬ್ಬರಿಗೂ ದ್ವಂದ್ವ ಯುದ್ಧ ಮಾಡಲು ತಿಳಿಸುತ್ತಾನೆ. ಅತ್ತ ಉಪೇಂದ್ರನಿಗೂ ಇಂದ್ರನಿಗೂ ದ್ವಂದ್ವ ಯುದ್ಧ ಶುರುವಾದರೆ ಇತ್ತ ಶಚಿಗೂ ಸತ್ಯಭಾಮೆಗೂ ಮಾತಿನ ದ್ವಂದ್ವಯುದ್ಧ ಮೊದಲಾಯಿತು. ಈ ಮಹೇಂದ್ರನ ಕಾಳಗ ಇನ್ನೇನು ತಿಳಿದೇ ಇದೆ ಎಂದು ಮೂದಲಿಸಿದ ಸತ್ಯಭಾಮೆಗೆ ಶಚಿ ಕೊಡುವ ಉತ್ತರ:

ಸಿಡಿಲೆನ್ನೋಪಂಗೆ ಶಸ್ತ್ರಂ, ಮರದಗದೆ ಗಡಂ ನಿನ್ನ ಕಾಂತಂಗೆ ಕಾಯ್ಪಿಂ
ಗೆಡೆಗೊಂಡೈರಾವತೇಭಂ ಮದಧಿಪತಿಗೆ ವಾಹಂ ತ್ವದೀಶಂಗೆಗೃಧ್ರಂ
ಗಡದೇವೇಂದ್ರತ್ವವೀ ಮತ್ಪತಿಗೆ ಪದವಿ ಗೋಪಾಲಕತ್ವಂ ಗಡಂ ನಿ
ನ್ನೊಡೆಯೆಂಗಿನ್ನೇತಱೊಳ್ ಮತ್ಪತಿಗೆ ದೊರೆ ಭವದ್ವಲ್ಲಭಂ ಸತ್ಯಭಾಮೇರ್ಗ.

ಸತ್ಯಭಾಮೆ -ಶಚಿಗೆ

ಅಸುರ ಯಮದಂಡವೆನಲು
ರ್ವಿಸುವ ಮಹಾಗದೆಯನಿಟಿಸಿ ವಜ್ರಮನಭಿವ
ರ್ಣಿಸಿದಪೆ ಕೇವಣದೊಳ್ ಕೀ
ಲಿಸಲಲ್ಲದೆ ವಜ್ರವಂತದೇನಾಯುಧಮೇ ೨೦೦.

ನುಡಿದಿರ್ ನಿಂದಿಸಿ ಗೋಪನೆಂದು ಹರಿಯ ಗೋಪತ್ವಮುಂಟೆಂತದೆಂ
ದೊಡೆಗೋವಾಚಕಮಪ್ಪ ನಾಕಮಹಿಮುಖ್ಯಾನೇಕ ವಸ್ತೂತ್ಕರ
ಕ್ಕೊಡೆಯಂ ಮತ್ಪ್ರಿಯನಿಂತು ನಿಮ್ಮ ನುಡಿ ನಿಂದಾಸ್ತೋತ್ರ ವಾಯ್ತಕ್ಕಕೇ
ಳ್ವೊಡೆ ಮತ್ಕಾಂತಕೃತ ಪ್ರಸಾದಮೆ ವಲಂ ತ್ವತ್ಕಾಂತನಿಂದ್ರತ್ವಮುಂ ೨೦೧.

ಅದಕ್ಕೆ ಶಚಿಯ ಪ್ರತಿ ಏಟು

ಒಂದು ನಿಟಿಲಾಕ್ಷಿ ಮಿಗಿಲುಂ
ಟೆಂದು ಹರಂ ತಾಳ್ದಿದಂ ಸ್ವಯಂ ಪ್ರಭುತೆಯನೆಂ
ದಂದು ಸಹಸ್ರ ವಿಲೋಚನ
ದಿಂದೆಸೆವಿಂದ್ರಂ ಹರಿ ಪ್ರಸಾದಸ್ಪೃಹನೇ ೨೦೨.

ಇಂದ್ರನು ಸಹಸ್ರಾಕ್ಷ ಎಂಬ ಕಾರಣಕ್ಕೆ ಉಬ್ಬಿ ಮಾತನಾಡಿದ ಶಚಿಯನ್ನು ಸತ್ಯಭಾಮೆ ನಗೆಗೀಡು ಮಾಡಿದ್ದು ಹೀಗೆ :

ಉಸಿರಲ್ವೇಡಿದನಕ್ಕ ಕೇಳ್ವುಱಿವೆನಿಂದ್ರಂಗೆಮ್ಮ ಭಾವಂಗೆ ನೇ
ತ್ರಸಹಸ್ರಂ ದೊರೆಕೊಂಡದು ಸ್ಥಿತಿಯನಾ ಹಾಸ್ಯೋಕ್ತಿಯಂತಿರ್ಕೆರಂ

ಜಿಸುಗುಂ ಕಣ್ ಪಲವೆಂಬೊಡೀಯವಯವಂ ಹೀನಾಧಿಕಂ ಲೇಸೆಮಾ
ಣ ಸದಾಳಾಪಮನಣ್ಮೆ ಕಾದುಗೆ ಸಹಸ್ರಾಕ್ಷಂಸರೋಜಾಕ್ಷನೊಳ್ ೨೦೩.

ವಿಷ್ಣು ಜಿಷ್ಣುಗಳ ದ್ವಂದ್ವ ಯುದ್ಧದಲ್ಲಿ ಇಂದ್ರನಿಗೆ ಸೋಲಾಗುತ್ತದೆ. ಹೀಗೆ ಸತ್ಯಭಾಮೆಯಿಂದ ಶಚಿಗೆ ವಾಕ್ಪರಾಜಯವೂ, ಕೃಷ್ಣನಿಂದ ಇಂದ್ರನಿಗೆ ರಣಪರಾಜಯವೂ ಆಗಲು, ಕೃಷ್ಣನು ಅವನ ಬಗ್ಗೆ ಕರುಣಹೃದಯನಾದನು.

೧೬. ಋತುವರ್ಣನಂ

ಹೇಮಂತದ ವರ್ಣನೆ

ಪಲ್ಗಿರಿದು ಪುರ್ಬನುರ್ಬಿಬೆ
ರಲ್ಗೊನೆಯಿಂ ತುರಿಸಿ ಬರಿಯ ಸೀರ್ದುಪ್ಪುಟಬಂ
ಬಲ್ಗಳನುಗುರಿಂ ಪಿಕ್ಕಿ ಬಿ
ಸಿಲ್ಗಾದುದದೊಂದು ಮರದ ಕೋಡೊಳ್ ಕೋಡಂ ೨೦೪.

ಇದಿರೊಳ್ ನಿಂದೆಡೆಗಾಲೊಳಿಟ್ಟು ಮಱಿಯಂ ನಿಶ್ಚೇಷ್ಟೆಯಿಂ ಮೇಪುಗೊ
ಳ್ಳದೆ ಕಣ್ಮುಚ್ಚಿ ಹಿಮಾನಿಯಿಂ ನಡುಗುತಿರ್ಪಾ ಪುಲ್ಲೆಯಂ ಕಂಡಿಸಲ್
ಪದನೆಂದೇಟಿಲೊಡರ್ಚಿಯುಂ ನಿಜವಪುಸ್ಸಂಕೋಚದಿಂ ಬಿರ್ಚಲಾ
ಱದೆ ಪಟ್ಟಿರ್ದುದು ಕೂಡೆ ಬೇಡವಡೆ ದೇಹಸ್ತಂಭವಾದಂದದಿಂ. ೨೦೫.

ಮಱಿಗಳನಿಱುಂಕಿ ಮೋಹದಿ
ನೆಱೆಂಕೆಯಿಂ ಗೂಡುಗೊಂಡು ಗೂಡಿನೊಳಿರದೇ
ನೊಱಗಿರ್ದುದೊ ಕೂಗದೆ ಕ
ಣ್ದೆಱೆಯದೆ ಕುಕ್ಕುಟ ಕುಟುಂಬಿನೀ ನಿಕುರುಂಬಂ ॥ ೨೦೬.

ಶಿಶಿರದ ವರ್ಣನೆ :

ಇನಿಸುಗುರ್ವೆಚ್ಚನಪ್ಪೊಸು ಕುಂಕುಮದಣ್ಕೆ ಕದಂಬದಂಬುಲಂ
ಕನಕವಿಭೂಷಣಾಳಿ ಪೊಸ ಜಾದಿಯ ಪೂದವಳಾರವಟ್ಟಿರಂ
ಜನಿಯಿಸಲಂಚೆವಾಸುಗಳೊಳೋಪಳ ಪೆರ್ಮೊಲೆ ವೆಂಕೆಯಿಂದ ದೇಂ
ತನತನಗಿಕ್ಕಿ ಮೆಟ್ಟಿದುದೊ ಭೋಗಿಜನಂ ಶಿಶಿರಾತಿರೇಕಮಂ ೨೦೭.

ವಸಂತ ವರ್ಣನೆ :

ಕಳಿಕೆ ಕೊನರ್ ಮುಗುಳಲರ್ ಮಿಡಿಕಾಯ್ ನಸುದೋರೆ ದೋರೆಪಣ್
ಬಳಸಿರಲಾಗಳಾವ ಪರಿಯಿಂ ನೋೞ್ಪೊಡಮಂತೆ ತಾನೆಕ
ಣ್ಗಳಸಿರಿತಾನೆ ರಮ್ಯಮೆನಿಸಿರ್ದು ವಿಯೋಗಿ ಜನಕ್ಕೆ ವಲ್ಲಭಾ
ವಳಿಗಿದು ಡಾಮರಂ ಮದನ ತೋಮರಮಾದುದು ಬಂದ ಮಾಮರಂ ೨೦೮.

ಅನುನಯದಿಂದ ಮೂಡಿದ ಪಸುರ್ಗನೆ ಬೆಳ್ಪನೆಯಪ್ಪ ಪೊಂಗಿ ಬೆ
ಳ್ಪನೆ ಮುಗುಳಪ್ಪ ಬೆಳ್ಮುಗುಳುಮೊಯ್ಯನೆ ಬಲ್ಮುಗಳಪ್ಪ ನುಕ್ರಮಂ
ತನಗೆಸೆಯಲ್ ತೊಡಂಬೆ ಕೆಳಗಾಗೆ ಸಿಡಿಲ್ಬು ಮರಲ್ಬುರುಳ್ವ ಕಂ
ಪಿನ ಕಣೆ ತುಂಬಿಯುಂ ನೆರಪುತಿರ್ದುದು ಮಲ್ಲಿಗೆ ಚೈತ್ರಮಾಸದೊಳ್ ೨೦೯.

ಕೃಷ್ಣನ ವನಕ್ರೀಡೆಯ ವರ್ಣನೆ

ಇಂಥ ವಸಂತಕಾಲದಲ್ಲಿ ಕೃಷ್ಣನು ಸುಂದರಿಯರೊಂದಿಗೆ ವನವಿಹಾರಕ್ಕೆ ಹೊರಟನು. ಮಲ್ಲಿಗೆಯ ಬಳ್ಳಿಯನ್ನು ಕಂಡಾಗ ಕೃಷ್ಣ ಅದರ ಬಗ್ಗೆ ತನ್ನ ತುಂಬು ಮೆಚ್ಚುಗೆ ವ್ಯಕ್ತಪಡಿಸುತ್ತಾನೆ.

ಬನದ ವಿಭೂತಿ ತಂಬೆಲರ ಮೆಯ್ಸಿರಿ ತುಂಬಿಯ ಗೀತ ಶಾಲೆ ಚೈ
ತ್ರನ ತೊಡವೋತಗಲ್ಪರೆರ್ದೆ ತಲ್ಲಣ ಮೋಪರ ಸೈಪು ಕಾಮನಂ
ಬಿನಕಣೆ ಪುಷ್ಪ ಸಾಯಕನ ಕೀರ್ತಿಯ ಬಿಟ್ಟು ಮೊದಲ್ ಮೃಡಾರಿವೀ
ರನ ಜಯಶಕ್ತಿಯೆಂದಲರ್ದ ಮಲ್ಲಿಗೆಯಂ ಹರಿ ಮೆಚ್ಚಿನೋಡಿದಂ ೨೧೦.

ಒಬ್ಬ ತರುಣಿ ಪಾದರಿಮರದಲ್ಲಿ ಹೂವನ್ನು ಆಯ್ದ ಸಂದರ್ಭ

ಈ ತರುವಿಂಗೆ ಮುಂ ನಿಜದೊಳಿಲ್ಲದ ಪಲ್ಲವವಾದುದೀಕೆಯಿಂ
ಕೌತುಕಮೆಂಬಿನಂ ತುೞುಗಿ ಪೂತೆಲೆಯಿಕ್ಕಿದ ಪಾಟಲಾವನೀ
ಜಾತದೊಳಂ ನಿಜಾರುಣ ಕರದ್ಯುತಿ ಪಲ್ಲವಮಂನೆಗಬ್ಬಲೇಂ
ಪ್ರೀತಿಯಿನೊರ್ವಳಾಯ್ದುಳೊ ತನೂದರಿ ಪಾದರಿಯೊಳ್ ಲತಾಂತಮಂ ೨೧೧.

ಕೃಷ್ಣನು ಜಲಕ್ರೀಡೆಯಾಡಿದ ಸಂದರ್ಭ

ವನರುಹಲೋಚನಂ ನಿಜಕರಾಂಜಲಿವಾರಿಯಿನೊರ್ಮೆ ಪಾರ್ಶ್ವವ
ರ್ತಿನಿಯ ಸಮುನ್ನತ ಸ್ತನಯುಗಕ್ಕಭಿಷೇಕ ಮನೀಯೆ ಕಂಡು ಮಾ

ನಿನಿ ತನಗೀರ್ಷ್ಯೆ ಪುಟ್ಟೆ ಮನದೊಳ್ ನಯನಾಂಜಲಿ ವಾರಿಯಿಂ ಪುನಃ
ಪುನರಭಿಷೇಕಮಂ ನಿಜಸುವೃತ್ತ ಕುಚಕ್ಕೆ ಪೆಱಳ್ ನೆಗಟ್ಚಿದಳ್ ೨೧೨.

ಲಲನಾ ಸಂತತಿ ಪಲ್ಲವಾಧರದ ಕೆಂಪಂ ಕಣ್ಮಲರ್ಗಿತ್ತು ಕ
ಣ್ಮಲರ್ವೆಳ್ಪಂ ನಿಜ ಪಲ್ಲವಾಧರಕೆ ಕೊಟ್ಟಂದೀಗ ಮಾಱೊಡ್ಡಿತೀ
ಸಲಿಲಕ್ರೀಡೆಯೊಳೆಂಬಿನಂ ವನಿತೆಯರ್ ನೀರಾಟದಂದಾದ ಕ
ಣ್ಮಲ ಗೆಂಪಿಂದಧರೋಷ್ಠ ಪಲ್ಲವದ ಬೆಳ್ಪಿಂನಾಡೆ ಕಣ್ಗೊಪ್ಪಿದರ್ ೨೧೩.

ಶ್ರೀ ಕೃಷ್ಣನು ಸರೋವರ ತೀರದಲ್ಲಿದ್ದಾಗಲೇ ಷಟ್ಪುರು ದೈತ್ಯ ನಾಯಕನಾದ ನಿಕುಂಭನು ಜಲಕ್ರೀಡೆಯಾಡುತ್ತಿದ್ದ ಸುಂದರಿಯರಲ್ಲಿ ಭಾನುಮತಿ ಎಂಬುವಳಿಗೆ ಮನಸೋತು ಆಕೆಯನ್ನು ಎತ್ತಿಕೊಂಡು ಗಗನದತ್ತ ಹಾರಿದನು. ಅದನ್ನು ತಡೆಯಲು ಅರ್ಜುನನು ಗಾಂಡೀವದಿಂದ ಆಕಾಶವನ್ನೆಲ್ಲಾ ಶರಪಂಜರದಿಂದ ತುಂಬಿದನು. ಆಗ ನಿಕುಂಭನು ಸ್ತ್ರೀರತ್ನವನ್ನು ಬಿಟ್ಟು ವೀರ ರತ್ನವನ್ನು ಕಂಕುಳಲ್ಲಿ ಅವುಕಿಕೊಂಡು ಹೊರಟನು. ಆಗ ಕೃಷ್ಣನು ರೌದ್ರಾಸ್ತ್ರ ಪ್ರಯೋಗ ಮಾಡಲು ಅರ್ಜುನ ಆ ದೈತ್ಯನು ಭುಜಪಂಜರದಿಂದ ನುಸುಳಿಕೊಂಡನು. ತನ್ನ ಪರಾಭವಕ್ಕೆ ದೀನ ಮುಖನಾಗಿದ್ದ ಅರ್ಜುನನನ್ನು, ಮಹಾದೇವನಿಗಿಂತಲೂ ಮಿಗಿಲಾದ ದೈತ್ಯನಿವನು ಎಂದು ಸಮಾಧಾನ ಮಾಡಿ, ಚಕ್ರಾಯುಧದಿಂದ ನಿಕುಂಭನನ್ನು ಸಂಹರಿಸಿದನು.

ಶ್ರೀ ಕೃಷ್ಣನು ರೈವತಕಾದ್ರಿಯಲ್ಲಿ ಕಂಡ ದೃಶ್ಯ.

ತನ್ನ ಮರಿಗೆ ಮೊಲೆಯೂಡುವಾಗಲೇ ಬೇಡನೊಬ್ಬನ ಬಾಣಕ್ಕೆ ಗುರಿಯಾದ ಜಿಂಕೆಯ ಚಿತ್ರ

ತೊರೆದ ಕುಚಂಗಳಿಂದೆ ಕೊಣಸಂ ನಸೆಯಿಂ ಮೃಗಮಂ ಕುರಂಗಿ ಸಾ
ರ್ತರಲೆಡೆಗೊಂಡು ಭಲ್ಲದಿನೆರಲ್ಕಿಡಿಯಾಗೆ ಕಿರಾತನೆಚ್ಚೊಡಂ
ತರಿಸದೆ ಪುಲ್ಲೆ ಸಾರ್ಚಿ ಮಱಿಯಂ ಮೊಲೆಯಂ ನೆರೆದೇಣನಂಬಟಿ
ಕ್ಕೆರಡುಡಿಯಾಯ್ತು ಕೇವಲಮೆ ದೇಹಿಗೆ ಸಂಸ್ಕೃತಿ ಮೋಹ ಬಂಧನಂ ೨೧೪.

ಧರ್ಮರಾಯನ ಇಂದ್ರಪ್ರಸ್ಥಕ್ಕೆ ಬಂದ ಕೃಷ್ಣನನ್ನು ಕಾಣಲು ಯತ್ನಿಸಿದ ಯುವತಿಯರ ಸಂಭ್ರಮದ ಚಿತ್ರ.

ಎಱಕಂ ಚಿತ್ತದೊಳುಣ್ಮೆಪೊಣ್ಮೆ ನಡೆತರ್ಪೌತ್ಸುಕ್ಯದಿಂ ಮೇಲುದ
ಳ್ಪಿಟಿವುತ್ತುಂಗ ಕುಚಂಗಳಿಂ ತೊಲಗಲಂಗವ್ಯಕ್ತಿ ಪುಷ್ಪಾಸ್ತ್ರನಾ
ದೊರ್ಱಿಯಿಂದು ರ್ಚಿದ ಬಾಳನೇಟಿಸಿರೆ ತನ್ನಂ ನೋಟ್ಪವರ್ ಸೋಲ್ತು ಮೆ
ಯ್ಮಱೆಯಲ್ ಮೆಯ್ಮಱೆದೊಲ್ದು ನೋಡಿದಳದೊರ್ವಳ್ ಗೋಪಮಾರ್ತಂಡನಂ
೨೧೫.

ಅಧಿಕ ಐಶ್ವರ್ಯದ ಮಗಧರಾಜ ಜರಾಸಂಧನಿರಲು ಧರ್ಮರಾಜನ ರಾಜಸೂಯ ಸಾರ್ಥಕವಲ್ಲ ಎಂದು ಹೇಳಿ, ಭೀಮನನ್ನು ಕರೆದುಕೊಂಡು ಹೋಗಿ ಅವನಿಗೂ ಜರಾಸಂಧನಿಗೂ ದ್ವಂದ್ವಯುದ್ಧವೇರ್ಪಡಿಸಿ, ತನ್ನ ಶಕ್ತಿ ಕಳೆಯನ್ನು ಕೊಟ್ಟು ಜರಾಸಂಧನನ್ನು ಕೊಲ್ಲಿಸಿದನು.

ಸೂರ್ಯಾಸ್ತದ ಒಂದು ಸುಂದರ ಚಿತ್ರ

ಇಳೆಯಂದಂ ಪೊಂಬಿಸಿಲ್ ಮೆಯ್ವಗೆದು ನಗನಿಕಾಯಾಗ್ರದೊಳ್ ಸಾಂದ್ರಧಾತು
ಸ್ಥಳಿ ಹರ್ಮ್ಯಾಗ್ರದೊಳ್ ಮಾಣಿಕದ ಶಿಖರಮುದ್ಯಾನ ಮಾಲಾಗ್ರದೊಳ್ ಚೆಂ
ದಳಿರೆಂಬಾಶಂಕೆಯಂ ಮಾಟ್ಪಿನ ಮರುಣತೆವೆತ್ತಿರ್ದು ಚೆಲ್ವಾದುದಸ್ತಾ
ಚಳತುಂಗ ವ್ಯಾಪ್ರುಜ್ರಂಭಾವೃತವದನಮೆನಿಪ್ಪಂದದಿಂ ಭಾನುಬಿಂಬಂ ೨೧೬.

ಒಂದದ ಪಗಲಿರುಳೆರಡಱ
ಸಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ
ಸಂದಿಸಿ ಪೊಲ್ದವೊಲೆಸೆದುದು
ಮಂದೈಸಿದ ಸಂಜೆಗೆಂಪು ಪಡುವಣ ದೆಸೆಯೊಳ್ ೨೧೭.

ನಕ್ಷತ್ರಗಳೆಂದರೆ, ಹಳೆಗಾಲದ ಬೋಗುಣಿಯಾಕಾರದ ಆಕಾಶ ಕಳಚಿ ಬೀಳದಿರಲೆಂದು ಸೃಷ್ಟಿಕರ್ತನು ಬಲವಾಗಿ ಜಡಿದ ಬೆಳ್ಳಿಯ ಮೊಳೆಗಳಂತೆ ಇದ್ದುವೆಂದು ಹೇಳುವ ವರ್ಣನೆ :

ಇಳೆಗೆ ಪಳಗಾಲದಂಬರ
ಮೊಳಸಾರ್ಗುಂ ಬೀೞ್ಗುಮೆಂದು ಧಾತ್ರಂ ಬಲ್ಪಿಂ
ದಳವಡೆ ಬೆಟ್ಟಿದ ಬೆಳ್ಳಿಯ
ಮೊಳೆಗಳೆನಲ್ ತೊಳಗಿ ಬೆಳಗಿದುವು ತಾರಗೆಗಳ್ ೨೧೮.

೧೭. ಅಗ್ರಪೂಜೆಗಗ್ರಣಿಯಾದ್ಯೆ

ಜಗನ್ನಾಥ ವಿಜಯದಲ್ಲಿ ಧರ್ಮರಾಯನು ಕೃಷ್ಣನಿಗೆ ಅಗ್ರಪೂಜೆಯನ್ನು ಸಲ್ಲಿಸಿದ ಸಂದರ್ಭ ಅತ್ಯಂತ ಸ್ವಾರಸ್ಯವಾದ ಭಾಗಗಳಲ್ಲೊಂದು. ಶಿಶುಪಾಲನು ಕೆರಳಿ ಕೃಷ್ಣನನ್ನು ಬಗೆ ಬಗೆಯಾಗಿ ನಿಂದಿಸಿ ಆಡಿದ ಮಾತುಗಳಲ್ಲಿ ಮಿಗಿಲಾದ ಚಾತುರ್ಯವಿದೆ.

ಭೀಷ್ಮನು ಶ್ರೀಕೃಷ್ಣನೊಬ್ಬನೇ ಅಗ್ರಪೂಜೆಗೆ ಅರ್ಹ ಎಂದು ಹೇಳುವ ಬಗೆ

ಶ್ರುತಿ ಪತಿ ಗೋಪತಿಲಕ್ಷ್ಮೀ
ಪತಿ ಸತ್ವ ಮಯಂ ಜಗನ್ಮಯಂ ಜ್ಞಾನಮಯಂ

ಕ್ರತುಪುರುಷನಾದಿಪುರುಷಂ
ಶ್ರುತಿ ಪುರುಷನಿರಲ್ಕೆ ಮಿಕ್ಕ ಪುರುಷರಪೂಜ್ಯ ೨೧೯.

ಅವನ ಮಾತನ್ನು ಕೇಳಿ ಶಿಶುಪಾಲನು ಯಮನಂತೆ ಕೆರಳಿ ಬಗೆ ಬಗೆಯಲ್ಲಿ ಕೃಷ್ಣನನ್ನು ಜರೆದನು :

ನೀರ್ಮಾನಿಸಂ ನದೀಜಂ
ನೀರ್ಮಾನಿಸನಬ್ಧಿಶಯನನದು ಕಾರಣದಿಂ
ಧರ್ಮಜ ಕೇಳ್ ಭೀಷ್ಮರ ಸಹ
ಧರ್ಮದ ಕೆಳೆಕೊಂಡು ಕೊನೆದುದೀಕೇಶವನಂ ೨೨೦.

ದೇವರ್ ನರದೇವರ್ ಭೂ
ದೇವರು ಮೇಂಪೂರ್ವದೇವನಾಂ ನೆಗಳ್ದ್ನಿಂ
ದೇವಾದಿಗಳಙಿದರೆನ
ಲ್ಯಾವಂ ಮಿಗಿಲಗ್ರಪೂಜೆಗಾನೆ ಸಮಗ್ರಂ ೨೨೧.

ಒಲವಿಂದೀವೊಡೆ ಗೋವಂ
ಗಲಗೆ ಕೊಟಲ್ ಕೋಡ ಕಾಳೆ ಕೋಲುಡೆದೋಲ್ ಕಂ
ಬಳಿ ಕಲ್ಲಿ ಚೆಲ್ಲಿ ಪೀಲಿಯ
ತಲೆಸುತ್ತಲ್ಲದೆ ಮಹಾಗ್ರಪೂಜೆ ವಿರುದ್ಧಂ ೨೨೨.

ನವನೀತಚೋರನ ಕುಲೀ
ನವಧೂಸ್ತನದುಗ್ಧಪೃಥುಶರೀರಂ ಗೋಪೀ
ಯುವತಿ ಜನ ಜಾರನಾಚಾ
ರವಿದೂರನೆ ಪೂಜ್ಯನಾಗೆ ನಿನಗೆ ನಿಕಾರಂ ೨೨೩.

ಅಬುಧನಕುಲೀನನೆನ್ನದೆ
ಕುಬುದ್ಧಿ ನೀಂ ಯಮಜಗೋಪನಂ ಪೂಜಿಸಲಾ
ವಿಬುಧ ಪಿತೃ ಸಮಿತಿ ತಣಿದಪು
ದೆ ಬೂದಿಯೊಳ್ ಬೇಳ್ದ ಹವಿವೊಲಕ್ಕುಂ ಯಜ್ಞಂ ೨೨೪.

ಶಿಶುಪಾಲನ ಈ ಮಾತಿಗೆ ಧರ್ಮರಾಯನು ಕೆರಳಿ ಹೇಳಿದ್ದು :

ಅಮಲ ಯದುವಂಶನಿರೆದು
ಷ್ಪಮನ ಮಹಾವಂಶನೆಂಬೆ ನೀನೇತಱಿನ
ಗ್ಗಮೆ ಕಲ್ಪವೃಕ್ಷ ಮಿರೆಕ
ಳ್ಳಿಮಹಾವೃಕ್ಷಂ ಗಡನಿತಱಿಂದದು ಪಿರಿದೇ ೨೨೫

ಹರಿಗಂ ನಿನಗಂ ಹರಿಗಂ
ಹರಿಣಂಗಂ ಹರಿಗಮುಡುಗ ಮಂತರದೆಂತಂ
ತಿರೆ ಹಸ್ತಿಮಶಕ ಪರ್ವತ
ಪರಮಾಣು ಸಮುದ್ರ ಶೀಕರಾಂತರಮಲ್ತೇ ೨೨೬

ಅಷ್ಟರಲ್ಲಿ ಸಹದೇವನು ಶಿಶುಪಾಲನ ವಿರೋಧವನ್ನು ಲೆಕ್ಕಿಸದೆ ಶ್ರೀಕೃಷ್ಣನಿಗೆ ಅಗ್ರಪೂಜ ಸಲ್ಲಿಸಿದಾಗ, ಶಿಶುಪಾಲನ ಕೋಪ ಕೆರಳಿ ಮಾರಣ ಹೋಮಕುಂಡನಾಗುತ್ತಾನೆ. ಕೃಷ್ಣ ಒಂದೊಂದೂ ಅವತಾರವನ್ನು ವಿಡಂಬಿಸುತ್ತಾನೆ.

ದಾರುಣ ಕೋಪವಹ್ನಿ ವಿಕಟ ಭ್ರುಕುಟೀಕೃತ ಧೂಮಲೇಖೆ ದಂ
ಷ್ಟ್ರಾರುಚಿ ವಿಸ್ಫುಲಿಂಗನಿವಹಂ ರಸನಾಶಿಖಿದಳ್ಳಿಸಲ್ ಜಗ
ನ್ಮಾರಣ ಹೋಮಕುಂಡಮೆನೆ ತುಂಡ ಗುಹಾಂತರವುರ್ಬಿಸಲ್ಕೆ ದು
ರ್ವಾರ ಕಠೋರ ವಾಕ್ಚಟ ಚಟತ್ಕೃತ ಮುತ್ಕಟಮಾಯ್ತು ಚೈದ್ಯನಾ ೨೨೭

ಭುವನಾಪಹಾಸ್ಯಮೆನಲ
ರ್ಣವದೊಳ್ ನೀಂ ಮತ್ಸ್ಯನಾಗಲಾನಂದು ಸಮು
ದ್ಭವಿಸಿದೆನಪ್ಪೊಡದಂ ಗಾ
ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸೆನೇ ೨೨೮

ನೀನಾದಿಕೂರ್ಮನಾದಂ
ದಾನಱಿದೊಡೆ ಪಿಡಿದು ತಂದದಂ ಮತ್ಕ್ರೀಡೋ
ದ್ಯಾನಸರೋವರ ಸಲಿಲ
ಸ್ನಾನ ದೋಳಿರಿಸುವ ವಿನೋದದೊಳ್ ತೊಡರ್ದಿರೆನೇ ೨೨೯

ನೀಂ ಪೆಸರ ಪಂದಿಯಾದಂ
ದಾಂ ಪುಟ್ಟಿದೆನಪ್ಪೊಡಂದೆ ಬೇಂಟೆಯ ನೆವದಿಂ

ದಂ ಪಿಡಿದು ತಂದು ಪಂದಿಗ
ಲಂಪಿಂ ಸಂಬರಮನಱಿಯಿಸದೆ ಮಾಣ್ದಪೆನೇ ೨೩೦.

ನಗೆಗೆಡೆಯಾಗಿರೆ ಸಿಂಗದ
ಮೊಗಮಂ ಧರಿಯಿಸಿ ನಿಶಾಟನಂ ನೀಂ ಕೊಂದೈ
ಪಗರಣಿಗರಲ್ಲದುೞಿದರ್
ಮೊಗಮಂ ಪಱತೊಂದನೆಂತುಮೇಂ ಧರಿಯಿಪರೇ ೨೩೧.

ಪಾಣ್ಬನೆಳೆದುಯ್ಯೆನಿನ್ನ ಕು
ಟುಂಬಿನಿಯ ಕಾದೆಯಿಲ್ಲ ರಾಮಾಕೃತಿಯಿಂ
ನೀಬಟೀಕ ವಾಯುಪುತ್ರಕ
ನಿಂಬಱಿತೆಯ್ದಲ್ಕೆ ಪಗೆಯನಿಕ್ಕುವುದರಿದೇ ೨೩೨.

ಕೋಗಿಲೆ ಕಾಗೆ ಮುಂ ಪೊರೆದ ಕಾರಣದಿಂ ಪರಪುಟ್ಟನಾದವೋ
ಲಾಗದ ಜಾತಿ ಗೋವಳಿತಿ ರಕ್ಷಿಸೆ ನೀಂ ಪರಪುಟ್ಟನಾದೆ ನೋ
ಡೀಗಳಿದರ್ಕೆ ನಿನ್ನ ತನು ಕಾರ್ಷ್ಣ್ಯಮೇ ಸೂಚಕ ಮಲ್ಲವೇ ಮಹಾ
ಯಾಗದೊಳಗ್ರಪೂಜೆಗೆ ವಿಜಾತಿ ಕರಾಗ್ರಮನೆಂತು ನೀಡುವೈ ೨೩೩.

ಸಾಸಿಗನ್ನೆ ಹರಿನೀಂ ಪೆ
ಣ್ಣೂಸಂ ವಧಿಯಿಸಿದೆ ಪಶುವನಟಿದ್ದೈಮತ್ತಾ
ದೋಸಕ್ಕೆ ಹೇಸದೀಗ ಮ
ಹಾಸಭೆಯೊಳಗಗ್ರಪೂಜೆಗಗ್ರಣಿಯಾದ್ಯೆ ೨೩೪.

ಪಾವಂ ಪಿಡಿದನಿತಱೊಳೇಂ
ಪಾವಡಿಗರ್ ಸುಭಟರಪ್ಪರೇ ಜಗುನೆಯ ನೀ
ರ್ಾವಂ ಪಿಡಿದನಿತಱೊಳು
ರ್ವೀವಳಿಯಂ ಸುಭಟನೆನ್ನುಗುಮೇ ಹರಿ ನಿನ್ನಂ ೨೩೫.

ಏಱುವವೋಲ್ ಪುತ್ತಂನೀ
ನೇಱಿಜರಾಸಂಧ ಭಯದೆ ಗಿರಿದುರ್ಗಮನಾ
ತೂಱಿಲ ತುದಿಯೊಳ್ ಕೇವಗೆ
ಯೇಱಿದ ಕೋಡಗದೊಲಿರ್ದ ತೆಱನಂ ಮಱೆದೈ ೨೩೬.

ಭೀಮಾರ್ಜುನರೇ ಮೊದಲಾದವರು, ಯಾದವಸೈನ್ಯ ಮತ್ತು ಚೈದ್ಯ ಸೈನ್ಯಗಳಿಗೆ ಯುದ್ಧವಾಗುವುದನ್ನು ತಡೆದು ನಿಲ್ಲಿಸಿದರು. ಆಮೇಲೆ ಕೃಷ್ಣನು ಶಿಶುಪಾಲನಿಗೆ-ಅವನ ತಾಯಿಗೆ ತಾನು ಮಾತು ಕೊಟ್ಟದ್ದನ್ನು ಜ್ಞಾಪಿಸಿ ಅರ್ಘ್ಯದ ತಟ್ಟೆಯನ್ನೇ ಚಕ್ರವಾಗಿ ಪ್ರಯೋಗಿಸಿ ಶಿಶುಪಾಲನ ತಲೆಯನ್ನು ಕತ್ತರಿಸಿದನು.

ನೀಂ ಬಯಸಿದಗ್ರ ಪೂಜೆಯ
ಪೊಂಬರಿಯಣಮಿದೆ ನಿಶಾಟ ಕೊಳ್ಳೆಂದು ಸರೋ
ಜಾಂಬಕನಿಡೆ ಶಿಶುಪಾಲ ಶಿ
ರಂಬೆರಸಂಬರ ತಳಕ್ಕೆ ನೆಗೆದುದಮತ್ರಂ ೨೩೭.

೧೮. ಉಷಾ - ಅನಿರುದ್ಧರ ಪ್ರಣಯ

ಶೋಣಿತಪುರದ ಅಧಿಪತಿ ಬಾಣಾಸುರ. ಅವನು ಬಲಿ ಚಕ್ರವರ್ತಿಯ ಮಗ, ಸಾವಿರ ತೋಳಿನವನು. ಈಶ್ವರನ ವರದಿಂದ ಅಜೇಯನೆನಿಸಿಕೊಂಡಿದ್ದನು. ಅವನ ಮಗಳು ಉಷೆ ಅನುಪಮ ಸುಂದರಿ.

ಅವಳ ಸೌಂದರ್ಯದ ವರ್ಣನೆ

ಮದನನ ಕೈದು ಕೂರ್ಪನೊಳಕೊಂಡುದೊ ಕಾಮನ ಕಲ್ಪವಲ್ಲಿಪೂ
ತುದೊ ಕುಸುಮಾಸ್ತ್ರರಾಜನ ಜಯಧ್ವಜ ಪಟ್ಟಿಕೆ ಚಿತ್ರಿಸಿತ್ತೊ ಹೃ
ತ್ಸದನನ ಪುಷ್ಪ ಚಾಪಲತೆ ಪೂಗಣೆವೊಯ್ದುದೊ ಕಂತುದಂತಿಪ
ಣ್ಣೆದುದೊ ದಿಟಕ್ಕೆನಲ್ ಬಲಿಸುತಾತ್ಮಜೆ ಯೌವನದಿಂದವೊಪ್ಪಿದಳ್ ೨೩೮.

ಶೋಣಿತಪುರದ ಸಮೀಪದಲ್ಲಿದ್ದ ಗೋಮತೀನದಿಯ ಹತ್ತಿರದ ಪ್ರದೇಶದಲ್ಲಿನ ವನದಲ್ಲಿ ಶಿವನ ಲೀಲೆಗಳನ್ನು ನೋಡಿ ಆನಂದಿಸುತ್ತಿದ್ದ ಪಾರ್ವತೀದೇವಿಯ ಪಕ್ಕದಲ್ಲಿ ಉಷೆಯು ಕುಳಿತ್ತು; ಹೀಗೆ ನನ್ನ ಪ್ರಿಯನು ತೋರಿಸುವ ಲೀಲೆಯನ್ನು ನಾನು ನೋಡುವ ಭಾಗ್ಯವನ್ನು ಎಂದಿಗೆ ಪಡೆಯುವೆನೋ ಎಂದುಕೊಂಡು ಪಾರ್ವತಿಯ ಮುಖವನ್ನು ಪ್ರೀತಿಯಿಂದ ನೋಡಿದಳು. ಅದನ್ನು ತಿಳಿದ ದೇವಿ ಪಾರ್ವತಿಯು, ಪರಾಕ್ರಮದಲ್ಲಿ ಈ ತ್ರಿನೇತ್ರನೂ ರೂಪದಲ್ಲಿ ಮನ್ಮಥನೂ, ವೈಭವದಲ್ಲಿ ದೇವೇಂದ್ರನೂ ಸಮಾನನಾಗಲಾರನು ಎನ್ನುವಂತೆ ಪ್ರಕಾಶಿಸುವ, ಸಕಲ ಗುಣಾಲಂಕೃತನಾದ ಯುವಕನೊಬ್ಬನು ವೈಶಾಖ ಶುದ್ಧ ದ್ವಾದಶಿಯ ರಾತ್ರಿಯಲ್ಲಿ ಪ್ರೀತಿಯಿಂದ ನಿನ್ನನ್ನು ಕೂಡಿ ಅನುಭವಿಸುವನು. ಅವನೇ ನಿನಗೆ ವರನಾಗುವನು ಎಂದು ವರಕೊಟ್ಟಳು.

ಒಂದು ದಿನ ಉಷೆಯು ತನ್ನ ತಂದೆಯ ಅರಮನೆಯೊಳಗಿನ ಕನ್ಯಾ ಸೌಧದ ಕೋಣೆಯಲ್ಲಿ ಸುಖ ನಿದ್ರೆಯಲ್ಲಿದ್ದಾಗ :

ಲಳಿತಾಕಾರಂ ವಿಲಾಸಂ ವಿಭವಮೆಸೆಯೆ ದಿಕ್ಚಕ್ರಮಂ ತೇಜದಿಂದಂ
ಬೆಳಗುತ್ತುಂ ಬಂದು ಬಾಣಾಸುರನರಮನೆಯಂ ಪೊಕ್ಕು ಹರ್ಮ್ಯಸ್ಥೆಯಾಗಿ
ರ್ದಳರೂಪಂ ಕಂಡು ಕನ್ಯಾವ್ರತವಟಿದಪು ದೆಂದೊಲ್ಲದಂ ತೊಲ್ಮೆಯಂತೋ
ರ್ವಳೊಳಾಗಳ್ ಕೂಡಿದಂ ಸ್ವಪ್ನದೊಳೆಸದನಿರುದ್ಧಂ ಮನೋರಾಗರುದ್ಧಂ೨೪೯

ಚಪಲಾಪಾಂಗೆ ಕುಮಾರಕಂ ನೆರೆದು ತನ್ನೊಳ್ ಪೋಗೆ ಮಾಣೆತ್ತವೋ
ದಪೆ ಮದ್ವಲ್ಲಭೆಯೆತ್ತ ವೋದಪೆಯೆನುತ್ತೆಟ್ಟುರ್ತಿದೇನಾರನೆಂ
ದಪೆಯೆಂದಾಳಿಯರಾಳಿಗೊಂಡು ನಗಲೇವೆಂಕೆಟ್ಟುದೀ ಕನ್ಯಕಾ
ತಪವೆಂದಾ ಕನಸಿಂದೊಡಂ ನನಸೆನುತ್ತಾಂತಳ್ ಮಹಾಚಿಂತೆಯಂ ೨೫೦.

ಎಚ್ಚರಾದ ಮೇಲೆ, ತನ್ನ ಸಖಿಯರ ಅಪಹಾಸ್ಯದಿಂದ ಮದುವೆಗೆ ಮುನ್ನವೇ ಹೀಗಾದದ್ದು, ತನ್ನ ಅಭಿಮಾನ ಮತ್ತು ಯಶಸ್ಸಿಗೆ ಹಾನಿ ಎಂದು ಚಿಂತಿತಳಾಗಿದ್ದಳು. ಅವಳ ಸಖಿ ಚಿತ್ರಲೇಖೆಯು ಇದು ಪಾರ್ವತಿ ವರ ಕೊಟ್ಟಂತೆ ಆಗಿರುವುದು ಎಂದು ಹೇಳಿದ ಮೇಲೆ, ಕನಸಿನಲ್ಲಿ ಸೇರಿದ ವರನ ರೂಪವನ್ನು ನೆನೆದು, ತನ್ನಲ್ಲಿ ಆತನನ್ನು ತಂದು ಸೇರಿಸುವುದೆಂದು ಹೇಳಲು, ಚಿತ್ರಲೇಖೆಯು ನಗುತ್ತ:

ಕನಸಿಂ ನೆರೆದವನಂ ನೀಂ
ನೆನಸಿಂ ನೆರದಪ್ಪೆನೆಂದು ತರವೇಟ್ಟಿಪೆ ಕಾಂ
ತನನಘಟಿತಮಿದು ಬಗೆವೊಡೆ
ಕನಸಿನ ಬತ್ತಕ್ಕೆ ಗೋಣೆಯಾಂತವರೊಳರೇ ೨೫೧.

ಅವನು ಯಾರು, ಯಾರ ಮಗ, ಯಾರ ಗೋತ್ರದವನು ಎಂದೆಲ್ಲ ತಿಳಿಯದೆ ಆ ರತಿಚೋರನನ್ನು ಹೇಗೆ ತಂದು ಸೇರಿಸಲಿ ಎನ್ನಲು, ಬೇರೊಂದೇ ಅವಸ್ಥೆಗೆ ಗುರಿಯಾದ ಅವಳನ್ನು ನೋಡಿ, ಇನ್ನು ಏಳು ದಿನಗಳಲ್ಲಿ ನರ, ಕಿನ್ನರ, ದನುಜ, ಯಕ್ಷ, ಸುರ, ಗಂಧರ್ವ, ಸಿದ್ಧ, ಕಿಂಪುರುಷರೇ ಮೊದಲಾದವರ ಭಾವಚಿತ್ರಗಳನ್ನು ತಂದು ಮುಂದೆ ಇಟ್ಟಾಗ, ಉಳಿದೆಲ್ಲರನ್ನೂ ತಿರಸ್ಕರಿಸಿ ಶ್ರೀಕೃಷ್ಣಪುತ್ರ ಮನ್ಮಥನನ್ನು ಕಂಡು :

ಕನಸಿಂದೆನ್ನೊಳ್ ರತಿಕ್ರೀಡೆಯನೊಡರಿಸಿದಾ ಧೂರ್ತನೀಯಿರ್ದನೀಯಿ
ರ್ದನೆ ಪೋಗಾಕಂತುವಲ್ಲೀ ವಿಮಲ ವಿಭವಮೀ ರೂಪಮೀ ತೇಜಮೀಯೌ
ವನಮೀಸೌಂದರ್ಯಮೀ ಸೌಷ್ಠವಮೆನುತನಿರುದ್ಧ ಸ್ಫುರದ್ವಿದ್ಧಮಂ ಭೋಂ
ಕೆನೆ ಕಂಡಾಕನ್ನೆ ಲಜ್ಜಾ ಭಯ ರಸವಶದಿಂ ಸಂಚಲದ್ಗಾತ್ರೆಯಾದಳ್ ೨೫೨.

ಅಲ್ಲದೆ

ಪಿಡಿದಮರ್ದಪ್ಪಲೆಂದು ನಿಮಿರುತ್ತಿರೆ ದೋರ್ಲತೆ ಮೇಲೆ ವಾಯಲೆಂ
ದೊಡರಿಸೆ ದೇಹವಿನ್ನೆಗವದೇಕೆಯೊ ನಲ್ಲನೆ ರೂಪದೋಱೆಯೆಂ.
ದೊಡನುಡಿಯಲ್ಕೆ ತೇರಯಿಸೆ ನಾಲಗೆ ಪೆರ್ಚಿದ ಲಂಪಿನಿಂದಮಾ
ಗಡೆ ನೆರೆದಂತುಟಾಯ್ತುಷೆಗೆ ನೋಳ್ಪುದು ಮಂದನಿರುದ್ಧ ವಿಧ್ಭಮಂ ೨೪೫

ಹೇಗಾದರೂ ಮಾಡಿ ತನ್ನ ಪ್ರಿಯನನ್ನು ತನ್ನೊಡನೆ ಸೇರಿಸಬೇಕೆಂದು ಚಿತ್ರಲೇಖೆಯನು
ಪೀಡಿಸಿದಳು. ಅದರಂತೆ ಆಕೆ ಮನೋವೇಗದಿಂದ ದ್ವಾರಕೆಗೆ ಹಾರಿ ಅನಿರುದ್ಧನೂ ಉಷೆಯ
ಹಾಗೆಯೇ ಸ್ವಪ್ನ ಸಂಭೋಗದಲ್ಲಿ ಉಷೆಯ ರೂಪಾತಿಶಯಕ್ಕೆ ಬೆರಗಾಗಿ ವಿರಹ
ಪೀಡಿತನಾಗಿದ್ದನೆಂಬುದನ್ನು ತಿಳಿದು ಅದೃಶ್ಯರೂಪದಿಂದ ಗಗನಮಾರ್ಗದಿಂದಲೇ ಇಳಿದು
ಅವನೊಡನೆ ಮಾತಾಡಿ ಒಪ್ಪಿಸಿ ಹೆಗಲ ಮೇಲೇರಿಸಿಕೊಂಡು ಬಂದು ಅನಿರುದ್ಧನನು
ಉಷೆಯೊಡನೆ ಗಾಂಧರ್ವ ವಿವಾಹದಿಂದ ಸೇರಿಸಿದಳು.

೧೯. ಬಾಣದೈತ್ಯನಂ ರಕ್ಷಿಸಿದೆಂ

ಅನಿರುದ್ಧನಿಗೆ ಬಾಣಾಸುರನೊಡನೆ ಯುದ್ಧ ಕೈಗಟ್ಟಿತೆಂದು ತಿಳಿದ ಕೃಷ್ಣನು ಅವನೊಡನೆ ಕಾದಲು
ಬಲರಾಮನನ್ನೂ ಯಾದವ ಸೇವೆಯನ್ನೂ ಕರೆದುಕೊಂಡು ಶೋಣಿತಪುರವನ್ನು ತಲುಪಿದನು
ತನ್ನ ಭಕ್ತನಾದ ಬಾಣನನ್ನು ಕಾಯ್ದುಕೊಳ್ಳಲು, ರುದ್ರನು ತನ್ನ ಪ್ರಮಥಗಣಗಳು ಹಾಗು
ಜ್ವರಗಳನ್ನು ಕೃಷ್ಣನ ಮೇಲೆ ಬಿಟ್ಟನು. ಅದು ಸೋತಾಗ ಹರಿಯೊಂದಿಗೆ ತಾನೇ ಯುದ್ಧಕ
ನಿಂತನು.

ರುದ್ರನು ಪಿನಾಕ ಧನುಸ್ಸಿಗೆ ಹೆದೆಯೇರಿಸಿ ಧನುಷ್ಟಂಕಾರ ಮಾಡಿದಾಗ

ಭರದಿಂ ಗೊತ್ರಾದ್ರಿಗಳ್ ತೂಳಿಕೆಗಳ ತೆಱದಿಂ ಪಾಱೆಭೂಮಂಡಲಂ ಕೋ
ವರಚಕ್ರಾಕಾರದಿಂ ತಿಱ್ರನೆ ತಿರಿಯೆ ಸಮುದ್ರಂಗಳಘೂರ್ಣ್ಯಂಬುವೋಲ್ತು
ಳ್ಕಿರವಿ ಶ್ವೇತಾಂಶು ಬಿಂಬಂ ಧರಣಿಗೆ ಕಲಿವೆಣ್ ಗಾಳಿಯೊಳ್ ಬೀಟ್ಟುವೋಲ್ ಬಿ
ಟ್ಟಿರೆ ಮೂಱುಂ ಲೋಕಮಂ ಪರ್ವಿದುದತಿಶಯದಿಂ ಶರ್ವ ಮೌರ್ವೀನಿನಾದಂ೨೪೬

ಅವರಿಬ್ಬರ ಯುದ್ಧ ಪರಸ್ಪರ ಸರಿಮಿಗಿಲೆನಿಸುವಂತಿತ್ತು :

ಗೆಲ್ವಂ ತಾರ್ಕ್ಷ್ಯಪತಾಕನಂ ವೃಷಪತಾಕಂ ಹೋಲಲಾಟೇಕ್ಷನಂ
ಗೆಲ್ವಂ ಪಂಕರುಹಾಕ್ಷನಲ್ತು ಗಿರಿಜಾಧೀಶಂ ರಮಾಧೀಶನಂ
ಗೆಲ್ವಂ ನೋಡಿಮೆನುತ್ತುಮಿರ್ಬರಳವಂ ಕೈವೊಯ್ದು ಸಂವಾದಿಸಲ್
ಸಲ್ವರ್ ನಾಕಿಗಳೇಂ ಸಮಾನ ಬಲರೋ ಕಾಮಾರಿ ಕಂಸಾರಿಗಳ್ ೨೪೭

ಈಶ್ವರನು ಪಾಶುಪತಾಸ್ತ್ರವನ್ನು ತೊಟ್ಟಾಗ, ಕೃಷ್ಣನು ಜೃಂಭಕಾಸ್ತ್ರದಿಂದ ಅದನ್ನು ಸ್ತಂಭಿಸಿ ಜಯವನ್ನು ಪಡೆದನು

ಕುಪಿತಂ ಪಾಶುಪತಾಸ್ತ್ರಮಂ ತುಡೆ ಮಹೇಶಂ ಶಾರ್ಙ್ಗಚಿತ್ತಜ್ಞನೀ
ತ್ರಿಪುರಧ್ವಂಸಕನಿಂದೆ ಮುಂದೆ ಜಯಮಂ ಕೈಕೊಳ್ವೆನೆಂದೇಱ್ಗೆಬ
ಲ್ಪು ಪೊಡರ್ಪೊಂದಿರೆ ಜೃಂಭಣಾಸ್ತ್ರದಿನದಂ ಕೈವೇಗದಿಂದೆಚ್ಚುಮಾ
ಧಿಪನಂ ಸ್ತಂಭಿಸಿ ತಾಳ್ದಿದಂ ಜಯಮನೇಂ ಕೃಷ್ಣಂ ಜಗದ್ವೀರನೋ ೨೪೬.

ಆಗ ದೇವಸೇನಾನಿ ಕುಮಾರಸ್ವಾಮಿಯು ಯುದ್ಧಕ್ಕೆ ಬಂದನು. ಅವನನ್ನು ಎದುರಿಸಿ ಮನ್ಮಥನು ನಾನೂ ಕುಮಾರನೇ ಎಂದುಕೊಂಡು ಎದುರಾದನು. ಅವರಿಬ್ಬರ ಮೂದಲಿಕೆಗಳು:

ಷಣ್ಮುಖನು ಮನ್ಮಥನಿಗೆ

ಅನಿಮಿಷರ್ಗ್ಗಳ್ಕುದಂ ಕವರ್ದು ಭೂಪರನಾಳ್ವೆಸಕೆಯ್ಸಿಕೊಳ್ವಜ
ಯ್ಯನನತಿಧೀರನಂ ನೆಗಟ್ದತಾರಕವೀರನನೆನ್ನಪುಟ್ಟಿದೇ
ಟನೆಯದಿನಕ್ಕೆ ಕಣ್ದೆಱೆಯದರ್ಭಕನೆಂ ಗಡಕೊಂದೆನೆಂದೊಡಿ
ನ್ನನುಪಮಯೌವನಂಗೆ ನಗನಂಗನೆ ನೀನಿದಿರಾಂತು ನಿಂದಪೈ ೨೪೭.

ಮನ್ಮಥನ ಉತ್ತರ

ಎಲೆಗಡ ಕಷ್ಟಮೀ ನಿಜಗುಣಸ್ತುತಿಯುಂ ಪರನಿಂದೆಯುಂ ನಿರಾ
ಕುಲಮಿದು ನಿನ್ನೊಳಪ್ಪುದುಚಿತಂ ಗುಹ ನೀಂ ನೆನೆ ನಿನ್ನ ಜನ್ಮದು
ರ್ವಿಲಸಿತಮಂ ದಿಟಂ ಪಲರ್ಗೆ ಪುಟ್ಟಿದ ಕಾರಣದಿಂದ ವಾನನಂ
ಪಲವೊಳವೊಲ್ಪುದಂ ನುಡಿಯಲೆಂದೆನೆ ಕೇಳ್ದು ಕನಲ್ದು ಷಣ್ಮುಖಂ ೨೪೮.

ಷಣ್ಮುಖನು ಮನ್ಮಥನಿಗೆ

ಪಿಡುವುದು ಕರ್ಬುವಿಲ್ ತುಡುವುವೈದಲರಂಬಿವನೇಕೆನಚ್ಚಿ ನೀಂ
ತೊಡರ್ವೆ ರತಿಪ್ರಿಯೋಪಕರಣಂಗಳಿವೇವುವೊ ಕಾಳೆಗಕ್ಕೆನೀಂ
ಮೃಡನೊಳಿದಿರ್ಚಿ ರೂಪುಗಿಡುವಂದಿವು ಮಾಡಿದ ಮಾಟಮಾವುದಾರ್
ಸೆಡೆವರಿದರ್ಕನೇಕ ನಿಶಿತಾಯುಧ ಕೋವಿದರಪ್ಪ ಮದ್ವಿಧರ್ ೨೪೯.

ಮನ್ಮಥನ ಪ್ರತ್ಯುತ್ತರ

ಅಲರಂಬೀ ಕರ್ಬುವಿಲ್ಲೆಂದಿಟಿಪಿ ಗಳಪದಿರ್ ಕೆಮ್ಮನೀ ಕರ್ಬುವಿಲ್ಲಿಂ
ಗರಲಂಬಿಂಗಾ ಮಹೇಶಂ ಮನದೊಳಳುಕಿಸಮ್ಯಕ್ತಪೊ ನಿಷ್ಠೆಯಂ ಬಿ

ಟ್ಟರೆ ವೆಣ್ಣಾಗಿ ದುರ್ದದಂ ನೀಂ ನೆನೆ ದಿಟಮಿದೆನಲ್ ಕೆಯ್ದುಗಳ್ ನಿರ್ಘೃಣಂಗಳ
ನಿರವದ್ಯಂಗಳ್ ಜಗನ್ಮೋಹನ ಪಟುಗಳಿವರ್ಕಂಜದುದ್ವೃತ್ತನಾವಂ ೨೫೦

ಮಾತು ನಿಲ್ಲಿಸಿ ಇಬ್ಬರೂ ಕದನಕ್ಕೆ ಆರಂಭಿಸಿದರು. ಸ್ಕಂದನು ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದನು. ದೇವತೆಗಳೆಲ್ಲ ಇನ್ನು ಎಲ್ಲಿಯ ಕೃಷ್ಣ, ಎಲ್ಲಿಯ ಬಲರಾಮ, ಎಲ್ಲಿಯ ಮನ್ಮಥ ಎಂದು ಭಯಪಡುತ್ತಿರಲು, ಕೃಷ್ಣನು ಅದನ್ನು ಮಧ್ಯದಲ್ಲೇ ಚಕ್ರದಿಂದ ತುಂಡರಿಸಿದ. ಸ್ಕಂದನ ಭಯಂಕರ ಶಕ್ತ್ಯಾಯುಧಕ್ಕೂ ಅದೇ ಗತಿಯಾಯಿತು. ಕೃಷ್ಣನು ಚಕ್ರವನ್ನು ಕೈಗೆತ್ತಿಕೊಂಡಾಗ ಪಾರ್ವತಿಯ ಸಖಿಯೊಬ್ಬಳು ನಗ್ನಳಾಗಿ ಎದುರಿಗೆ ಬಂದು ಹೊಡೆಯದಂತೆ ಅಡ್ಡ ನಿಂತಳು. ಕೃಷ್ಣ ಹೇಸಿಕೆಯಿಂದ ಪಕ್ಕಕ್ಕೆ ಮುಖ ತಿರುಗಿಸಿದ. ಆಗ ಷಣ್ಮುಖ ತಪ್ಪಿಸಿಕೊಂಡು ಓಡಿ ಮರೆಯಾದ. ಆಗ ಬಾಣಾಸುರನು ಎದುರಾದ. ಬಾಣಾಸುರ-ಕೃಷ್ಣರು ಪರಸ್ಪರರ ಮೇಲೆ ಪ್ರಯೋಗಿಸಿದ ಬಾಣಗಳು ಎಷ್ಟೆಂದರೆ :

ಸರಲೊಂದನೊಂದು ಕಡಿದಂ
ಬರದಿಂ ಸುರಿದಿಳೆಯೊಳೊಪ್ಪಿ ಬೆಟ್ಟಾಗಿರಲಿ
ರ್ವರು ವೊಡನೊಡನೆಚ್ಚರ್ ಭುಜ
ಗರಿಪುಧ್ವಜರಮರ ಕೋಟಿ ಜೀಯೆಂಬಿನೆಗಂ ೨೫೧

ಬಾಣನು ಪ್ರಯೋಗಿಸಿದ ಶಕ್ತ್ಯಾಯುಧವನ್ನು ತಡೆದು ಅದನ್ನೇ ಬಾಣನ ಮೇಲೆ ತಿರುಗಿಸಿದನು.

ವ॥ ''ಅಂತು ಶಕ್ತಿ ಪ್ರಹಾರದಿಂದಾದ ಹೃದಯದ್ವಾರದಿಂ ವೀರ ಗ್ರಹ ಪ್ರವೇಶವಾದಂತೆ ವಿಜೃಂಭಿಸುವ ಸಹಸ್ರಭುಜನಂ ಮುಳಿದು ನೋಡಿ''-ಚಕ್ರಾಯುಧದಿಂದ ಬಾಣನಿಗೆ ಹೊಡೆಯುತ್ತಾನೆ ಆಗ :

ರವಿಯಂ ಮುಂ ನುಂಗಿ ಮತ್ತಂತುಗುಳ್ವುದು ಸಹಜಂ ರಾಹುಗಿಂದಂತುಟಲ್ತೀ
ರವಿಬಿಂಬಂ ರಾಹು ಸಂದೋಹಮನುಗುಳ್ವುದಾಶ್ಚರ್ಯಮೆಂಬನ್ನೆಗಂ ಚ
ಕ್ರವಗುರ್ವಿಂ ಬಾಣ ಬಾಹಾವನಮನವಿತುಮಂ ಭೇದಿಸಳ್ ಬಿಳ್ದುತದ್ಬಾ
ಹುವಿತಾನಂ ಯುದ್ಧರಂಗಾರ್ಣವಧ ತೆರೆಗಳೆಂಬಂತೆ ತಳ್ತಿರ್ದುದೆತ್ತಂ ೨೫೨

ವ॥ ಆಗಳ್ ಸಹಸ್ರಭುಜ ಭುಜಾಟವೀ ಸಮುಚ್ಚಾಟನದಿಂ ದುರ್ದರ್ಶನ ಮಾಗಿ ಬಂದ ಸುದರ್ಶನಮಂ ಮುಗುಳೆ ನೆಗಪಿ ತದ್ರಿಪು ಶಿರಶ್ಛೇದನಂ ಗೆಯ್ಯಲೆಂದಿರ್ದ ವಿಶ್ವರೂಪನ ಸಮೀಪಕ್ಕೆ ವಿರೂಪಾಕ್ಷನೆಳ್ತಂದು. ೨೫೩.

ಉಡುಗುಡುಗು ಚಕ್ರಮಂ ನೀಂ
ಬಿಡದಿರ್ ಬಿಡದಿರ್ ಬಲೀಂದ್ರಸೂನುಗೆ ಮಾಣ್ ಮಾಣ್

ಪೊಡೆಯಲರ ಮನ್ನಿಸೆನ್ನಯ
ನುಡಿಯಂ ಗುಹನಿಂ ವಿಶೇಷವೆನಗೀ ಬಾಣಂ ೨೫೪.

ದ್ವಯ ಭಾವಂ ನಮಗಿಲ್ಲ ಬಲ್ಲವರೆನಾನುಂ ನೀನುಮೀಮಾತನಿ
ಶ್ಚಯಮೆಂತೆಂದೆನಲೇಕಮೂರ್ತಿ ಮೊದಲೊಳ್ ಸಂದತ್ತದಿನ್ನೇಕ ಮೂ
ರ್ತಿಯೆ ಮೂರ್ತಿತ್ರಯವಾಯ್ತುದಲ್ಲದೆಯುಮಾ ತ್ರೈಮೂರ್ತಿಯೊಳ್ ಸತ್ವಮೂ
ರ್ತಿಯೆ ನೀಂ ರಕ್ಷಣವೃತ್ತಿ ನಿನ್ನದದಱಿಂದಂ ರಕ್ಷಿಸೀ ಬಾಣನಂ ೨೫೫.

ಎಂದು ಹೇಳಿದನು ಕೃಷ್ಣನು ಅದಕ್ಕೆ ಒಪ್ಪಿ :

ಪರಮೇಶ ಭಕ್ತಜನಶಂ
ಕರ ಶಂಕರ ನಿನ್ನ ಮಾತನಾಂ ಮನ್ನಿಸೆದೆಂ
ತ್ವರಿತಂ ಚಕ್ರಮನುಪಸಂ
ಹರಿಸಿದೆ ನೀ ಬಾಣದೈತ್ಯನಂ ರಕ್ಷಿಸಿದೆಂ ೨೫೬.

ವ || ಎಂದು ಬಾಲೇಂದು ಜೂಟನಂ ಕೈಟಭಾರಿ ಮನ್ನಿಸಿ, ಬೀಳ್ಕೊಂಡು ನಿಲೆ, ಬಾಳಂ ಮಹಾಕಾಳನಾಮದಿಂ ಪ್ರಮಥ ಸಾರೂಪ್ಯಪದವಿಯಂ ಪಡೆದು ಮೃಡನೊಡನೆ ಕೈಲಾಸಕ್ಕೆ ಪೋದನ್. ೨೫೭.

ಅನಂತರ ಅನಿರುದ್ಧ – ಉಷೆಯರಿಗೆ ವಿವಾಹ ಮಾಡಿ, ಮದುಮಕ್ಕಳನ್ನು ಮುಂದೆ ಕಳುಹಿ ತಾನು ಹಿಂದೆ ಬರುತ್ತಿದ್ದನು. ಮನ್ಮಥನು ಮದುಮಕ್ಕಳನ್ನು ವೈಭವದಿಂದ ಎದುರುಗೊಳ್ಳಬೇಕೆಂದು ತಿಳಿಸಲು ದ್ವಾರಾವತಿಗೆ ಬರುವಷ್ಟರಲ್ಲಿ ಸಾಲ್ವನು ಅದನ್ನು ಮುತ್ತಿದ್ದನು. ಮನ್ಮಥನು ಅವನೊಂದಿಗೆ ಹೋರಾಡಿ ಸೋತಿದ್ದ. ಆ ಸಮಾಚಾರವನ್ನು ಉದ್ಧವನಿಂದ ತಿಳಿದ ಶ್ರೀ ಕೃಷ್ಣ ಅತ್ತ ಹೊರಟ. ಈ ಮಧ್ಯೆ ನಾರದನು ಬಂದು ಸಾಲ್ವನ ಅದ್ಭುತ ಪರಾಕ್ರಮದ ಕಥೆ ಹೇಳಿ, ತಾನು ವಿಷ್ಣುವಿಗಿಂತ ಅತಿ ಬಲಶಾಲಿಯೆಂದು ಕೊಬ್ಬಿ ಅಜೇಯ ನೆನೆಸಿರುವನು ಎಂದು ಹೇಳಿದನು. ಕೃಷ್ಣನು ಸಾಲ್ವನ ಮೇಲೆ ಬಾಣಗಳ ಮಳೆಗರೆದ. ಸಾಲ್ವನ ಆಟೋಪ ತೀವ್ರವಾದಾಗ ಕೃಷ್ಣನು ಸುದರ್ಶನಕ್ಕೆ ಕೈಯಿಟ್ಟನು. ಆ ಸಂದರ್ಭ :

ಬಿನದಂ ಸುದರ್ಶನಂ ಸಾ
ಲ್ವನ ತಲೆಗೆಂದಾಯ್ತು ಸಫಲಮಕ್ಕಿಂದು ಸುದ
ರ್ಶನ ಜನ್ಮಮವನ ತಲೆಗೊಂ
ಡೆನುತೆ ಸುದರ್ಶನ ಮನಸುರ ಮಥನಂ ಪಿಡಿದಂ ೨೫೮.

ಸಾಲ್ವನ ತಲೆ ಹಾರುವುದನ್ನೇ ದೇವತೆಗಳು ಸಂತೋಷದಿಂದ ಎದುರು ನೋಡುತ್ತಿರುವಲ್ಲಿ ಸುದರ್ಶನವು ಅದನ್ನು ಹಾರಿಸಿತು. ಆಗ ದೇವತೆಗಳು ಪ್ರೀತಿಯಿಂದ ಹೂಮಳೆಗರೆದರು :

ಎಮಗಮರತ್ವವಿಂದು ದೃಢವಾದುದು ಭೂಭರವಿಂದುಪೋಯ್ತುವಾ
ಸದ ಪದವಿಂದು ಸಂದುದು ಮುರಾಂತಕನೊಳ್ ದನುಜಾಂತಕತ್ವವಿಂ
ದವಿತಥಮಾಯ್ತು ನಾರದನ ಕಣ್ಬಸವೋಡಿದುದಿಂದೆನುತ್ತುಮು
ತ್ಸವ ಪಟಹಸ್ವನಂ ನೆಗಟೆ ಪೂಮಟೆಯಂ ಸುರರೊಲ್ದು ಸೂಸಿದರ್ ೨೫೯.

ಕಾವ್ಯ ಸಮಾಪ್ತಿ

ಕುರುಪಾಂಡೂದ್ಭವ ಭಾರತಾಹವನಿಯುಕ್ತಾಷ್ಟಾದಶಾಕ್ಷೌಹಿಣೀ
ಧುರಮೇಂ ಗಣ್ಯಮೆ ಬೇಡೆ ಕೃಷ್ಣನೆ ವಿಪಕ್ಷಾಕ್ಷೌಹಿಣೀ ಲಕ್ಷಮಂ
ಧುರದೊಳ್ ಮರ್ದಿಸೆ ಭೂಭರಂ ತೊಲಗಿತೆಂಬೀ ಕಾವ್ಯಮಂ ಪೇಟ್ವ ಕೇ
ಳ್ವರೊಳಜ್ಞಾನ ಭರಂ ಕಿಡಲ್ ಸುಖಭರಂ ಕೈಗೊಳ್ಗುವಾತ್ಯಂತಿಕಂ ೨೬೦.

ಬಾಡಿದ ಕೆಯ್ಗೆ ಕೊಳ್ಗೆ ಮಳೆ ಸಸ್ಯಕುಲಂ ಸತತಂ ಸುಭಿಕ್ಷಮಂ
ಮಾಡುಗೆ ಗೋಧನಾಳಿ ಕೊಡವಾಲ್ಗಟೆ ಗೋಪರನಂಗರಾಗದೊಳ್
ಕೂಡುಗೆ ರುದ್ರಭಟ್ಟ ಕೃತಿ ವೈಷ್ಣವ ಕಾವ್ಯ ರಸಾರ್ಣವಂ ತುಳು
ಕಾಡುಗೆ ಭೂಮಿ ನಿಲ್ವಿನಮಹರ್ಪತಿನಿಲ್ವಿನಮಿಂದು ನಿಲ್ವಿನಂ ೨೬೧.

ಅನುಬಂಧ

ಪದ್ಯಗಳಿಗೆ ದಿಕ್ಸೂಚಿ

ಕೃಷ್ಣ, ಬ್ರಹ್ಮ, ರುದ್ರ, ಸೂರ್ಯ ಮತ್ತು ಗಣಪತಿಯನ್ನು ಈ ಪದ್ಯಗಳಲ್ಲಿ ಕ್ರಮವಾಗಿಸ್ತುತಿಸುವ ವ್ಯಾಜದಲ್ಲಿ ಶ್ಲೇಷೆಯಿಂದ ಇವು ತನ್ನ ಆಶ್ರಯದಾತ ರಾಜ ವೀರ ಬಲ್ಲಾಳನಿಗೂ ಅನ್ವಯವಾಗುವಂತೆ ರಚಿಸಿರುವುದರಲ್ಲಿ ಕವಿಯ ವಿದಗ್ಧತೆ ಇದೆ. ಇವುಗಳನ್ನು ಸ್ವಲ್ಪ ವಿವರವಾಗಿ ನೋಡಬಹುದು.

೧.ಅ) **ಶ್ರೀ ಕೃಷ್ಣನ ಪರವಾಗಿ:** ಶ್ರೀ ರಾಮಾನಟಿ = ಲಕ್ಷ್ಮೀದೇವಿ ಎಂಬ ನಟಿಯು, ಕೌಸ್ತುಭದ್ಯುತಿಕಿರತ್ = ಕೌಸ್ತುಭರತ್ನದ ಕಾಂತಿಯೆಂಬ ಪುಷ್ಪಾಂಜಲಿ ಕ್ಷೇಪ = ಪುಷ್ಪೋಪಹಾರದಿಂದ ಶೋಭಿಸುವ, ವಕ್ಷೋರಂಗಸ್ಥಿತೆಯಾದ = ಯಾರ ವಕ್ಷ ಪ್ರದೇಶದಲ್ಲಿ ನೆಲೆಸಿರುವಳೋ, ಪಾದನಖರೋಚಿರ್ಗಂಗೆ = ಯಾರ ಕಾಲುಗುರಿನ ಕಾಂತಿಯೆಂಬ ಗಂಗೆಯು, ಪೃಥ್ವೀಶಕೋಟೀರ ವ್ಯಾಪ್ತಿಗೆಸಂದ = ಲೋಕದ ರಾಜಮಹಾರಾಜರ ಮತ್ತು ಶಿವನ ಕಿರೀಟಾಗ್ರದಲ್ಲಿ ಆವೃತ್ತವಾಗಿದೆಯೋ, ಚಕ್ರರವಿ = ಯಾರ ಚಕ್ರವೆಂಬ ಸೂರ್ಯನು, ದೈತ್ಯ ಧ್ವಾಂತಮಂ = ರಾಕ್ಷಸ ಸಮೂಹವೆಂಬ ಕತ್ತಲೆಯನ್ನು, ಗೆಲ್ದು = ಗೆದ್ದು ನಾಶಪಡಿಸಿದ್ದಾನೋ ಅಂಥ, ಭೂಭಾರಚ್ಛೇದ ವಿನೋದಿ ಕೃಷ್ಣನ್ = ಭೂಭಾರವನ್ನು ಇಳಿಸಿದ ವಿನೋದಿ ಕೃಷ್ಣನು ನಮಗೆ, ಆನಂದ ಸಂದೋಹಮಂ= ಆನಂದ ಪರಂಪರೆಯನ್ನು ನೀಡಲಿ.

ಆ) **ರಾಜನಪರವಾಗಿ :** ಪಟ್ಟಾಭಿಷೇಕಕಾಲದಲ್ಲಿ, ಧರಿಸಿದ ರಾಜ್ಯಾಧಿಪತ್ಯ ಸೂಚಕವಾದ ಆಭರಣಗಳ ಕಾಂತಿಯಿಂದ ಕೂಡಿರುವ, ರಾಜನ ಯಾವ ಹೃದಯ ರಂಗಸ್ಥಳದಲ್ಲಿ ರಾಜ್ಯಲಕ್ಷ್ಮಿ ಎಂಬ ನರ್ತಕಿ ನೆಲೆನಿಂತಿದ್ದಾಳೋ, ತನ್ನ ಕಾಲಿಗೆ ನಮಸ್ಕರಿಸುವ ಸಾಮಂತ ರಾಜರ ಕಿರೀಟದ ತುದಿಯಲ್ಲಿ ಯಾರ ಕಾಲುಗುರುಗಳ ಕಾಂತಿಯೆಂಬ ಗಂಗೆ ಹರಡಿದೆಯೋ, ಯಾವ ರಾಜನ ಸೇನೆಯೆಂಬ ಸೂರ್ಯನು ರಾಕ್ಷಸರೂಪಿಗಳಾದ ಕ್ರೂರ ಶತ್ರು ಸಮೂಹವೆಂಬ ಕತ್ತಲೆಯನ್ನು ನಾಶಮಾಡಿದ್ದಾನೋ, ಯಾರು ಭೂಭಾರ ಪರಿಹಾರಡವಿನೋದಿಯಾದ ಶ್ರೀ ಕೃಷ್ಣ ಸ್ವರೂಪನಾಗಿದ್ದಾನೋ ಅಂಥ (ಬಲ್ಲಾಳ) ಪ್ರಭು ನಮಗೆ ಸಂತೋಷವನ್ನುಂಟು ಮಾಡಲಿ.

೨.ಅ) **ಬ್ರಹ್ಮನಪರವಾಗಿ:** ಜನನುತರಾಜ ಹಂಸನಯನಂ= ಜನರಿಂದ ಸ್ತುತನಾದ, ರಾಜಹಂಸವನ್ನು ವಾಹನವಾಗಿ ಉಳ್ಳವನು, ಬ್ರಹ್ಮ, ಕಮಳಾವಸಥಂ = ಕಮಲದಲ್ಲಿ ನೆಲೆಸಿರುವ, ಕಳಾನಿಕೇತನ = ಸೃಷ್ಟಿ ನಿರ್ಮಾಣ ಕಲೆಗೆ ಮೂಲನಾದವನು, ಪೆಂಪು + ಉಪಮ + ಪೆತ್ತ = ಔನ್ನತ್ಯದ ಸದೃಶವೇ ಆದ, ಹಿರಣ್ಯಗರ್ಭನಾದ, ಉದಾರಿಯಾದ, ರಜವೊಂದಿಯೆ = ರಾಜಸಗುಣವುಳ್ಳವನಾದರೂ, ಸತ್ವ ನಿಧಾನನ್ = ಸತ್ವ

ಗುಣವೆಂಬ ನಿಧಿಯುಕ್ತನೂ, ಪೆಂಪು + ಅನುಗುಣಮಾದ ಹಿರಿಮೆಯಿಂದ ಕೂಡಿದ, ಲೋಕಪಿತ = ಜಗತ್‌ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನು ನಮಗೆ, ರಾಗಮಂ=ಸಂತೋಷವನ್ನು ನೀಡಲಿ.

ಆ) ವಿಷ್ಣು ಪರವಾಗಿ : ಪ್ರಶಂಸಾರ್ಹರಾದ, ರಾಜ, ಹಂಸ, ನಯನ = ಚಂದ್ರ ಸೂರ್ಯರನ್ನು ಕಣ್ಣುಗಳಾಗಿ ಉಳ್ಳ, ಲಕ್ಷ್ಮಿಗೆ ನಿವಾಸಸ್ಥಾನನಾದ (ಕಮಳಾವಸಥ), ಜನರ ಪ್ರಶಂಸೆಗೆ ಪಾತ್ರರಾದ ಯೋಗಿಶ್ರೇಷ್ಠರನ್ನು (ರಾಜಹಂಸ) ಪರಮ ಪದವಾದ ಮೋಕ್ಷಕ್ಕೆ ಒಯ್ಯುವವನು (ನಯನಂ) ಗರುಡಧ್ವಜನೂ (ಕಳಾನಿ + ಕೇತನ), ಸ್ವಯಂಭು, ದುಷ್ಟ ಕ್ಷತ್ರಿಯ ವಿದಾರಿ, ಸತ್ವಗುಣ ಯುಕ್ತನೂ, ಮಹಿಮಾವಂತನೂ, ಲೋಕಪಿತನೂ, ಚತುರ್ಯುಗ ಪ್ರಧಾನನೂ ಆದ ವಿಷ್ಣುವು ಸಂತೋಷವನ್ನುಂಟು ಮಾಡಲಿ.

ಇ) **ರಾಜನ ಪರವಾಗಿ :** ಜನರ ಪ್ರಶಂಸೆಗೆ ಪಾತ್ರರಾದ ರಾಜಶ್ರೇಷ್ಠರ ಯಜಮಾನ, ಐಶ್ವರ್ಯಲಕ್ಷ್ಮಿಗೆ ನೆಲೆಯಾದ, ಅರುವತ್ತು ನಾಲ್ಕು ಕಲೆಗಳಿಗೆ ಆಶ್ರಯದಾತ, ಕೀರ್ತಿಶಾಲಿ, ಹೊನ್ನಿನ ನಿಧಿಯುಳ್ಳ, ಉದಾರಿ ರಜೋಗುಣಯುಕ್ತ, ಸಾಮರ್ಥ್ಯಶಾಲಿ ಎಂದು ಹೆಸರಾದ, ಸಾಮವೇ ಮೊದಲಾದ ಚತುರೋಪಾಯಗಳನ್ನು ತಿಳಿದ, ಪ್ರಜಾಪರಿಪಾಲಕನಾದ (ಬಲ್ಲಾಳ) ರಾಜ ನಮಗೆ ಸಂತೋಷವನ್ನು ನೀಡಲಿ.

೩. **ಶಿವನ ಪರವಾಗಿ :** ಅರಿಕಾಮಧ್ವಂಸಿ = ಶತ್ರುವಾದ ಕಾಮನನ್ನು ನಾಶಮಾಡಿದ, ನಾಗವ್ರಜಕಮಯಕಟಕಂ = ಸರ್ಪಗಳನ್ನು ಆಭರಣವಾಗಿ ಧರಿಸಿದವನು, ರಾಜ ರಾಜ ಪ್ರತಿಷ್ಠಾನಿರತಂ = ಕುಬೇರನನ್ನು ನೆಲೆಗೊಳಿಸುವುದರಲ್ಲಿ ಆಸಕ್ತ, ಚಂದ್ರನಿಗೆ ಏಳಿಗೆ ಉಂಟು ಮಾಡುವುದರಲ್ಲಿ ನಿರತ (ರಾಜ ರಾಜ) ಲೀಲಾಕ್ರಮೋದಂಚಿತ ಗಾಂಗೇಯಕಂ = ಲೀಲಾವಿನೋದದಲ್ಲಿ ಹೆಚ್ಚಿನ ಸಂತೋಷದಿಂದ ತೊಡಗಿರುವ ಕುಮಾರಸ್ವಾಮಿಯನ್ನು ಕುಮಾರನಾಗಿ ಉಳ್ಳವನು, ದ್ವಿಟ್ಪುರ ಧ್ವಂಸರತ ಕ್ರೋಧಂ = ತ್ರಿಪುರಾಸುರಾದಿ ಶತ್ರುಗಳ ಪುರಗಳನ್ನು ನಾಶ ಮಾಡುವುದರಲ್ಲಿ ಆಸಕ್ತಿ ಹೊಂದಿ ಕೋಪತಾಳಿದವನು, ವೃಷಾಂಕಂ = ವೃಷಭಧ್ವಜನು, ವಿಬುಧನುತ = ದೇವತೆಗಳು ಮತ್ತು ವಿದ್ವಾಂಸರಿಂದ ಪ್ರಶಂಸಿತನಾದ, ಉಮಾಕಾಮಿನೀ ಜೀವಿತೇಶ = ಗೌರೀವಲ್ಲಭ, ಪರಮ + ಐಶ್ವರ್ಯಾಸ್ಪದಂ = ಶ್ರೇಷ್ಠವಾದ ಅಣಿಮಾದಿ ಅಷ್ಟ ಸಿದ್ಧಿಗಳಿಗೆ ಒಡೆಯ, ಯುದ್ಧ ರಂಗ ತ್ರಿಣೇತ್ರಂ = ರಣರಂಗದಲ್ಲಿ ಶತ್ರುನಾಶಕ್ಕೆ ಹಣೆಗಣ್ಣು ತೆರೆಯುವವನು, ಆದ ಶಿವನು ವಸುಧೆಯನ್ನು ರಕ್ಷಿಸಲಿ.

ಆ. **ವಿಷ್ಣು ಪರವಾಗಿ :** ಶತ್ರುಗಳ ದುರಾಸೆಯನ್ನು ನಾಶಮಾಡುವವನು, ಕಪಿಸೈನ್ಯಸಮೂಹವುಳ್ಳವನು (ನಾಗ=ಕಪಿ, ರಾಮಾವತಾರ ಸಮಯದಲ್ಲಿ) ಇಂದ್ರಾದಿ ದೇವತೆಗಳ ಮತ್ತು ಯುಧಿಷ್ಠಿರನ ರಾಜ್ಯ ಸ್ಥಾಪನೆಯಲ್ಲಿ ನಿರತನು, ಲೀಲೆಯಂತೆ ವರ್ಧಿಷ್ಣುವಾದ ಭಕ್ತಿಯ ಭೀಷ್ಮಯುಕ್ತ ಶತ್ರುಗಳ ಪುರನಾಶನದಲ್ಲಿ ಆಸಕ್ತಕೋಪವುಳ್ಳ

ಧರ್ಮಾಂಕ (ವೃಷಾಂಕ), ದೇವತೆಗಳು, ಪಂಡಿತರಿಂದ ಸುತ್ತನಾದ ಲಕ್ಷ್ಮೀ ಲೋಲ (ವಿಭುಧನುತನು + ಮಾ + ಕಾಮಿನೀ ಜೀವಿತೇಶಂ) ಪರಮ ಜ್ಞಾನವೆಂಬ ಐಶ್ವರ್ಯಯುತ, ಯುದ್ಧರಂಗದಲ್ಲಿ ರುದ್ರ ಸ್ವರೂಪಿಯಾದ ವಿಷ್ಣು ಲೋಕವನ್ನು ಕಾಪಾಡಲಿ.

೩. **ರಾಜನ ಪರವಾಗಿ :** ಶತ್ರುವಾದ ಕಾಮನೆಂಬ ರಾಜನನ್ನು ಸೋಲಿಸಿದವನು (ಕಾಮವೇ ಮೊದಲಾದ ಅರಿಷಡ್ವರ್ಗ ಗೆದ್ದವನು), ಆನೆಯ ಸೈನ್ಯವುಳ್ಳ (ನಾಗವ್ರಜಮಯಕಟಕ), ರಾಜರಾಜರೆಂಬ ಬಿರುದು ಹೊಂದಿದ್ದ ಚೋಳರಾಜನನ್ನು ನೆಲೆಗೊಳಿಸುವುದರಲ್ಲಿ ನಿರತ ಲೀಲಾವಿನೋದಿ, ಅಪಾರ ಸುವರ್ಣ ಭಂಡಾರವುಳ್ಳ (ನಿರವಧಿ ಗಾಂಗೇಯಕ), ವೈರಿಗಳ ಪುರನಾಶದಲ್ಲಿ ಆಸಕ್ತಕೋಪಿ, ಧರ್ಮಸ್ವರೂಪಿ, ಪಂಡಿತರಿಂದ ಪ್ರಶಂಸಿಸಲ್ಪಟ್ಟ, ಉಮಾದೇವಿ ಎಂಬ ರಾಣಿಯ ಪ್ರಿಯವಲ್ಲಭನೂ, ಶಿವಭಕ್ತನೂ ರಣರಂಗದಲ್ಲಿ ರುದ್ರ ಸ್ವರೂಪಿಯೂ ಆದ ಬಲ್ಲಾಳ ರಾಜನು ವಸುಧೆಯನ್ನು ಕಾಪಾಡಲಿ.

೪.ಅ. **ಸೂರ್ಯನ ಪರವಾಗಿ :** ಜನಚಿತ್ತಾಹ್ಲಾದ ಪಾದಂ = ಯಾರು, ಜನರ ಮನಸ್ಸಿಗೆ ಹರ್ಷವುಂಟು ಮಾಡುವ ತನ್ನ ಕಿರಣಗಳನ್ನು, ಧರಣಿ ಭೃತ್ + ಮಸ್ತಕನ್ಯಸ್ತ ಮಾಗಿರ್ಪಿನಂ = ಪರ್ವತಗಳನೆತ್ತಿಯ ಮೇಲೆ ಹರಡುವನೋ, ಉಚ್ಚಂಡ ಪ್ರತಾಪೋದಯಂ = ಯಾರ ಪ್ರಚಂಡವಾದ ತಾಪವು ಅರಿ + ಕುಮುದೆ + ಆಭೋಗ + ಧ್ವಂಸಿಯಾಗಿ + ಶತ್ರುವಾದ ನೈದಿಲೆಯ ವಿಸ್ತಾರವನ್ನು (ಅರಲುವಿಕೆ) ನಾಶ ಮಾಡುವುದೋ, ಉದ್ಯತ್+ ಮಂಡಲಾಗ್ರಂ = ಯಾರ ಎದ್ದು ಕಾಣುವ ಅಗ್ರಮಂಡಲವು ಸಲೆ ಘಟನಪದವೀ ಶೋಭೆಯಂ = ಆಕಾಶದ ಕಾಂತಿಯನ್ನು ಪೆರ್ಚಿಸುತ್ತಿರ್ಪಿನಂ, = ಹೆಚ್ಚಿಸುವ ರೀತಿಯಲ್ಲಿ, ಒಳ್ಪಂ + ಪೆತ್ತ = ಒಳ್ಳಿತನ್ನು ಹೊಂದಿದ ಉದಾತ್ತ, ಗೋಪ ಮಾರ್ತಂಡ ದೇವಂ = ಸೂರ್ಯದೇವನು, ಜಗಮಂ ಬೆಳಗುಗೆ = ಜಗವನ್ನು ಬೆಳಗಲಿ.

ಆ. **ರಾಜನ ಪರವಾಗಿ :** ಜನರ ಮನಸ್ಸಿಗೆ ಸಂತೋಷವುಂಟು ಮಾಡುವ ಯಾರ ಪಾದಗಳು, ತನ್ನ ಸಾಮಂತ ರಾಜರ ಶಿರಸ್ಸಿನಲ್ಲಿಡುವ ಕಾರಣ ಭೂಷಣ ಪ್ರಾಯವೋ (ಧರಣಿ ಭೃತ್ + ಮಸ್ತಕನ್ಯಸ್ತ), ಯಾರ ಪ್ರಚಂಡ ಪರಾಕ್ರಮವು ಶತ್ರುಗಳ ಕುತ್ಸಿತ ಸಂತೋಷವನ್ನು ಧ್ವಂಸ ಮಾಡುತ್ತದೋ (ಅರಿ + ಕು + ಮುದಾ + ಭೋಗ + ವಿಧ್ವಂಸಿ) ಯಾರ ಪ್ರಕಾಶಮಾನವಾದ ಖಡ್ಗವು (ಉದ್ಯನ್ಮಂಡಲಾಗ್ರಂ) ಉನ್ನತವಾದ ಪದವಿಯ ಶೋಭೆಯನ್ನು ಹೆಚ್ಚಿಸುವ ರೀತಿಯಲ್ಲಿ ಸದ್ಗುಣ ಶಾಲಿಯಾದ, ಉದಾತ್ತ (ಬಲ್ಲಾಳ) ರಾಜನು ಜಗತ್ತನ್ನು ಬೆಳಗಲಿ.

೫. ಅ. **ಗಣಪತಿಯ ಪರವಾಗಿ :** ಅರಿರೌದ್ರಂ= ಶತ್ರುಗಳಿಗೆ ಭಯಂಕರವಾದ ಕರ ದೈರ್ಘ್ಯಂ

= ಉದ್ಭವಾದ ಸೊಂಡಿಲು, ಉಲ್ಲಸದ್ = ಹೊಳೆಯುವ, ಅಹೀನ + ಅಲಂಕೃತಂ + ಮೂರ್ತಿ = ಸರ್ವಭೂಷಣದಿಂದ ಅಲಂಕೃತವಾದ ಮೂರ್ತಿ, ಸಾಕ್ಷರಸೇವ್ಯಂ = ವಿದ್ಯಾವಂತರಿಂದ ಸೇವ್ಯವಾದ, ನಿಜ ವಿದ್ಯೆ ಸಹಜ ವಿದ್ಯೆ, ವಿಶ್ವ ವಿನುತಂ (ಸ್ವೀಕೃತವಾದ ಪಾದಂ = ಜಗದ್ ವಂದ್ಯವಾದ ಪಾದ, ಸದಾಳಿ ಪ್ರಿಯಂ ವರದಾನಂ = ಸಜ್ಜನರಿಗೆ ಇಷ್ಟವಾದ ವರದಾನ ಹಾಗೂ ತುಂಬಿಗಳಿಗೆ ಪ್ರಿಯವಾದ ಉತ್ತಮ ಮದೋದಕ, ನತಭದ್ರಲಕ್ಷಣ ಪದಂ = ನಮಸ್ಕರಿಸಿದವರಿಗೆ ಮಂಗಳಕರವಾದ ಲಕ್ಷಣವುಳ್ಳವನು, ಪದ್ಮಾನುಷಂಗಿತ್ವ ಮಾಗಿರೆ = ಕಮಲದಿಂದ ಒಡಗೂಡಿದ, ಅಚ್ಚರಿಯಾದ ಪೆಂಪು = ಆಶ್ಚರ್ಯಕರವಾದ ಮಹಿಮೆ ಹೊಂದಿದ ದೇವಗಣಪನು ಭೂಮಂಡಲವನ್ನು ರಕ್ಷಿಸಲಿ.

ಆ. ರಾಜನ ಪರವಾಗಿ : ಶತ್ರುಗಳಿಗೆ ಭಯಂಕರ ಸ್ವರೂಪಿಯೂ, ಕಾಂತಿಯುಕ್ತವಾದ ದೀರ್ಘ ಬಾಹುಗಳಿಂದ ಕೂಡಿದ, ಹೀನವಲ್ಲದೆ, ಉತ್ತಮೋತ್ತಮವಾದ ಶೋಭೆಯಿಂದ ಕೂಡಿರುವ ಮೂರ್ತಿ, ವಿದ್ವಜ್ಜನರಿಂದ ಓಲೈಸಲ್ಪಟ್ಟ ಸಹಜವಿದ್ಯಾಸಂಪನ್ನ, ಜಗದ್ವಂದ್ಯಪಾದವುಳ್ಳವನು, ಸಜ್ಜನರಿಗೆ ಪ್ರಿಯವಾದ ಶ್ರೇಷ್ಠದಾನಗಳನ್ನು ನೀಡುವವನು, ಶರಣಾದವರಿಗೆ ಮಂಗಳವನ್ನುಂಟು ಮಾಡುವವನು, ಪದ್ಮಾನುಷಂಗಿತ್ವ = ಪದ್ಮಾದೇವಿಯನ್ನು ರಾಣಿಯಾಗಿ ಪಡೆದ, ಅತಿಶಯ ಕೀರ್ತಿವಂತನಾದ ಪ್ರಭು (ಬಲ್ಲಾಳನು) ಭೂಮಂಡಲವನ್ನು ಪಾಲಿಸಲಿ.

೭. ಇನಿಯಳ ಸೋಂಕಿನಂತೆ = ಪ್ರಿಯೆಯ ಆಲಿಂಗನದಂತೆ, ಜೊಂಪ = ಗೊಂಚಲು ನನೆಯೇರಿದ = ಹೂಗಳಿಂದ ತುಂಬಿದ. ಇರ್ಕುಳಿಗೊಳ್ಳು = ವಶಪಡಿಸಿಕೊಳ್ಳು

೯. ಸನ್ನಿಭ=ಸದೃಶ, ಹೋಲುವ, ಅಂಗರುಚಿ= ದೇಹಕಾಂತಿ, ಕಿಂಕಿರಾತ = ಅಶೋಕ, ಉದ್ಗಮ = ಹೊರಹೊಮ್ಮುವ, ಅರ್ಕಾಕಾರ = ಸೂರ್ಯನಂತಿರುವ, ಶಂಖದೀಧಿತಿ = ಶಂಖದ ಕಾಂತಿ, ಬಣ್ಣವುರ = ವರ್ಣಪೂರ, ಬಗೆ ಬಗೆಯ ಬಣ್ಣದ, ಅಬ್ಜೋದರ = ವಿಷ್ಣು.

೧೦. ಘನ ಮಾರ್ಗ = ಆಕಾಶ, ನಖಟಂಕಭಿನ್ನ = ಉಗುರೆಂಬ ಉಳಿಯಿಂದ ಒಡೆದ, ಅಸೃಕ್‌ಪಂಕ= ರಕ್ತದ ಕೆಸರು.

೧೧. ಬಾಣಹತಿ = ಬಾಣದ ಹೊಡೆತ, ಜಗತ್ರಿತಯ = ಮೂರು ಲೋಕಗಳು, ಸೂಟೊಳೆ = ಸರದಿಯಿಂದ, ತಿಜಿಕಲ್ಲು= ಆಟದ ಕಲ್ಲು (ಎಸೆವ) ಐರಾವಣ = ಐರಾವತವನ್ನು ಪಿಡಿದ್ದ ರಾವಣ.

೧೨. ಇಟ್ಟೊಂಡಿರೆ = ವಶಮಾಡಿಕೊಂಡಿರಲು, ನಾಕಿಗಳು = ದೇವತೆಗಳು ವಚೋವಲ್ಲಭ = ಬ್ರಹ್ಮ.

೧೩. ಹರಸಖ = ಕುಬೇರ, ಪುಷ್ಪಕ = ಪುಷ್ಪಕ ವಿಮಾನ, ನೆಗಪಿ = ಎತ್ತಿ, ಪೊಣರ್ದು = ಹೋರಾಡಿ, ವಚೋಧರ =ಬ್ರಹ್ಮ.

೧೪. ಬಳಿ = ಬಲಿ ಚಕ್ರವರ್ತಿ, ಅನಂತರ, ವಿಜ್ರಂಭಣ ಕ್ರಮದೆ = ಹೆಜ್ಜೆಯಿಡುವುದರಿಂದ, ಯಮ ಸಮಾಧಿ = ಯಮನಿಯಮಾಧಿ ಯೋಗ ಸಮಾಧಿ, ವರಂ = ಶ್ರೇಷ್ಠ, ವರ, ಬಾಣ=ಬಾಣ, ಬಾಣಾಸುರ.

೧೫. ವಾಣೀವಧೂ = ಸರಸ್ವತಿ, ಮಗಧಭೂಭೃತ್ = ಮಗಧರಾಜ, ಆಹವ=ಯುದ್ಧ, ಆಜಿ = ಯುದ್ಧ, ಉನ್ಮೂಲಿಸಿ = ಬೇರು ಸಹಿತ ಕಿತ್ತು ಹಾಕಿ.

೧೬. ಶಾಪಾದೇಶ = ಶಾಪನಿಯಮ, ಸಂಜ್ಞೆ=ಹೆಸರು.

೧೭. ಕತಿಪಯ = ಕೆಲವು, ದಿತಿಸುತರು = ರಾಕ್ಷಸರು.

೧೮. ಪೂತ = ಹೂ ಬಿಟ್ಟ, ಬಾರಿಸಲೆಂದು = ಕಳೆಯಲೆಂದು, ನಯನ ಪ್ರಭಾ = ಕಣ್ಣಕಾಂತಿ,ನೋಟ, ಪರಿಕಾಲ=ಕಾಲುವೆ, ಕೇದಾರ ವನ= ಗದ್ದೆಗಳ ಸಮೂಹ, ವಿಭೂತಿ = ಐಶ್ವರ್ಯ.

೧೯. ಭುವನ= ನೀರು, ಪಕ್ವಶಾಳಿ = ಕೊಯ್ಲಿಗೆ ಸಿದ್ಧವಾಗಿರುವ ಬತ್ತ, ಕಣೆಶಾಳಿ = ಕಾಳಿನಿಂದ ತುಂಬಿರುವ ಬತ್ತದ ತೆನೆ, ಇಳಾಶ್ರೀ = ಭೂದೇವಿ, ಪೊಂಬಟ್ಟೆ = ಪೀತಾಂಬರ.

೨೦. ಅಲರ್ದ = ಅರಳಿದ, ಅಲರ್ ಬಂಡು = ಹೂವಿನ ಮಕರಂದ, ಕಳಿಕಾರಸ = ಚಿಗುರಿನರಸ, ಆಸವ = ಮದ್ಯ, ಕರ್ದುಂಕಿ = ಕಚ್ಚಿ, ಕಂದಲ = ಚಿಗುರು, ಅಂಚೆ = ಹಂಸ.

೨೧. ಲಲಿತೇಕ್ಷಣ = ಲಲಿತವಾದ ನೋಟ, ಮರೀಚಿ = ಕಾಂತಿ, ಗಾಡಿ = ಸೊಗಸು, ಶಿಂಜಿನಿ = ಹೆದೆ, ಲತಾಂತ = ಹೂ.

೨೩. ಮಸಕ = ಕ್ರೂರವಾದ, ಇಂದುವಲೇಖೆ = ಚಂದ್ರ.

೨೪. ಅಮರಾಧ್ವ = ಆಕಾಶ, ಅಷ್ಟಮ ಚಂದ್ರ = ಮಾರಕ ಎಂಬ ಅರ್ಥದಲ್ಲಿ

೨೫. ಸೇಸೆ = ಅಕ್ಷತೆ, ಶೀರ್ಷ = ತಲೆ.

೨೬. ಬೆಸಲೆ + ಅಪ್ಪುದು = ಹೆರಲು, ತದೀಯ = ಆಕೆಯ, ಸೂತಿಕಾ ಸದನ = ಹೆರಿಗೆ ಮನೆ, ಅಂತರಿಸೆ = ದೂರಾಗಲು, ಪೆಂಪು = ಹಿರಿಮೆ, ಪೊಡರ್ಪು = ಪ್ರಕಾಶ, ಅಪಸರಣ = ಹಿಂದೆ ಸರಿಯುವುದು, ಪಾಟಿ=ಕ್ರಮ, ಕಣ್ಬರಿ = ಕಣ್ಣ ನೋಟ.

೨೭ ದಿವಿಜ = ದೇವತೆಗಳು, ಅಭಿಭವ = ಅಪಜಯ, ಅಪಮಾನ=ಮತ್ತೇ ಭವಧ = ಮದ್ದಾನೆಗಳನ್ನು ಕೊಲ್ಲುವುದು, ಪಿಪೀಲಿಕಾ = ಇರುವೆಗಳು.

೨೮. ಕಾಲಕಾಲಕೃತಿ = ಪ್ರಳಯಕಾಲದಯ ಮನಂತಿರುವ ವ್ಯಾಕುಳವೃತ್ತಿ = ದುಃಖ ಭಾವ, ಫಲಸ್ತಬಕ = ಹಣ್ಣುಳಗೊಂಚಲು ಏನಮತ್ತ ಹಸ್ತಿ = ಕಾಡಿನ ಮದ್ದಾನೆ, ಪಾಡಳಿ = ಹೀನಸ್ಥಿತಿ ತಲುಪಿದ, ಆಮ್ರದಲ್ಲಿ = ಎಳಮಾವು.

೨೯. ಚಂದ್ರಿಕೆ = ಬೆಳುದಿಂಗಳು, ಪುದುಂಗೊಳಿಸು = ಹೊಂದು, ಬೇವಸ = ಚಿಂತೆ, ಬೆಸಗೊಳ್ = ಕೇಳು.

೩೦. ಪಾರ್ದಿರ್ದ = ನಿರೀಕ್ಷಿಸುತ್ತಿದ್ದ, ಅದವಳಲು = ಸಂಕಟ.

೩೧. ಮೊಲೆಯುಂಬಬ್ಬ ಜೂಬೆಂಬ = ಮೊಲೆಯುಣ್ಣುವ, ಅಬ್ಬಬ್ಬ, ಜೂಬೆನ್ನುವ ಪರಿತಂದಪ್ಪಪ್ಪೆನ್ನುತ್ತಪ್ಪುವೊ = ಪರಿತಂದು + ಅಪ್ಪ + ಅಪ್ಪ ಎನ್ನುತ್ತ ಅಪ್ಪುವ, ಚೆಯ್ಯಾಡು = ಚಲ್ಲಾಟವಾಡು, ಮೇಲುದು = ಸೆರಗು.

೩೨. ದ್ಯುತಿಧೌತವ್ಯೋಮ = ಕಾಂತಿಯಿಂದ ಆಕಾಶವನ್ನು ಬೆಳ್ಳಗೆ ಮಾಡಿದ ಚಂಡಾಂಶು = ಸೂರ್ಯ, ಸುಧಾಸೂತಿ = ಚಂದ್ರ, ಪ್ರೋದ್ಧಾಮ = ಅತ್ಯುನ್ನತವಾದ, ಹೇಮಾಚಲ = ಮೇರುಪರ್ವತ, ಅಭಿನುತ = ಶ್ಲಾಘ್ಯವಾದ, ಅಂಭೋರಾಶಿ = ಸಾಗರ, ಲಳಿತ = ಹೊಳೆವ. ಸುರೋರ್ವೀಜ = ಕಲ್ಪವೃಕ್ಷ, ಗರ್ಜತ್ಸಿಂಹ = ಗರ್ಜಿಸುವ ಸಿಂಹ.

೩೩. ಅಂಗದ್ಯುತಿ = ದೇಹ ಕಾಂತಿ, ಚಂಚತ್ = ಅಲುಗಾಡುತ್ತಿರುವ, ಗಂಡ ಭಿತ್ತಿ = ಕೆನ್ನೆ ಪ್ರದೇಶ, ವಕ್ಷೋದೇಶ = ಎದೆಯಲ್ಲಿ, ಆಸ್ಯ = ಮುಖ, ಮೃಲಪ್ಮಾನನೆ = ಚಂದ್ರಮುಖಿ (ದೇವಕಿ).

೩೪. ಚತುರ್ಭುಜ = ವಿಷ್ಣು, ಕಂಸಸೂದನ = ಕಂಸ ನಾಶಕ, ಭವ = ಜನ್ಮ.

೩೫. ಅತಸೀಪುಷ್ಪ = ಅಗಸೆ ಹೂ, ಅವಭಾಸಂ = ಹೊಳೆಯುತ್ತಿರುವ, ಕಿಂಕಿರಾತ ಪ್ರಸೂನ = ಅಶೋಕಪುಷ್ಪ, ಪ್ರತಿಮ = ಹೋಲುವ, ಉದಿತಾರ್ಕ ಪ್ರಭ = ಬಾಲಸೂರ್ಯನಂತೆ ಹೊಳೆವ, ಪ್ರದ್ಯುತಿ = ಕಾಂತಿ, ದನುಜವಿಪಿನದಾವ = ರಾಕ್ಷಸರೆಂಬ ಕಾಡಿಗೆ ಕಾಡು ಕಿಚ್ಚಿನಂಥವನು.

೩೬. ಕಮ್ಮರಿ + ಪಾಯ್ದಂತೆ = ಜಲಪಾತದಲ್ಲಿಳಿದಂತೆ, ಕಾಳಿಂದಿ = ಯಮುನೆ ತೀವಿರ್ದ = ತುಂಬಿದ್ದ, ನೆಲೆಯಾಗೆ = ಹಿಂದೆ ಸರಿಯಲು, ದುರ್ವಾರ= ದಾಟಲಸಾಧ್ಯವಾದ.

೩೭. ಪ್ರಣಯಾಲಂಬಿನಿ = ಪ್ರೀತಿ ಇರುವವಳು, ನಿರ್ಘೃಣೆ = ನಿಷ್ಕರುಣೆ, ನೆಣ = ಕೊಬ್ಬು, ಪಿಂಡಿ ಪಿಟಿಲಿದು = ಹಿಂಡಿ ಹಿಳಿದು.

೩೯. ಕೆಡೆದ = ಕೆಳಗೆ ಬಿದ್ದಿರುವ, ಪೆಂಡಿರೊಳಂ = ಸ್ತ್ರೀಯರಲ್ಲಿಯೂ.

೪೧. ಪದುಳದೆ = ಸುಖವಾಗಿ, ಪಡಿಸಿ = ಮಲಗಿಸಿ, ಅಮಲಬೋಧ = ನಿರ್ಮಲ ಜ್ಞಾನ ಸ್ವರೂಪ.

೪೨. ಸಟಾವಳಿ = ಇಳಿಬಿದ್ದ ಕೂದಲು, ರಕ್ಕೆ = ರಕ್ಷಾಮಣಿ, ರತ್ನಚ್ಛವಿ=ರತ್ನದ ಕಾಂತಿ.

೪೩. ಅದಟು = ಚೇಷ್ಟೆ, ಪೊರಮಟ್ಟು = ಹೊರ ಹೊರಟು, ಜಡಿದು = ಗದರಿಸಿ, ದಾವು = ಹಗ್ಗ, ನಡುವಂತೊಡರ್ಚಿ = ಸೊಂಟಕ್ಕೆ ಕಟ್ಟಿ. ಉಲೂಖಲ = ಒರಳು, ಆರ್ಪೊಡೆ = ಶಕ್ತಿ ಇದ್ದರೆ.

೪೪. ಪನೆ = ಹಲ್ಲು, ಮಿರುಗಲ್ = ಹೊಳೆಯುತ್ತಿರಲು, ಮುರಿದು = ಹಂದೆ ತಿರುಗಿ, ಅಂಬಿಕೆ = ತಾಯಿ, ಯಮಾರ್ಜುನಕುಜ = ಜೋಡಿ ಶಮೀವೃಕ್ಷ.

೪೫. ಸುಖಾರ್ದ್ರ ಲೋಚನ = ಸಂತೋಷದಿಂದ ಒದ್ದೆಯಾದ ಕಣ್ಣು, ಸರೋರುಹೋದರ = ಕೃಷ್ಣ, ಬಲ್ಲಹ = ವಲ್ಲಭ, ನಿಧಾನ = ನಿಧಿ, ಎಚ್ಚು = ಚಿಮ್ಮು .

೪೬. ವಿಕ್ರಮನಾದಂದಿನ = ತ್ರಿವಿಕ್ರಮನಾಗಿದ್ದಾಗಿನ, ತಳರ್ನಡೆ = ದಟ್ಟಡಿ ಬಗೆ ಗೊಳಿಸಿದಂ = ಮನಸ್ಸಿಗೆ.

೪೭. ಗಡಣದಿಂ =ಗುಂಪಾಗಿ, ನಣ್ಬರ = ಇಂಪಾದ ದನಿ, ಉಡೆವಣೆ = ನಡುಗೆಜ್ಜೆ ಜಲ್ಪ = ತೊದಲು, ಒಡಂಬಡೆ = ಚೆನ್ನಾಗಿರಲು, ನೆಗಟಿ ಉಂಟುಮಾಡಲು.

೪೮. ಮನೆವಾಟ್ತೆ = ಮನೆಯ ಕೆಲಸ, ಪಿಂಗುವ = ಹಿಂದಿರುಗುವ.

೫೧. ಚಾರಿ ಮೆಟ್ಟುವ ಭಂಗಿ = ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕು (ನರ್ತನದ ನಡೆ), ದೋರ್ವಲ = ತೋಳು, ಮಂಜು ಮಂಜೀರ = ಸುಂದರ ಕಾಲಂದುಗೆ, ಕಂಕಣ = ಕೈ ಬಳೆ, ಕಿಂಕಿಣಿ = ಕಾಲ್ಗೆಜ್ಜೆ, ರುತಿ = ಶಬ್ದ, ವಕ್ರಿತ ಕಂಧರ = ಓರೆ ಮಾಡಿದ ಕತ್ತು, ಸ್ಮೇರವಕ್ತ್ರ = ನಗುಮುಖ, ಲಲಿತ = ಸುಂದರ, ಆಯತ = ವಿಸ್ತಾರ, ಈ ಕ್ಷಣ = ನೋಟ, ಕೈಪಱೆಗಾಡು = ಚಪ್ಪಾಳೆ ತಟ್ಟು.

೫೨. ನೀರದೋತ್ಪಲ = ಕನ್ನೈದಿಲೆ, ಚಾರುಹಾಸ ನಿವಾಸ = ಸುಂದರ ನಗುಮುಖ ದವನು, ಸುಭಗ = ಚೆಲುವ.

೫೪. ದಾರುಣಾಕೃತಿ = ಭಯಂಕರ ಆಕಾರದ.

೫೫. ಇಕ್ಕಲಾಡಿಯೆ = ಕೊಲ್ಲುವುದಕ್ಕೇ, ಕೈವಾರ = ಪ್ರಶಂಸೆ.

೫೬. ಪದಾವನತಿ = ಪಾದ ನಮಸ್ಕಾರ, ಬಾರಿಸವೇಡ = ತಡೆಯಬೇಡ.

೫೭. ಉತ್ಕೋಪ = ಅತಿ ಕೋಪ, ಔಂಡುಗರ್ಚಿ = ತುಟಿಕಚ್ಚಿ, ಕಿಸುಗಣ್ = ಕೆಂಪಾದ ಕಣ್ಣು,

೫೮. ವಕ್ತ್ರಾಂತರ = ಬಾಯಿಯ ಒಳಭಾಗ, ಕುಲೋರ್ವೀ ಧರ = ಕುಲ ಪರ್ವತ, ಈರೇಬು = ಹದಿನಾಲ್ಕು.

೫೯. ಮಿಳಿರ್ವನ್ನಂ = ಆಡಿಸುವ ಮಟ್ಟಿಗೆ, ಕುಡಿವಾಲಂ = ಎಳೆಯ ಬಾಲ, ಅವ್ವಳಿಸುವನ್ನಂ = ಆಕ್ರಮಿಸುವಂತೆ ಹಾಗೂ ಸಂತೆ, ಕೆಕ್ಕಳಿಪನ್ನಂ = ಕೆಂಪಾಗುವಂತೆ ಕೊಣಕಿಡು = ಎಗರಾಡು.

೬೦. ಅನುನಯದಿಂ = ಪ್ರೀತಿಯಿಂದ, ತಳ್ತಮರ್ದಪ್ಪಿ = ಗಟ್ಟಿಯಾಗಿ ಅಪ್ಪಿಕೊಂಡು ಪೀವರ = ದಪ್ಪ, ನಿಬಿಡ = ಒತ್ತಾದ, ದುಂಡಾದ, ಸಂಜನಿತ = ಉಂಟಾದ ಪುಲಕಾಂಗಿಯರ್ = ರೋಮಾಂಚನ ಪಡೆದ ಅಂಗವುಳ್ಳವರು

೬೧. ಗರುತ್ಮ = ಗರುಡ, ನಾಗಾರಿಕೇತು = ಗರುಡಧ್ವಜನಾದ ಕೃಷ್ಣ. ಅಮರ್ತ್ಯರು = ದೇವತೆಗಳು.

೬೨. ಪೆಡೆವಣಿ = ಹೆಡೆಯ ಮಣಿಗಳು = ಪುಗುಳ್ = ಗುಳ್ಳೆ, ಪುಯ್ಯಲ್ಬು = ಹುಯ್ಯಲಿಡು.

೬೩. ಶಿಶಿರ ಪಯಃಕಣ = ಹಿಮಜಲ ಬಿಂದುಗಳು, ಕುಶೇಶಯ = ತಾವರೆ, ಬಾಷ್ಪಜಲ
ಕಣ್ಣೀರು, ಪ್ರಶಮಿತರು ಚಿಗಳ್ = ಕಾಂತಿಯನ್ನು ಕಳೆದುಕೊಂಡ.

೬೪. ಭವದೀಯ= ನಿನ್ನ, ಮತ್ಸ್ವಾಂತ= ನಮ್ಮ ಮನಸ್ಸು, ವತ್ಸ = ಕರು, ಮಗು,

೬೫. ದೊರೆಯ = ಸಮಾನ, ದೊರೆಕೊಂಡ = ಪ್ರಾಪ್ತನಾದ ದುಃಖಾನಳ್ವಾರಿ = ದುಃಖವೆ
ಬೆಂಕಿಯ ಜ್ವಾಲೆ.

೬೬. ಹರಿ = ರವಿ, ಇಂದ್ರ, ಸಿಂಹ, ಕೃಷ್ಣ, ಪವನಾಧ್ವ = ಆಕಾಶ

೬೭. ಅಳವು + ಅಟಿದು = ಶಕ್ತಿ ಗುಂದಿ, ಸುತ್ತಟಿದ = ಸುತ್ತಿಕೊಂಡಿದ್ದನ್ನು ಬಿ
ತದೀಯ = ಅದರ.

೬೮. ಕಾದಲ್ = ಅನುರಾಗ, ಅಲರೇಱು = ಹೂವೇರಿ, ನನೆಯೇಱು = ಹೂವೇರಿ ಕಡುದ
ಸೇಱು = ತಂಪೇರಿ.

೬೯. ದಿನನಾಥ = ಸೂರ್ಯ, ವರ್ಷಾವನಿತೆ = ಮಳೆಗಾಲವೆಂಬ ಯುವತಿ, ಪೀವರ
ದಪ್ಪವಾದ, ಪಯೋಧರ = ಮೋಡ, ಸ್ತನ ವಿನತಾಂಶುಕ = ಕೆಳಕ್ಕಾದ ಕಿರಣ, ಕೆ
ಹೋದ ಬಟ್ಟೆ, ಶೌಚಿ = ಶುಚಿಂ.

೭೦. ಗಗನಶ್ರೀ = ಗಗನಲಕ್ಷ್ಮಿ, ವಿಳಸತ್ = ಹೊಳೆಯುವ, ಸಂವ್ಯಾನ = ಮೇಲು ಹೊದಿ
ರನ್ನದ ಅಗ್ಗವಣೆ = ರತ್ನಖಚಿತ ವಸ್ತ್ರ, ಅಬ್ಜಗರ್ಭಾಂಡ = ಬ್ರಹ್ಮಾಂ
ಭೂರಿಗೃಹದ್ವಾರ = ದೊಡ್ಡ ಮನೆಯ ಹೆಬ್ಬಾಗಿಲು, ಬಹುಪ್ರಭಾಶಬಳಿತ = ಅನ
ಬಗೆಯ ಕಾಂತಿಯಿಂದ ಕೂಡಿದ, ಗೀರ್ವಾಣ ಬಾಣಾಸನ = ಕಾಮನ ಬಿಲ್ಲು.

೭೧. ಸುರಗೋಪ=ಇಂದ್ರಗೋಪ, ಹರಿತಚ್ಛಾಯೆ = ಹಸಿರು ಬಣ್ಣ, ಗರುಡೋದ್ಗಾ
ಪಚ್ಚೆ = ಗರುಡಪಚ್ಚೆಯ ಮಣಿ, ಸಮೆದ = ಮಾಡಿದ, ಭೂಷಣಾನೀಕ = ಒಡವೆ
ಸಮೂಹ, ಅಂಬುದಾಗಮ ವಿಟ = ಮಳೆಗಾಲವೆಂಬ ವಿಟಪುರುಷ.

೭೨. ದರಿಗೊಂಡು = ಹಳ್ಳಗಳಲ್ಲಿ ಓಡಾಡುತ್ತ, ಈಡಿಱು =ತಿವಿ, ಆಗೆ, ಕೊಣಕು ತು
ನೆಗೆದಾಡುತ್ತ, ಎಚ್ಚುಪಾಯ್ತರೆ = ಚಿಮ್ಮಿಸುರಿಯುತ್ತಿರಲು, ಎಳಲ್ವಕರ್ಣ
ಜೋಲುಗಿವಿಗಳು, ಪೊಯ್ಯುಸುಯ್ = ಏದುಸಿರು, ಉಣ್ಮುವ = ಹೊ
ಹೊಮ್ಮುತ್ತಿರುವ, ಸೃಕ್ಕ = ಕಟ ಬಾಯಿ, ಮೆಲ್ಕೊತ್ತು = ಮೆಲುಕು ಹಾಕು.

೭೩. ಬಲ್ + ಸರಿ = ಬಲವಾದ ಮಳೆ, ತುಷಾರ = ಹಿಮ, ಇಡುಕುಂ + ಪನಿ = ಒತ್ತಾ
ಹನಿ, ತಂದಳ್ = ತುಂತುರುಮಳೆ.

೭೪. ದರಿ = ದಡ, ನೀರೊತ್ತು = ನೀರಿನ ಉಬ್ಬರ, ಪುಳಿಲ್ವಚ್ಚೆ = ಮರಳ ಮೇಲಿನ ಹ
ಗುರುತು, ಸೈವಾಳ = ಪಾಚಿ, ಮಳಲ್ದಿಂಟೆ = ಮರಳ ದಿಣ್ಣೆ, ಶರತ್ + ತಾಪ
ಶರತ್ಕಾಲದ ತಾಪ, ತರು + ಪಟಲ + ಛಾಯೆ = ಮರಗಳ ಎಲೆಗಳನೆಳ
ತತ್ತ್ವಾವಾಸ = ತತ್ತ್ವಜ್ಞ, ಸಿಂಧು ಪ್ರತಾನ = ನದಿಗಳ ಸಮೂಹ.

೭೫. ಪಿಂಗಳ = ಹೊಂಬಣ್ಣದ, ಕೆಂಪಾದ, ರಕ್ತಚಂಚು = ಕೆಂಪು ಕೊಕ್ಕು, ಪಕ್ಷ = ರೆಕ್ಕೆ, ಶಾಡ್ವಲಚ್ಛವಿ = ಹಸಿರುಬಣ್ಣ, ಕೀರ ಮಾಲೆ = ಗಿಳಿಗಳ ಸಾಲು, ರೋದೋಂಗಣ = ಗಗನ ಪ್ರದೇಶ, ಬಳ್ಳಿಮಾಡ = ಲತಾ ಗೃಹ.

೭೬. ಮದಚಳೆಯಾಗಿ ಮದಿಸಿ ಚಂಚಲೆಯಾಗಿ, ಬಳಿಲ್ಚದ = ಜಾರಿದ ಕಾಪ್ಯಕುಂಭ = ಬೆಳ್ಳಿ ಕೊಡ, ನಾಕತರಂಗಿಣಿ = ದೇವಗಂಗೆ ಘನಾಳಿ = ಮೋಡ ಸಮೂಹ, ನೀಳಾಧ್ವ = ಆಕಾಶ, ಚಂಡ = ಪ್ರಚಂಡ, ಮರೀಚಿಮಂಡಳ = ಸೂರ್ಯಮಂಡಳ.

೭೭. ಮೃಡಹಾಸ = ಈಶ್ವರನ ಹಾಸ, ಕಂತುಶರ = ಕಾಮನಬಿಲ್ಲು, ಮಹೋತ್ಪಳ = ಕಮಲ ೦ತ್ಪಳ = ನೈದಿಲೆ, ನಿಮೇಷ = ರೆಪ್ಪೆ ಮುಚ್ಚು (ಮುದುಡು) ಅನಿಮೇಷ = ಅರಳುವುದು, ಊರ್ಜತ್ + ಶ್ರೀಯ = ಅತಿಶಯವಾದ ಕಾಂತಿಯುಳ್ಳ.

೭೮. ಸಮುದಗ್ರ = ಅತಿ ಹೆಚ್ಚಾದ, ಗ್ರಾವ ವರ್ಷ = ಕಲ್ಲಿನಮಳೆ, ತುರು = ಕುದುರೆ, ಆವು = ದನ, ಕರು, ಪಡಲಿಟ್ಟು = ದಿಕ್ಕಾಪಾಲಾಗಿ, ಅದ್ರೀಂದ್ರ = ಪರ್ವತ, ಅಂಭೋನಿರ್ಝರಿ = ನೀರಿನ ಜರಿ, ಝಲ್ಲರಿ = ಜಾಲರಿ, ವಾಮ = ಎಡ, ದೋರ್ದಂಡ = ಬಾಹು, ಕಾವಾಗಿ, = ಕಾವು ಆಗಿ.

೭೯. ತೆಳ್ + ಬಸಿರ್ = ತೆಳುವಾದ ಉದರ, ಕದಳೀಪತ್ರ = ಬಾಳೆಯ ಎಲೆ ದೂರ್ವಾಂಕರು = ಎಳೆ ಗರುಕೆ.

೮೦. ನಳಿಯೆ = ಬಾಗಲು, ಪೊಡರೆ = ಅದಿರಲು, ಮಿಳಿರೆ = ಹಾರಾಡಲು, ಕೇಸಡಿ = ಕೆಂಪು ಪಾದ.

೮೧. ಅಡರ್ದು + ಎಸೆಯೆ = ಅತಿಯಾಗಿ ಶೋಭಿಸುತ್ತಿರಲು, ಆಮಳಕ ಕುಚ = ನೆಲ್ಲಿಕಾಯಿ ಗಾತ್ರದ ಕುಚ, ನಾರಂಗ = ಕಿತ್ತಳೆ, ನಳಿನೀ ಕುಟ್ಮಳ = ತಾವರೆ ಮೊಗ್ಗಿನ ಗಾತ್ರದ ಕುಚ.

೮೩. ಮುಡಿಗಟ್ಟು = ಮುಡಿಗಂಟು, ಇಂಬಾಗೆ = ಸುಂದರವಾಗಿರಲು, ನುಣ್ + ಪೀಲಿ = ನುಣುಪಾದ ನವಿಲುಗರಿ, ಕೇಯೂರ = ಭುಜ ಕಿರೀಟ, ಉಳ್ಫುಡೆ = ಕೆಳ ಉಡುಗೆ, ಗಂಡ = ಕೆನ್ನೆ, ಆಂದೋಳನ = ತೂಗಾಟ, ತ್ರಿಭಂಗ + ಅಂಗ = ತ್ರಿಭಂಗ ಭಂಗಿಯಿಂದ.

೮೪. ಓಜೆ = ಕ್ರಮ, ಜತಿ = ಯತಿ, ನಾಳಿಕೇರ ರಸ = ಎಳನೀರು, ಜೇನೆಯ್ಯಸೋನೆ = ಜೇನು ತುಪ್ಪದ ಮಳೆ, ಸುಧಾಸಾರ = ಅಮೃತದ ವೃಷ್ಟಿ, ವಾಸವ = ಇಂದ್ರ, ಮಧುರ ನಾದ + ಆವಾಸವ = ಮಧುರ ನಾದಕ್ಕೆ ಆಶ್ರಯವಾದ.

೮೫. ಸಮನಿಸಿದ = ಪ್ರಾಪ್ತವಾದ, ಒಸೆದು = ಪ್ರೀತಿಯಿಂದ, ನಿಸ್ವನ = ನಾದ

೮೬. ಮರೀಚಿ ವೀಚಿ = ಕಾಂತಿಯೆಂಬ ಅಲೆಗಳ, ಸಮೂಹ.

ರಸಾಬ್ಧಿ = ರಸ ಸಾಗರ, ಚಂದ್ರಿಕೆ = ಬೆಳ್ದಿಂಗಳು, ವಿಧು + ಉದಯ + ಸ್ಫೀತ = ಚಂದ್ರೋದಯದಲ್ಲಿ ಉಕ್ಕುವ, ಸುಧಾಬ್ಧಿ = ಕ್ಷೀರಸಾಗರ, ಪರಿಪೂರ್ಣಿಸು = ಮೊರೆಯವುದು, ರಾಸಕೇಳಿ = ರಾಸ ಕ್ರೀಡೆ.

೮೭. ಬಳಲ್ + ಮುಡಿ = ಸಡಿಲವಾದ ಮುಡಿ, ಉಗೆ = ಉದುರಲು, ಚಳ + ಅಳಕಾಳಿ
= ಚಂಚಲವಾದ ಮುಂಗುರುಳು, ಮೃಗಮದ = ಕಸ್ತೂರಿ, ತೆಂಬೆಲರು = ತೆಂಕಣಗಾಳಿ.

೮೮. ವಿನಿಗೂಢ ಸಂಭ್ರಮೆ = ಸಡಗರವನ್ನು ಹೊರಗೆ ತೋರದವಳು, ಪಾಟಲೀ +
ಲೋಲನೇತ್ರೆ = ಪಾದರಿ ಹೂವಿನಂತೆ ಕೆಂಪಾದ ಚಂಚಲ ಕಣ್ಣುಳ್ಳವಳು, ದಂತ +
ದಷ್ಟ + ಅರುಣ + ಓಷ್ಠೆ = ಹಲ್ಲುಗಳಿಂದ ಕೆಂದುಟಿ ಕಚ್ಚುವವಳು, ವಿಮುಖೀಕೃತ +
ಆಕೃತಿ = ಮುಖ ತಿರುಗಿಸಿದವಳು, ಕುಂಚಿತ + ಭ್ರೂಶಲಾಕೆ = ಹುಬ್ಬುಗಂಟು
ಹಾಕಿಕೊಂಡವಳು.

೮೯. ಶೂಲಿ = ಶಿವ, ಭಿನ್ನವಾಗಿರ್ಪ = ಬೇರೆಯಾಗಿರುವ, ಪದ್ಮ + ಪತ್ರ + ಅಂಬಕ =
ಕಮಲ ದಳನೇತ್ರ.

೯೦. ವದನ + ಚತುಷ್ಕ = ನಾಲ್ಕು ಮುಖ, ಅಕ್ಷಮಾಲಿಕೆ = ಜಪಸರ, ಅಪೂರ್ವ ವಿರಿಂಚಿ
= ಅಪೂರ್ವ ಬ್ರಹ್ಮ (ಅಭಿನವ).

೯೧. ಮುಖ ಪುರುಷ = ಯಜ್ಞಪುರುಷ ಕೃಷ್ಣ, ಅಭಿಮುಖ = ಎದುರು, ಅಘ = ಪಾಪ,
ಪರಾಙ್ಮುಖ = ಹಿಮ್ಮುಖ, ಉನ್ಮುಖ = ಎತ್ತಿದ ಮುಖ, ಆಸ್ಯ + ಅಂಭೋಜ =
ಮುಖ ಕಮಲ.

೯೨. ಮೆಯ್ಯಿಕ್ಕು = ನಮಸ್ಕರಿಸು, ನೆಗಪುಗುಮೆ = ಎತ್ತುವನೆ.

೯೩. ತಟ್ಟೈಸಿದ = ತಬ್ಬಿಕೊಂಡ, ಭುಜಪರಿಘ = ಲಾಳಮುಂಡಿಗೆಯಂಥ ತೋಳು.

೯೪. ಅವನತಿ = ನಮಸ್ಕಾರ, ಪೊರೆದ = ಹತ್ತಿದ, ಭೂರಜ = ನೆಲದಧೂಳು, ಮುಖ +
ಘರ್ಮ + ಪಯೋಲವ = ಮುಖದ ಬೆವರಿನ ನೀರ ಹನಿ.

೯೫. ಚರ = ದೂತ, ಭಾವಿಸಿ = ಯೋಚಿಸಿ.

೯೬. ಏ ತೆರದ = ಯಾವ ರೀತಿಯ, ಏಂ + ಪೊಗ್ಗೆ = ಏನು ಸಾಧ್ಯವೆ, ತ್ರಿಜಗತ್ + ತಾತ
= ಮೂರು ಲೋಕಗಳ ತಂದೆ, ಜಳಧಿಶಾಯಿ = ಸಾಗರದಲ್ಲಿ ಮಲಗಿದವನು, ಅಜಂಗೆ
= ಬ್ರಹ್ಮನಿಗೆ.

೯೭. ರೂಡಿ = ಲೋಕ, ಅಮರ + ಮಾತೃ = ದೇವಮಾತೆ ಅದಿತಿ, ಭವತ್ = ನಿನ್ನ,
ಯಶೋದೆ = ಯಶಸ್ಸು ತಂದವಳು.

೯೮. ವನಜಾತ + ಅಕ್ಷ = ಕಮಲಾಕ್ಷ; ಕೃಷ್ಣ, ಹಿಂದೋಳರವ = ಹಿಂದೋಳ ರಾಗ,
ಅಳಲಿಂದ = ದುಃಖದಿಂದ.

೯೯. ಪೊಡೆ + ಅಲರ್ + ಆತ = ಕಮಲನಾಭ, ಕೃಕ್ಷ, ನಿಟ್ಕಿ = ನಿಲುಕಿ, ಧೀಂಕಿಡುವ =
ಓಡುವ, ಧ್ವಜಾಗ್ರ = ಬಾವುಟದ ತುದಿ.

೧೦೦. ಮನೊ ಗಮ್ಯ = ಮನಸ್ಸಿಗೆ ನಿಲುಕುವವನು, ಶೌರಿ = ಕೃಷ್ಣ, ನಿಮೀಲಿತ = ಕಣ್ಣು
ಮುಚ್ಚಿಕೊಂಡು.

೧೦೧. ಎಳಸಿದ =ವ್ಯಾಪಿಸಿದ, ಅಸಿತಮೇಘ = ಕಪ್ಪು ಮೋಡ, ತುಹಿನಾಚಳ=ಹಿಮಗಿರಿ, ಬಳ = ಬಲರಾಮ, ಪೀತ = ಹಳದಿ, ಪಟ=ವಸ್ತ್ರ, ಪರಿಧಾನರ್ = ಧರಿಸಿದವರು.

೧೦೨ ಭೂಭೃತ್ = ಪರ್ವತ, ಆಯಾಮ = ವಿಸ್ತಾರ, ಪರಿಣಾಹ = ವಿಸ್ತಾರ, ಉತ್ಸೇಧ = ಔನ್ನತ್ಯ, ಷಯ + ಆಶು ಶುಕ್ಷಣಿ + ಕ್ಷೇಪ = ಪ್ರಳಯ ಕಾಲದ ಬೆಂಕಿಯ ಆಕ್ರಮಣ, ಜಲಧರ = ಮೋಡ, ತಾರ್ಕ್ಷ್ಯ=ಗರುಡ, ವಿಕ್ಷೇಪ = ಎರಗು, ಅಗುರ್ವು = ಭಯಂಕರ.

೧೦೩. ಪರಿಯಿತ್ತೆ = ಓಡಿತೆ, ನಖರ = ಉಗುರು, ಮದೀಯ = ನನ್ನ, ಸಿಂಧುರ = ಆನೆ.

೧೦೪. ಮಣಿಮತ್ = ರತ್ನ ಖಚಿತವಾದ, ರುಚಿನಿಚಯ = ಕಾಂತಿ ಸಮೂಹ, ಮುರುಚ್ಚಾಪ = ಕಾಮನ ಬಿಲ್ಲು, ಪ್ರಸ್ಫುರ = ಪ್ರಬಲ, ಬೃಂಹಣ = ಘೀಂಕಾರ, ವಜ್ರಧ್ವಾನ = ಸಿಡಿಲ ಶಬ್ದ, ತಟಿತ್ + ಜಾಲ = ಮಿಂಚಿನ ಸಮೂಹ, ದಾನ ಧಾರ = ಮದೋದಕ ಪ್ರವಾಹ, ಕ್ಷೋಣೀಚಕ್ರ = ಭೂಮಂಡಲ.

೧೦೫. ಲೀಲಾ + ಭಸ್ತ್ರಿಕೆ = ಆಟದ ತಿದಿ, ನಿಳ್ಪುವ = ಎತ್ತಿದ, ಹಸ್ತಾಭೋಗ = ಉದ್ದವಾದ ಸೊಂಡಿಲು, ಅಚಲ + ಆಭಂ = ಪರ್ವತದಂತಿರುವ.

೧೦೬. ಬೆಳ್ಕುಱ್ = ಹೆದರಲು, ಪೊಂಗೆ = ಉಬ್ಬಲು.

೧೦೭. ರದನ + ಅಗ್ರ + ದ್ವಂದ್ವ = ಎರಡು ದಂತಗಳ ತುದಿ, ಕೋಟ್ಕಿಳಂ = ದಂತಗಳನ್ನು, ಚಿಕ್ಕನೆ = ಬೇಗನೆ, ಉರ್ಚಿ = ಕಳಚಿ, ಗವಸಣಿಗೆ = ಮುಸುಕು.

೧೦೮. ಮಲ್ಲರ್ =ಜಟ್ಟಿಗಳು, ಗಿರಿಕಲ್ಪ = ಪರ್ವತ ಸಮಾನ, ಆಕುಲಾಕೃತಿ = ಚಿಂತಾಕ್ರಾಂತ, ಲಯಕಾಲ = ಪ್ರಳಯಕಾಲದ ಯಮ, ದಿತಿಚಾರಾತಿ = ಕೃಷ್ಣ.

೧೦೯. ತೊರೆವನ್ನಂ + ಕುಚಯುಗ್ಮಂ = ಸ್ತನಗಳಿಂದ ಹಾಲು ಉಕ್ಕುವಂತೆ, ಪೆತ್ತಳ್ = ಪಡೆದಳು. ಅಪತ್ಸರು = ಗಂಡು ಮಕ್ಕಳು, ಅಶೇಷ = ಸಕಲ, ಅಸ್ತ + ಅಖಿಲ + ದೈತ್ಯರು = ಸಕಲ ರಾಕ್ಷಸ ಸಂಹಾರಕರು.

೧೧೦. ಉಪಮಾತೀತ= ಹೋಲಿಕೆಗೆ ಮೀರಿದ್ದು, ಜವ=ವೇಗ, ಅಣ್ಮು=ಪೌರುಷ, ಪೊಡರ್ಪು = ಪರಾಕ್ರಮ.

೧೧೨. ಈಂಟಲ್ = ಕುಡಿಯಲು, ವಾರ್ಧಿ = ಸಮುದ್ರ, ತುತ್ತಲ್ = ಕಬಳಿಸಲು ವಿರಿಂಚಾಂಡ = ಬ್ರಹ್ಮಾಂಡ, ಮಸಕ = ಕೋಪ, ಪಲ್ಲಣಿಸು = ಅಂಬಾರಿ ಹಾಕು.

೧೧೩. ತವಂಗ = ವೇದಿಕೆ, ಮಕುಟ + ಅಗ್ರ + ಅಸಾಫಲನ = ಕಿರೀಟದ ಮೇಲೆ ಹೊಡೆ.

೧೧೫. ಗಡಿಗೆಟ್ಟು = ಮಿತಿಯಿಲ್ಲದೆ, ಎಡೆ + ಉಡುಗದೆ = ಸಂಪೂರ್ಣವಾಗಿ.

೧೧೬. ವಾಕ್ + ವಿಲಸತ್ ಕ್ರಮ = ವಾಗ್ವಿಲಾಸದ ರೀತಿ.

೧೧೭. ಅಡಿಗಿಕ್ಕಿದೆ = ತುಳಿದೆ.

೧೧೮. ಕ್ಷಮ = ಸಮರ್ಥ.

೧೧೯. ಅಸ್ಮದ್ + ಗರ್ಭಜ = ನಮ್ಮ ಗರ್ಭದಲ್ಲಿ ಹುಟ್ಟಿದವನು.

೧೨೦. ಅರವಿಂದಿನಿ = ಕಮಲ, ವಿಕಸಿಪಪ್ಪೋಲ್ = ಅರಳುವ ಹಾಗೆ.

೧೨೧. ನಿತಾಂತ = ಬಹಳವಾಗಿ, ಸ್ಫುರಯಿಸು = ಪ್ರಕಾಶಿಸು, ಅಭ್ರ = ಆಕಾಶ, ತರಂಗಿತ + ಅರ್ಣವ = ಅಲೆಗಳಿಂದ ಕೂಡಿದ ಸಮುದ್ರ.

೧೨೨. ಸುಧಾಕರ = ಚಂದ್ರ, ಆಮ್ರವಲ್ಲರಿ = ಎಳೆಮಾವಿನ ಮರ.

೧೨೩. ವಾರಾಸಿ = ಸಮುದ್ರ, ತೆರವಂತೆ = ಕಾಣಿಸುವಂತೆ, ತಾಯ್ಮಳಲ್ = ಸಮುದ್ರ ತಳದ ಮರಳು, ಬೆಂಡು ವಾರಿಸು = ಬೆಂಡಿನಂತೆ ಹಾರಿಸು ಪೋಟ್ಟಿನೋ = ಹೋಳುಮಾಡಲಿ.

೧೨೪. ಧುರ = ಯುದ್ಧ, ಒಡ್ಡು = ಸೈನ್ಯ, ಮುರವಿಧ್ವಂಸಕ = ಮುರನಾಶಕ, ಮೆಯ್ಸಿಡೆ = ಹಿಂದೆಗೆದು.

೧೨೫. ಶಬ್ದಾದ್ವೈತಂ = ಶಬ್ದಕ್ಕಿಂತ ಭಿನ್ನವಾದ್ದಲ್ಲ, ವಾದಿತ್ರ = ವಾದ್ಯ, ವ್ಯೋಮ + ಕುಕಬ್ + ದಳನ = ಆಕಾಶ ಮತ್ತು ದಿಕ್ಕುಗಳನ್ನು ಸೀಳಿ ಒಡೆಯುವುದು.

೧೨೬. ಕೋಟ್ಕೆಸರು = ತಣ್ಣನೆ ಯಕೆಸರುಪೆಣೆಲು = ಜಡೆ, ರುಂಡದ + ಅಡಕಿಲು = ರುಂಡಗಳನ್ನು ಪೇರಿಸಿರುವುದು, ನರದ ಉರ್ಬು = ನರಗಳ ದಿಣ್ಣೆ, ಕಪಾಲ = ತಲೆಬುರುಡೆ, ಬಾಳ್ ನೆಣದ + ಎಡೆ = ಹಸಿಯನೆಣದರಾಶಿ, ಖಂಡ ದಿಂಡೆ = ಮಾಂಸದ ರಾಶಿ, ಕಣಾಘಾತ = ಬಾಣದ ಹೊಡೆತು, ತವಿಸು = ನಾಶಮಾಡು.

೧೨೭. ದಶಕಂಠವೈರಿ = ಕೃಷ್ಣ, ಶೀರ್ಣತನು = ಗಾಯಗೊಂಡ ಶರೀರ, ಪ್ರಶಮಿತ + ಪರಾಕ್ರಮ = ಶಾಂತವಾದ ಪರಾಕ್ರಮ, ಅರಣ್ಯ ಗಜ= ಕಾಡಾನೆ, ಗಂಡ ಶೈಲ = ದೊಡ್ಡ ಗುಂಡು.

೧೨೮ ಅಭಿಯುಕ್ತ = ಕೂಡಿದ, ಅಭಿರಾಮ = ಮನೋಹರ, ಕೃಭೃತ್ + ಪಕ್ಷ ವಿಚ್ಛೇದನ = ಪರ್ವತಗಳ ರೆಕ್ಕೆ ಕತ್ತರಿಸಿದವನು,ಕ್ಷತ್ರಿಯರಾಜರ ವಂಶ ನಾಶ ಮಾಡಿದವ, ವಜ್ರಧರ = ಇಂದ್ರ, ಸಪ್ತಾರ್ಚಿ = ಸಪ್ತಜ್ವಾಲೆ ಉಳ್ಳವ (ಅಗ್ನಿ) (ಸಪ್ತಋಷಿಗಳನ್ನು ಪೂಜಿಸುವವನು, ಹುತವಹ = ಅಗ್ನಿ, ಸಮವರ್ತಿ = ಯಮ, (ಎಲ್ಲರ ಬಗ್ಗೆಯೂ ಸಮನಾಗಿ ವರ್ತಿಸುವವನು), ದಕ್ಷಿಣದಿಕ್ಪಾಲಕ = ಯಮ, ಪೂರ್ವದೇವ = ನೈಋತಿ, (ಪೂರ್ವಿಕನಾದ ದೇವವಿಷ್ಣು) ವನನಿವಾಸಿ = ಜಲನಿವಾಸಿ (ವನದಲ್ಲಿ ವಾಸಮಾಡುವವನು) ಪವಮಾನ = ವಾಯುದೇವ, (ಪವಿತ್ರ) ಕುರಂಗವಾಹ = ವಾಯು, ಮನುಷ್ಯ ಧರ್ಮ = ಮನುಷ್ಯ ಧರ್ಮನೆಂಬ ಹೆಸರುಳ್ಳವನು (ಕುಬೇರ) ಧನಾಧ್ಯಕ್ಷ = ಕುಬೇರ, ಕಾಮಧ್ವಂಸಿ = ಮನ್ಮಥ, ಹರ, ಶಿವ, (ಅರಿಷಡ್ವರ್ಗ = ದಲ್ಲಿ ಒಂದಾದ ಕಾಮ ಧ್ವಂಸಕ), ತ್ರಿಲೋಚನ = ಶಿವ, ಚತುರಾಸ್ಯ = ಬ್ರಹ್ಮ, (ಚಾತುರ್ಯದ ಮಾತಿನವನು ಮತ್ತು ನಾಲ್ಕು ಕಡೆಯೂ ದೃಷ್ಟಿ ಇಟ್ಟವ), ಹಿರಣ್ಯಗರ್ಭ = ಬ್ರಹ್ಮ, ತೀವ್ರತೇಜ = ತೀವ್ರತೇಜಸ್ಸುಳ್ಳ ಸೂರ್ಯ, ಉಗ್ರತೇಜಸ್ಸು) ಮಾರ್ತಂಡ = ಸೂರ್ಯ, ದ್ವಿಜರಾಜ = ನಕ್ಷತ್ರರಾಜನಾದ ಚಂದ್ರ, (ಬ್ರಾಹ್ಮಣಶ್ರೇಷ್ಠ), ಕ್ರೌಂಚಾರಾತಿ = ಕ್ರೌಂಚ ಪರ್ವತ ಕೊರೆದವ (ಷಣ್ಮುಖ), ರಾವಣನಿಗೂ ಬೇರೆ ರಾಕ್ಷಸರಿಗೂ

ಶತ್ರು, ಷಣ್ಮುಖ, ಪರಶುಧರ = ಗಂಡುಗೊಡಲಿ ಧರಿಸಿದವನು (ಗಣೇಶ) ದ್ವಿರದಾಸ್ಯ = ಗಜಮುಖ.

೧೨೯. ವಿನಮಿತ ಗಾತ್ರಂ = ದೇಹವನ್ನು ಬಾಗಿಸಿ, ಪಕ್ಷ + ಸಮೀರನ = ರೆಕ್ಕೆಯ ಗಾಳಿ.

೧೩೦. ಅವನತಿ = ತಲೆ ಬಾಗುವಿಕೆ .

೧೩೧. ಪಕ್ಷ + ಸಂಭವ + ಅನಿಳ = ರೆಕ್ಕೆಯ ಗಾಳಿಯಿಂದ ಹುಟ್ಟಿದ್ದು ಖಗೇಂದ್ರ = ಗರುಡ, ಒಡವಂದಪ = ಜೊತೆಯಲ್ಲಿ ಬರುವನು.

೧೩೨. ಭವಾದಿ ಸುಖ = ಜನ್ಮಾಂತರ ಸುಖ, ಪಯಸ್ + ಸಂಸೇವೆ = ನೀರನ್ನು ಕುಡಿದವನು, ಜನನೀಸ್ತನ್ಯ = ತಾಯ ಮೊಲೆಹಾಲು, ಜಾಹ್ನವೀ ಸಿಂಧು = ಗಂಗಾನದಿ, ಕಾಲರ್ಚಿನ = ಕಾಲ್ತುತೊಳೆದ.

೧೩೪. ಪ್ರಭೆ = ಕಾಂತಿ, ನಯನ ಭ್ರಮೆ = ಹಲವು ಕಣ್ಣುಗಳ ಭ್ರಾಂತಿ.

೧೩೫. ವಂದಿವ್ರಜ = ಹೊಗಳುಭಟ್ಟರ, ಉಲಿ = ಧ್ವನಿ, ಪಟಹಧ್ವಾನ = ಭೇರಿ ಶಬ್ದ, ಬೇಳ್ಪ = ಬೇಡುವ, ಅರ್ಥಿ = ಯಾಚಕ, ಚೆನ್ + ಪೊನ್ + ಗಳ + ರುಚಿ = ಚಿನ್ನದ ನಾಣ್ಯಗಳ ಕಾಂತಿ, ಪಾಂಸು = ಹುಡಿ, ದೊರೆ = ಅರ್ಹ.

೧೩೬. ಭವದೀಯ = ನಿನ್ನ, ಆತ್ಮಜೆ = ಮಗಳು, ತನ್ನಿಮಿತ್ತವೆ = ಆಕಾರಣವೆ? ಮೆಪ್ಪುದು = ಆಮೇಲೆ ಆಗುವ, ಅಣಂ = ಚೆನ್ನಾಗಿ, ಸವಕಟ್ಟು = ಏರ್ಪಾಟು, ಬಿಯ = ಖರ್ಚು, ವಿಭೂತಿ = ಐಶ್ವರ್ಯ.

೧೩೭. ಉರ್ವಿ = ಭೂಮಿ, ಅದ್ರಿಜೇಶ = ಶಿವ, ಪೊಡೆ ಸೆಂಡು = ಪುಟಚೆಂಡು, ಆರ್ಪ = ಸಮರ್ಥನಾಗಿರುವ.

೧೩೮. ತ್ರಿಂಶತ್ = ಮೂವತ್ತು, ಓರೊರ್ಮೆ + ಒಂದೆ ಮೆಯ್ಯಿಂ = ಒಂದೊಂದು ಸಲಕ್ಕೆ ಏಕಾಕಿಯಾಗಿ, ತವಿಸಿ = ನಾಶ ಮಾಡಿ, ತವದ = ನಾಶವಾಗದ, ದೋಃಕಂಡು = ತೋಳತೀಟೆ, ಒಡರಿಪನ್ = ಯತ್ನಿಸುತ್ತಾನೆ.

೧೩೯. ಎಱೆಯಿಸುವ = ಸ್ನಾನ ಮಾಡಿಸುವ, ಅಱಿವಟ್ಟಿಗೆ = ಧರ್ಮ ಛತ್ರ, ತೆತ್ತಿಸಿದ = ರಾಶಿ ಹಾಕಿದ, ಸೊದೆವನೆ = ಸುಧಾಗೃಹ.

೧೪೦. ರಯ = ವೇಗ, ಕ್ಷಯ ಪವನ = ಪ್ರಳಯಕಾಲದ ಗಾಳಿ, ರಕ್ತಾರ್ಚ = ರಕ್ತಬಳಿದಿರುವ.

೧೪೧. ಅಧಮುಂ + ಮಧ್ಯಮುಂ + ಊರ್ಧ್ವ-ಮುಂ = ಪಾತಾಳ-ಭೂಮಿ-ಸ್ವರ್ಗ ಪ್ರಕ್ಷೋಭಿಸಲ್ = ನಡುಗುತ್ತಿರಲು, ಯುದ್ಧ ಕೇಳಿ = ಯುದ್ಧಕ್ರೀಡೆ.

೧೪೨. ಸರದಿ = ಶರಧಿ, ಸಮುದ್ರ, ನಭದಿರಮ್ಮದ = ಆಕಾಶದ ಸಿಡಿಲು, ಸಂಹರಣ = ಪ್ರಳಯ ಕಾಲ, ಅಟ್ಟಿ = ಸುಟ್ಟು, ಮೆಯ್ಗರೆದ = ಅಡಗಿದ, ಶಿಖಾಲವ = ಚಿಕ್ಕಬೆಂಕಿ, ಗದಾ ಪರಿಘಟ್ಟನ = ಗದೆಯ ಹೊಡೆತ, ಅಧೋಕ್ಷಜ = ಕೃಷ್ಣ.

೧೪೩. ನಳಿನೀತೀರ = ತಾವರೆಕೊಳಗಳ ದಡ, ನೇರ್ಪಟ್ಟಿರಲ್= ಮಲಗಿರಲು, ಪರಿಕಾಲು =

ಹರಿಯುವ ಕಾಲುವೆ, ಕೈಸಾರೆಯೊಳ್ = ಹತ್ತಿರದಲ್ಲೇ, ಪಥಾರ್ತರು = ದಾರಿಯಲ್ಲಿ ಬಳಲಿದ.

೧೪೪. ಕೇಳೀವನ = ಕ್ರೀಡಾವನ, ಕಾಸಾರ = ಸರೋವರ, ವಾಟ = ಹೂತೋಟ ಮಾಡ = ಉಪ್ಪರಿಗೆ, ಉಪರಿ = ಚಂದ್ರಶಾಲೆ, ಪೇಶಳರು = ಸುಂದರರು.

೧೪೫. ಕಡೆಪಟ್ಟ = ಕಡೆಯದಾದ, ಪರದ = ವರ್ತಕ, ಒರೆಗಂದೊರೆಗರಂ = ಮಟ್ಟಕ್ಕೆ.

೧೪೬. ಪೊದಟ್ಕೆ = ಖ್ಯಾತಿ, ಬೊಂಬುಳಿ = ಡೋಲು, ಬಿತ್ತರ = ವಿಸ್ತಾರ, ಆರ್ಪು = ಸಾಮರ್ಥ್ಯ, ಪೊಡರ್ಪು = ಗರ್ವ, ದೇಸೆ = ಅಂದ, ಕಣಿ = ಗಣಿ.

೧೪೭. ಕುಂದ + ದರ + ಸ್ಮಿತೆ = ಮಲ್ಲಿಗೆಯ ಹೂವಿನಂಥ ಮುಗುಳ್ನಗೆಯವಳು ಮಡ = ಹಿಮ್ಮಡಿ, ಕ್ರೀಡಾ ಕಂದುಕ = ಆಟದ ಚೆಂಡು.

೧೪೮. ರಂಭಾ = ಬಾಳೆ, ಪತಿ + ಮನೋ + ಮಧೇಭ = ಪತಿಯ ಮನಸ್ಸೆಂಬ ಮದ್ದಾನೆ, ಆಲಾನಸ್ತಂಭ = ಬಂಧನ ಸ್ತಂಭ, ಸುಗತಿಸ್ತಂಭ = ನಡಿಗೆಯನ್ನು ನಿಲ್ಲಿಸುವುದು.

೧೪೯. ಪೊಣರ್ವಕ್ಕಿ = ಚಕ್ರವಾಕ ಪಕ್ಷಿ ಹಾರಮಣಿಗೆ = ಹಾರದ ಮಣಿ, ನಿಬಿಡತೆ = ಒತ್ತಾಗಿರುವುದು, ತೆಱಪು = ಅವಕಾಶ.

೧೫೦. ಪಿಂಗದ = ಕುಂದದ, ಯುಗ್ಮ = ಜೋಡಿ.

೧೫೧. ಕೈದು = ಆಯುಧ, ಇಟಿಕೆಯ್ದು = ಅಲಕ್ಷ್ಯ ಮಾಡಿ, ಅಲರಂಬು = ಪುಷ್ಪಬಾಣ, ಅತನು = ಮನ್ಮಥ, ನೀರೇಜ, ಕಮಲ, ಚೆನ್ನು + ಐದಲ್ + ಅಣಂ = ಸೌಂದರ್ಯ, ತಮ್ಮನ್ನು ಸಮೀಪಿಸಲು ಸ್ವಲ್ಪವೂ.

೧೫೨. ತಳ= ಅಂಗೈ, ಮಡಲ್ = ಕಾಂಡ, ಚೂತವಲ್ಲರಿ = ಮಾವಿನ ಬಳ್ಳಿ. ಎಕ್ಕೆಪೆಯಿಂ = ಒಟ್ಟೊಟ್ಟಾಗಿ, ಮನಃ ಕೀರ = ಮನವೆಂಬಗಿಳಿ.

೧೫೩. ಮರವಟ್ಟಳು = ಸ್ತಬ್ಧಳಾದಳು, ನೆನೆಯಿಸಿ = ನೆನಪಿಸಿ.

೧೫೪. ಅಮರ್ದು = ಅಮೃತ, ಒಳ್ದೆರೆ ಮಾಲೆ = ಒಳ್ಳೆಯ ಅಲೆಗಳ ಮಾಲೆ, ಕಣ್ಸೋಲ = ದೃಷ್ಟಿಸೋತು, ಆಲೋಲತೆ = ಚಂಚಲತೆ, ಕಟಾಕ್ಷಮಾಲೆ = ಕಡೆಗಣ್ಣನೋಟದ ಮಾಲೆ.

೧೫೫. ಭೃಂಗಮಾಲೆ = ದುಂಬಿಗಳಸಾಲು, ಲೋಲ = ಚಂಚಲ, ಪ್ರಭಾ ಮಾಲೆ = ಕಾಂತಿಮಾಲೆ, ಸಮಯೂಖ = ಕಾಂತಿ, ಏಟಿಸು = ಅಪಹಾಸ್ಯ ಮಾಡು.

೧೫೬. ಗ್ಲಾನಿ = ಚಿಂತೆ, ಬಾನಲ್ + ಪರಿದು = ಮಲಿನವಾಗಿ ಹರಿದು, ವಕ್ತ್ರ = ಮುಖ, ತಳ್ತ = ಆವರಿಸಿಕೊಂಡ, ಅಂಟಿದ, ಸುಯ್ + ಬೆಂಕೆ = ನಿಟ್ಟುಸಿರ ತಾಪ, ಇರ್ಪು = ತೇವ.

೧೫೭ ಅಳುಂಬ = ಅತಿಶಯ, ಪರೆದ = ಕೆದರಿದ, ಸಾವಗಿಸು = ಸರಿಪಡಿಸು, ಪರಿಮ್ಲಾನ = ಬಹಳ ಬಾಡಿದ, ಶೋಷಿತ = ಒಣಗಿದ, ವಿಗಳತ್ = ಸುರಿವ, ಪರಿಕಲಿತ = ಕೂಡಿದ, ತನುಲತಿಕೆ = ಬಳ್ಳಿಯಂಥ ತನು.

೧೫೮. ಪಲ್ಲವಾಸ್ತರಣ = ಚಿಗುರು ಹಾಸಿಗೆ. ಬಾಳಮೃಣಾಳ ಸಂಕುಳ = ಎಳೆಯ ಕಮಲದ ದಂಟುಗಳು, ಕದಂಬಕ = ಸಮೂಹ, ವೀಜನ = ಬೀಸಣಿಗೆ ಅರ್ಚುವ = ತೊಡಗಿಸುವ, ಕಪ್ಪುರ + ಪಚ್ಚ = ಪಚ್ಚಕರ್ಪೂರ.

೧೫೯. ಮೇಳಿಸಿ = ಗುಂಪಾಗಿ, ಪೊರ್ದಿದ = ಸಮೀಪಕ್ಕೆ ಬಂದ, ತನ್ವಿ = ಸುಂದರಿ.

೧೬೦. ಕಾಯ್ಪಿಂ = ಬಿಸಿಯಿಂದ, ಕುರಿಕು + ಎಟ್ಟುದು = ಕರಿಕಾಯಿತು, ಪೆಣ್ + ಪರಿಜು = ಹೆಣ್ಣರೂಪು, ಕಾಮಶಿಖಿ = ಕಾಮಾಗ್ನಿ.

೧೬೧. ಅಂಗಜೆ + ಅಗ್ನಿ = ಕಾಮಾಗ್ನಿ.

೧೬೨. ಚಿತ್ತಂ + ಪೊಕ್ಕು + ಇರ್ದೆ = ಮನಸ್ಸನ್ನು ಹೊಕ್ಕಿದ್ದೆ, ತಾಪಂ + ಪೆತ್ತ = ತಾಪಗೊಂಡ, ಆಳಿಯರ್ = ಸಖಿಯರು, ಆರ್ದು = ಅಬ್ಬರಿಸಿ ಎತ್ತುಂ + ಕೋಲ್ = ಮೇಲೆಳೆದ ಬಾಣಗಳು; ಅಳವೆ = ಸಾಮರ್ಥ್ಯದಲ್ಲಿದೆಯೆ.

೧೬೩. ಎನಸುಂ = ಎಷ್ಟೋ, ನಂದನ ಪತ್ರ=ನಂದನಪವನದ ಎಲೆಗಳನ್ನು, ಭೂಜಾವಳಿ = ಮರಗಳು, ಆಲವಾಲ = ಪಾತಿ.

೧೬೪. ಅಟ್ಕರಿಂ = ಅಕ್ಕರೆಯಿಂದ, ನೀರೊಳಂ + ಉರಿವ + ಒಂದು.

೧೬೫. ಸುದತಿ = ಸುಂದರಿ.

೧೬೬. ಮದನ + ಅನಳ = ಕಾಮಾಗ್ನಿ.

೧೬೭. ಸ್ನೇಹ + ಅಮೃತ + ಆರ್ದ್ರ + ಈ ಕ್ಷಣ = ಸ್ನೆಹವೆಂಬ ಅಮೃತದಿಂದ ಒದ್ದೆಯಾದ ನೋಟ, ರುಚಿನಿಚಯ = ಕಾಂತಿ ಸಮೂಹ, ತೂರ್ಯರವ = ವಾದ್ಯಧ್ವನಿ, ಕಂದರ್ಪ = ಮನ್ಮಥ, ಎಳ + ತಳಿರ್ + ಪಂದಲ್ = ಎಳೆಯ ಚಿಗುರಿನ ಚಪ್ಪರ, ಕೈನೀರ್ = ಧಾರೆಯ ನೀರು ತತ್ + ಅಲ್ಪ + ಉದರಿ = ಆ ಕೃಶಾಂಗಿ.

೧೬೮. ಅಂಗವಿಲೇಪನ = ದೇಹಕ್ಕೆ ಲೇಪಿಸಿಕೊಂಡಿದ್ದವು, ಅವಲುಪ್ತ = ಇಲ್ಲವಾಯಿತು. ಲಲಾಮ = ತಿಲಕ, ಪ್ರಸ್ತ + ಮಾಲಾಳಿ = ಹಾರಗಳು ಕಳಚಿಹೋದುವು, ಅವತಂಸ = ಶಿರೋಭೂಷಣ, ಶ್ಲಥ + ಮೇಖಲಂ ಒಡ್ಯಾಣಕಳಚಿತು, ಮಂಜೀರಕ = ಹಾರ, ಪ್ರವಿಕೀರ್ಣ = ಕೆದರು, ಕಬರಿ = ಮುಡಿ; ಆರಕ್ತನೇತ್ರ = ಕಣ್ಣು ಕೆಂಪಾಯಿತು. ಅರಾಗ + ಅಧರ = ಕೆಂಪಿಲ್ಲದ ತುಟಿ.

೧೬೯. ತಳ್ತು + ಗಂಟಿಕ್ಕಿದಂತೆ = ಸೇರಿಸಿ ಕಟ್ಟಿ ಗಂಟು ಹಾಕಿದಂತೆ, ಬೆಚ್ಚತೆರ = ಬೆಸುಗೆ ಹಾಕಿದಂತೆ.

೧೭೦. ಅಂಕುರಿಸಿ = ಮೊಳೆತು, ಮುಖಾಗ್ರ = ಬಾಯಿತುದಿ, ಪೂತುದು = ಹೂ ಬಿಟ್ಟಿತು, ದೀಧಿತಿ = ಕಾಂತಿ.

೧೭೧. ಘನಘಟಿ = ಮೋಡಗಳ ಗುಂಪು

೧೭೨. ಮನದಣ್ಮು = ಮನದಪೌರುಷ, ಮಾಂಕರಿಸೆ = ಮರ್ಮಾಘಾತ ಮಾಡು ಏಸಿಂಗೆ =

ಬಾಣದ ಹೊಡೆತಕ್ಕೆ, ಅಟಲೆದು = ಅಟ್ಟಿಕೊಂಡು ಹೋಗಿ, ಬ್ರಹ್ಮನಂದನ = ನಾರದ, ಭೌಮ = ನರಕಾಸುರ.

೧೭೩. ಪೊಣರ್ = ಹೋರಾಡು.

೧೭೪. ಮರುತ = ಗಾಳಿ, ಪಿಳ್ಳು = ಹಿಳುಕು, ಪುಂಖ, ಸುಪರ್ವರ್ = ದೇವತಗಳು ಪರ್ವಸಂಘ = ಬಾಣಕೋಲಿನ ಗೆಣ್ಣು, ಫಣಾಧರರಾಜ = ಆದಿಶೇಷ ಹವ್ಯವಾಹ = ಅಗ್ನಿ, ಅಲಗು = ಕತ್ತಿ, ಬಿಣ್ಪಾದ = ಭಾರವಾದ, ಮೌಳಿಪ್ರಭಾ + ಸ್ಫಾರ = ಕಿರೀಟದ ಕಾಂತಿಯಿಂದ ಶೋಭಿತವಾದ.

೧೭೫. ಪುರಾಣನ್ + ಅಜರನ್ = ಪುರಾಣನು, ಮುಪ್ಪಿಲ್ಲದವ.

೧೭೬. ತಲೆದೊಡವು = ತಲೆಗೆ ಮುಡಿದು, ತ್ರಿದಶೇಂದ್ರ = ದೇವೇಂದ್ರ.

೧೭೭. ಅಮರದ್ರುಮದ ಅಲರು ದೇವವೃಕ್ಷವಾದ ಪಾರಿಜಾತದಹೂ, ಇಂ= ಇನ್ನು ಮುಂದೆ, ಸಲಲ್ + ಅರಿಯದು = ನಡೆಯುವುದಿಲ್ಲ, ಉಲಿಗುಂ = ಶಬ್ದಮಾಡುತ್ತದೆ.

೧೭೮. ಮುಯ್ಯಾಂಪಳ್ = ಹೆಮ್ಮೆಪಡುವವಳು, ಬೇಡ + ಇಂ = ಇನ್ನು ಬೇಡ, ಏಕಚ್ಛತ್ರ = ಒಬ್ಬರ ಅಧೀನ, ಭೀಷ್ಮಕಸುತೆ = ರುಕ್ಮಿಣಿ.

೧೭೯. ಬಳಿರಿಪು = ಕೃಷ್ಣ.

೧೮೦. ಪೂಣ್ಕೆ = ಪ್ರತಿಜ್ಞೆ, ದಿವ್ಯಂ + ಪಿಡಿ = ದಿವ್ಯ ಪ್ರಮಾಣಮಾಡು, ಆರ್ಪರು = ಸಮರ್ಥರು.

೧೮೧. ಲೀಲಾಬ್ಜ + ಪತ್ರೋತ್ಕರ = ಲೀಲಾರ್ಥವಾಗಿ ಹಿಡಿದಿದ್ದ ಕಮಲದ ಎಲೆಗಳು ಚಿಂತಾಲತಾವೃದ್ಧಿ = ಚಿಂತೆಯ ಬಳ್ಳಿಯನ್ನು ಬೆಳೆಸುವುದು, ಪಾಂಗು = ರೀತಿ, ಬಾಷ್ಪಧಾರಾ = ಕಣ್ಣೀರ ಧಾರೆ.

೧೮೨. ಸಮಸಂದ + ಒಲ್ಮೆ = ಉಂಟಾದ ಶ್ರೇಷ್ಠ ಪ್ರೀತಿ, ಸಾಧ್ವಸಭಾವ = ಭಯದ ಭಾವ, ವಾಕ್ಯಪಕ್ರಮ = ಮಾತಿನ ಕೊಂಕು, ಇಂ = ಇನ್ನು ಮುಂದೆ, ಮಾಣ್ಬುರ್ಕೆ = ಆ ಕಡೆ ಇರಲಿ, ಅಕ್ಷಿವಿಕ್ಷೇಪಣ = ಕಡೆಗಣ್ಣ ನೋಟ.

೧೮೩. ಕೃತಕ ವೃತ್ತಿ ಕಪಟ ವರ್ತನೆ, ಅಪಚಾರರುಪಿತೆ = ಅಪಚಾರದಿಂದ ಕುಪಿತಳಾದವಳು.

೧೮೪. ಪೊಲ್ಲಮೆ = ಕೇಡು.

೧೮೫. ಕ್ರಿಯಮಪ್ಪ = ಪ್ರಿಯವಾದ, ವಾಜಾತ್ರ = ಕೇವಲ ಮಾತಿಗೆ ಪ್ರಿಯಳು ಚದುರು= ಚಾತುರ್ಯ.

೧೮೬. ಇಳಾವರ = ಭೂಕಾಂತ, ಸೋವಡಿ = ಮುಗ್ಧ, ಏನೂ ತಿಳಿಯದವನು. ಮಿಥ್ಯೋಕ್ತಿ = ಸುಳ್ಳು ಮಾತು .

೧೯೦. ವೃಥೊಕ್ತಿ = ವ್ಯರ್ಥವಾದ ಮಾತು, ಪೆಜಿಸಾರ್ = ದೂರಹೋಗು, ಭವ = ಜನ್ಮ, ಅಭಿಭವ = ಆಕ್ಷೇಪ, ಭವಾಂತರ = ಜನ್ಮಾಂತರ.

೧೯೧. ಕುಪು + ಪುರ್ಪಿ೦ = ಕೊಂಕಾದ ಹುಬ್ಬು, ಪರಪುಪ = ಪರಪುಪ, ಉದ್ಯತ್ = ಹೊಳೆಯುವ, ಮೇಖಲಾ = ಒಡ್ಯಾಣ, ಕೂಜಿತ = ಶಬ್ದ, ಅಂಘ್ರಿನ್ಯಾಸ =ಹೆಜ್ಜೆಯ ವಿನ್ಯಾಸ, ಉದ್ಯೋತ = ಹೊಳಪು, ಇಂಗಡಲು = ಕ್ಷೀರಸಾಗರ.

೧೯೨. ಅಚ್ಚಿ = ಪ್ರೀತಿ, ನಗವೈರಿ = ಇಂದ್ರ.

೧೯೩. ಅನವಧಿ ಗರ್ವ = ಮಿತಿಮೀರಿದ ಜಂಬ.

೧೯೪. ಎಡವಂಕ ಎಡಪಕ್ಕ, ನಾಕಿವ್ರಜ = ದೇವತಾ ಸಮೂಹ, ಉದ್ವೃತ್ತ = ಉದ್ಧತ, ವೃತ್ರಹಂ = ವೃತ್ರಾಸುರ ಹಂತಕ ದೇವೇಂದ್ರ.

೧೯೫. ಬಿಡೌಜ = ಇಂದ್ರ, ಕುಜ = ವೃಕ್ಷ.

೧೯೬. ಪಾರಿಜಾತಪ್ರದ = ಪಾರಿಜಾತ ಕೊಡುವುದು, ಆಧಿಪತ್ಯಸವನ = ಆಧಿಪತ್ಯಾಭಿಷೇಕ, ತತ್ + ನಗಾರಿ = ಆ ಇಂದ್ರ.

೧೯೭. ಪೌಲೋಮಿ = ಶಚಿ, ಯುಗ್ಮ = ಎರಡು.

೧೯೮. ಪ್ರಾಕೃತಮರ್ತ್ಯ = ಸಾಮಾನ್ಯಮನುಷ್ಯ, ನಾಕ ಮಹೀಜ = ದೇವ ವೃಕ್ಷ ಕುಲಿಶಾಸ್ತ್ರ = ಇಂದ್ರ, ನಿಸರ್ಗದ ಶೌರ್ಯ = ಸಹಜ ಶೌರ್ಯ .

೧೯೯. ಓಪ = ಪ್ರಿಯಕರ, ಕೌಯ್ಪು = ಕೋಪ, ಎಡೆಗೊಂಡ = ಆಶ್ರಯವಾಗಿರುವ, ಗೃಧ್ರ = ಹದ್ದು.

೨೦೦. ಉರ್ವಿಸುವ = ಭಯಂಕರವಾಗಿರುವ, ಕೇವಣ= ಕುಂದಣ, ಹರಳನ್ನು ಇರಿಸುವುದು.

೨೦೧. ವಸ್ತೂತ್ಕರ = ವಸ್ತುಸಮೂಹ, ಮತ್ಕಾಂತ ಕೃತ = ನನ್ನ ಪತಿಯು ಮಾಡಿದ, ಪ್ರಸಾದಮೆ = ಅನುಗ್ರಹವೇ.

೨೦೨. ನಿಟಲಾಕ್ಷಿ = ಹಣೆಗಣ್ಣು, ಹರಿಪ್ರಸಾದ = ಕೃಷ್ಣನ ಅನುಗ್ರಹ, ಸ್ಪೃಹನೇ = ಆಸೆ ಪಡುವವನೆ?

೨೦೩. ಉಸಿರಲ್ವೇಡ= ಹೇಳಬೇಡ, ಹೀನ + ಅಧಿಕ = ಹೀನವಾಗಿ ಅಥವಾ ಅಧಿಕವಾಗಿದ್ದರೆ, ಅಸದ್ + ಆಳಾಪ = ಅಸದ್ಭಾಷಣ, ನಿಕಾಂಯ = ಸಮೂಹ, ಮುಕುಳೌಘ = ಮೊಗ್ಗುಗಳ ಸಾಲು, ಸುರಭಿಜಾತ = ಸಂಪಗೆ, ಪರಿಮಳ + ಅನುಮಿತ = ಸುವಾಸನೆಯಿಂದ ಮಾತ್ರ ತಿಳಿಯುವಂಥದ್ದು.

೨೦೪. ಸೀರ್ + ತುಪ್ಪುಟಿ + ಊಂಬಲ್ಗಳು = ಸಣ್ಣ ರೋಮರಾಶಿ, ಪಿಕ್ಕಿ = ಬಾಚಿ.

೨೦೫. ಮೇವು + ಕೊಳ್ಳದೆ = ಮೇವು ತಿನ್ನದೆ, ಹಿಮಾನಿ = ಹಿಮಸಮೂಹ, ಇಸಲ್ + ಪದನ್ = ಹೊಡೆಯಲು ಸರಿಯಾದ ಸಂದರ್ಭ, ವಪು = ಶರೀರ, ಸಂಕೋಚ = ಮುದುರಿಕೊಳ್ಳುವುದು.

೨೦೬. ನಿಕುರುಂಬ = ಸಮೂಹ.

೨೦೭. ಇನಿಸು + ಉಗುರು + ಬೆಚ್ಚನ್ + ಅಪ್ಪ = ಸ್ವಲ್ಪ ಉಗುರು ಬೆಚ್ಚಗಿರುವ, ದವಳಾರ = ಮನೆ, ಅಂಚೆವಾಸು = ಹಂಸತೂಲಿಕಾತಲ್ಪ.

೨೦೮. ಕಳಿಕೆ = ಮೊಗ್ಗು, ಕೊನರ್ = ಮೊಳಕೆ, ಡಾಮರ = ಭಯಂಕರ, ತೋಮರ = ಗದೆ ಬಂದ ಮಾಮರ = ಫಲಿಸಿದ ಮಾವಿನಮರ.

೨೦೯. ಪೊಂಗಿ = ಉಬ್ಬಿ, ತೊಡಂಬೆ = ಗೊಂಚಲು, ನೆರಪು = ಒಟ್ಟುಗೂಡಿಸು.

೨೧೦. ತೊಡುವ + ಓತ + ಅಗಲ್ಬರ, ಪುಷ್ಪಸಾಯಕ = ಮನ್ಮಥ, ಬಿಟ್ಟು = ಬೀಜ.

೨೧೧. ತುರುಗಿ = ದಟ್ಟವಾಗಿ, ಎಲೆ ಇಕ್ಕಿದ = ಎಲೆಗಳು ಉದುರಿಹೋದ, ಪಾಟಲ + ಅವನಿಜಾತ= ಪಾದರಿಮರ, ಕರ + ದ್ಯುತಿ + ಪಲ್ಲವ = ಕಯ್ಯಕಾಂತಿಯೆಂಬ ಚಿಗುರು, ತನೂದರಿ = ಸುಂದರಿ.

೨೧೨. ಪಾರ್ಶ್ವವರ್ತಿ = ಪಕ್ಕದಲ್ಲಿದ್ದವಳು, ಕರಾಂಜಲಿ = ಕೈಬೊಗಸೆ.

೨೧೩. ಮಾಜೊಡ್ಡಿತು = ಮಾರಾಟವಾಯಿತು.

೨೧೪. ತೊರೆದ ಕುಚ = ಹಾಲಿಳಿದ ಮೊಲೆ, ಕೊಣಸು = ಜಿಂಕೆಯ ಮರಿ, ನಸೆ = ಕಾಮಾತುರತೆ, ಕುರಂಗಿ = ಹೆಣ್ಣು ಜಿಂಕೆ, ಭಲ್ಲ = ಭರ್ಜಿ, ಸಾರ್ತರಳ್ = ಹತ್ತಿರಕ್ಕೆ ಹೋಗಲು, ಅಂತರಿಸದೆ = ತಡಮಾಡದೆ, ಉಡಿ = ತುಂಡು.

೨೧೫. ಎಱಕ = ಪ್ರೀತಿ, ಅಳ್ಳಿಱಿವ = ತಿವಿಯುವ, ಬಾಳ್ = ಕತ್ತಿ, ಏಳಿಸು = ತಿರಸ್ಕರಿಸು, ಗೋಪಮಾರ್ತಾಂಡ = ಕೃಷ್ಣ.

೨೧೬. ಮೆಯ್ಯುಗೆದು = ಹಿಂದೆ ಸರಿದು, ಸಾಂದ್ರ ಧಾತುಸ್ಥಳಿ = ಒತ್ತಾದ ಸಿಂಧೂರ ಧಾತು ಸ್ಥಳಗಳು, ಹರ್ಮ್ಯ + ಓಘ + ಅಗ್ರ = ಉಪ್ಪರಿಗೆ ಮನೆಗಳ ಅಗ್ರ, ಅಸ್ತಾಚಳ + ತುಂಗ + ವ್ಯಾಘ್ರ = ಅಸ್ತಾಚಳವೆಂಬ ಉನ್ನತವಾದ ಹುಲಿ, ಜೃಂಭ + ಆವೃತ + ವದನ = ಆಕಳಿಸುತ್ತ ತೆರೆದ ಬಾಯಿ.

೨೧೭. ಒಂದದ = ಒಂದರೊಡನೊಂದು ಸೇರದ, ಸಿಂಪಿಗ = ದರ್ಜಿ.

೨೧೯. ಕ್ರತುಪುರುಷ = ಯಜ್ಞಪುರುಷ, ಶ್ರುತಿ ಪುರುಷ = ವೇದಪುರುಷ.

೨೨೧. ಪೂರ್ವದೇವ = ರಾಕ್ಷಸ, ಆದಿದೇವ.

೨೨೨. ಉಡೆದೋಲ್ = ಉಡೆ + ತೊವಲು = ಸೊಂಟಕ್ಕೆ ಧರಿಸುವ ಚರ್ಮ, ಪೀಲಿಯ ತಲೆ ಸುತ್ತು = ನವಿಲುಗರಿಯ ಕುಲಾವಿ.

೨೨೩. ಪೃಥು = ದಪ್ಪ, ನಿಕಾರ = ಧಿಕ್ಕಾರ.

೨೨೪. ಅಬುಧ = ವಿದ್ವಾಂಸನಲ್ಲದವನು.

೨೨೬. ಹರಿ = ಸಿಂಹ, ಕೃಷ್ಣ, ಕುದುರೆ, ಮಶಕ = ಸೊಳ್ಳೆ, ಸೀಕರ = ತುಂತುರು ಹನಿ

೨೨೭. ವಿಕಟ = ಭಯಂಕರ, ಭ್ರುಕುಟೀಕೃತ ಧೂಮಲೇಖೆ = ಹುಬ್ಬುಗಂಟೆಂಬ ಹೊಗೆ, ದಂಷ್ಟ್ರಾರುಚಿ ವಿಸ್ಫುಲಿಂಗ = ಕೋರೆಯ ದಾಡೆಗಳ ಹೊಳಪೆಂಬ ಕಿಡಿ; ರಸಾನಾಶಿಖಿ = ನಾಲಗೆಯೆಂಬ ಉರಿ ತುಂಡಗುಹಾಂತರ = ಬಾಯಿಯೆಂಬ ಗುಹೆ, ದುರ್ವಾರ = ನಿವಾರಿಸಲು ಕಷ್ಟಸಾಧ್ಯವಾದ, ವಾಕ್‌ಚಟಚಟತ್ಕೃತ = ಮಾತುಗಳ ಚಟಚಟತ್ಕಾರ.

೨೩೦. ಸಂಬರ = ಸಂಬಾರ (ಸಾಂಬಾರ).

೨೩೧. ಪಗರಣಿಗ = ಹಗರಣಿಗರು (ನಾಟಕದವರು).

೨೩೨. ಪಾಣ್ಬ=ಜಾರ, ಕುಟುಂಬಿನಿ = ಹೆಂಡತಿ, ಇಂಬು = ಆಶ್ರಯ.

೨೩೩. ಕಾರ್ಷ್ಣ್ಯ = ಕಪ್ಪು.

೨೩೪. ಜಗುನೆ = ಯಮುನೆ.

೨೩೬. ತೂರಲ ತುದಿ = ತುತ್ತ ತುದಿ.

೨೩೭. ಪೊನ್ನ + ಪರಿಯಣ = ಚಿನ್ನದ ಹರಿವಾಣ, ನಿಶಾಟ = ರಾಕ್ಷಸ, ಅಮತ್ರ = ತಟ್ಟೆ (ಪಾತ್ರೆ).

೨೩೮. ಕೂರ್ಪು=ಹರಿತ, ಹೃತ್ಸದನ = ಮನ್ಮಥ, ಪೂಗಣೆವೊಯ್ಯುದೋ = ಹೂಬಾಣವನ್ನು ಪಡೆಯಿತೋ, ಕಂತು ದಂತಿ = ಮನ್ಮಥನ ಆನೆ, ಪಣ್ಣಿದುದೋ ಅಣಿಯಾಯಿತೋ.

೨೩೯. ದಿಕ್ಚಕ್ರ = ದಿಗ್ಮಂಡಲ, ಮನೋರಾಗರುದ್ಧ = ಮನೋರಾಗದಿಂದ ಬದ್ಧ.

೨೪೦. ಚಪಲ + ಅಪಾಂಗೆ = ಚಂಚಲವಾದ ಕಡೆಗಣ್ಣನೋಟದವಳು, ಅಳಿ = ಸಖಿ.

೨೪೧. ಈ + ಇರ್ದನ್ = ಇಲ್ಲೇ ಇದ್ದಾನೆ, ಸ್ಫುರತ್ + ವಿದ್ಧ = ಹೊಳೆಯುವ ಚಿತ್ರ ಸಂಚಲತ್ + ಗಾತ್ರೆ = ನಡುಗುವ ಶರೀರೆ.

೨೪೩. ದೋರ್ಲತೆ = ಬಾಹುಲತೆ, ತೇರಯಿಸೆ = ಮುಂದೆ ಚಲಿಸಲು.

೨೪೪. ತೂಳಿಕೆ = ಹತ್ತಿ, ಗೋತ್ರಾದ್ರಿ= ಕುಲಪರ್ವತ ಕೋವರ ಚಕ್ರ = ಕುಂಬಾರರ ಚಕ್ರ, ಕಳಿವಣ್ = ಕಳಿತ ಹಣ್ಣು, ಶರ್ವ = ಶಿವ.

೨೪೫. ತಾರ್ಕ್ಷ್ಯ ಪತಾಕ = ಕೃಷ್ಣ, ವೃಕ್ಷಪತಾಕ = ನಂದಿಧ್ವಜನಾದ ರುದ್ರ, ಕೈವೊಯ್ಯು = ಚಪ್ಪಾಳೆ ತಟ್ಟಿ.

೨೪೬. ಎಚ್ಚು + ಉಮಾ + ಅಧಿಪನಂ = ಬಾಣ ಪ್ರಯೋಗಿಸಿ, ಶಿವನನ್ನು.

೨೪೭. ಅನಿಮಿಷರು = ದೇವತೆಗಳು, ಕವರ್ದು=ದೋಚಿ, ಆಳ್ + ಬೆಸ + ಕೆಯ್ಯಕೊಳ್ವ = ಆಳುಗಳು ಮಾಡುವ ಚಾಕರಿ ಮಾಡಿಸಿಕೊಂಡು, ಅಜಯ್ಯ = ಅಜೇಯ, ಗೆಲ್ಲಲಾಗದವನು, ತಾರಕವೀರ = ಷಣ್ಮುಖ.

೨೪೮. ಕಷ್ಟ = ಹೀನ, ಕೀಳು. ದುರ್ವಿಲಸಿತ = ದುಸ್ಥಿತಿ.

೨೪೯. ನಿಶಿತಾಯುಧ = ಹರಿತವಾದ ಆಯುಧ, ಮದ್ವಿಧರ್ = ನನ್ನಂಥವರು.

೨೫೦. ನಿರ್ಘೃಣ = ನಿಷ್ಕರುಣ, ನಿರವದ್ಯ = ಉತ್ತಮ, ಉದ್ವೃತ್ತ = ಸೊಕ್ಕಿನ.

೨೫೧. ಭುಜಗರಿಪುಧ್ವಜ = ಕೃಷ್ಣ.

೨೫೨. ಬಾಹಾವನ = ತೋಳುಗಳ ವನ, ಬಾಹುವಿತಾನ = ತೋಳುಗಳ ಸಮೂಹ, ಯುದ್ಧರಂಗಾರ್ಣವ = ಯುದ್ಧರಂಗವೆಂಬ ಸಾಗರ.

೨೫೪. ಬಿನದಂ ಸುದರ್ಶನಂ =ಸುದರ್ಶನ ಚಕ್ರ ಇಲ್ಲಿಯನತಕ ವಿನೋದಾರ್ಥವಾಗಿ ಇತ್ತು.

೨೫೯. ಅವಿತಥ = ಸತ್ಯ, ಕಣ್ಬಸ = ಕಣ್ಣಿನ ಆಸೆ.

೨೬೦. ಬೇರೆ ಕೃಷ್ಣನೆ = ಕೃಷ್ಣನೊಬ್ಬನೇ, ಅಜ್ಞಾನ ಭರ = ಅಜ್ಞಾನದ ಭಾವ.

೨೬೧. ಕೆಯ್ = ಹೊಲಗದ್ದೆ, ಅಹರ್ಪತಿ = ಸೂರ್ಯ.


ನೆರವು ಪಡೆದ ಗ್ರಂಥಗಳು

೧. ಜಗನ್ನಾಥ ವಿಜಯಂ : ಡಾ॥ ಆರ್. ಶಾಮಾಶಾಸ್ತ್ರಿ, ಪ್ರಸಾರಾಂಗ ಮೈ.ವಿ.ವಿ

೨. ಜಗನ್ನಾಥ ವಿಜಯಂ : (ಗದ್ಯಾನುವಾದ) ಎಂ.ಆರ್. ವರದಾಚಾರ್; ಕನ್ನಡ ಸಾಹಿತ್ಯ ಪರಿಷತ್ತು

೩. ರುದ್ರಭಟ್ಟ : ಗುಂಡ್ಮಿ, ಚಂದ್ರಶೇಖರ ಐತಾಳ

೪. ರುದ್ರಭಟ್ಟ ಕವಿ : ಸಂ : ಹಂಪನಾ - ಕನ್ನಡ ಸಾಹಿತ್ಯ ಪರಿಷತ್ಪ್ರಕಟಣೆ



ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು